
# "ಕ್ರಿಯಾತ್ಮಕ ನಂಬಿಕೆ"

**ಅಖಿಲ ಭಾರತ ಪತ್ರಿಕೆ**

**ಫೆಬ್ರುವರಿ – 2013**



*"Man in the world's life works out the dreams of God."*

- Sri Aurobindo

## ಅಖಿಲ ಭಾರತ ಪತ್ರಿಕೆ

**ಸಂಪಾದಕರು, ಧಾರವಾಡ**
ಡಾ॥ ಕೆ.ಎಸ್. ಆಮೂರ,
ಎಂ.ಎಸ್ಸಿ, ಪಿಎಚ್‌ಡಿ,
ಶಿವಗಿರಿ, ಧಾರವಾಡ – 580 007.
ಫೋನ್ : 0836 – 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ॥ ಗುರುಲಿಂಗ ಕಾಪಸೆ
ಡಾ॥ ಪಾರ್ವತಿ ನಾರಾಯಣರಾವ್
ಡಾ॥ ಸುಶೀಲಾ ಬಳುಂಡಗಿ

**ಡಿ.ಟಿ.ಪಿ**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ :**
ಶೇಷ ಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಕಾಶಕರು :**
ಶ್ರೀ ಅಜಿತ್ ಸಬ್ನೀಸ್,
ಕಾರ್ಯಾಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ, ಕರ್ನಾಟಕ,
"ಶ್ರೀ ಅರವಿಂದ ಮಾರ್ಗ"
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು–560078.
ಫೋನ್ : 080 – 2244 9882
http://abp.sirinudi.org

**ಬೆಲೆ : 15/–**

## ಪರಿವಿಡಿ

### "ಕ್ರಿಯಾತ್ಮಕ ನಂಬಿಕೆ"

**ಶ್ರೀಮಾತೆಯವರ ನುಡಿಗಳು**

**ಅನು : ಡಾ. ಕೆ.ಎಸ್. ಆಮೂರ**

ಕ್ರಿಯಾತ್ಮಕ ನಂಬಿಕೆ 3
ನಂಬಿಕೆ ಎಂದರೇನು? 4
ಅತ್ಯಂತ ಮಹತ್ವದ ನಿಬಂಧನೆ–ಶಿಶು ಸದೃಶ ವಿಶ್ವಾಸ 6
ಎರಡನೆಯ ನಿಬಂಧನೆ – ಸಮಗ್ರ ನಂಬಿಕೆ 8
ಮೂರನೆಯ ನಿಬಂಧನೆ – ಪರಿಶುದ್ಧ ನಂಬಿಕೆ 12
ಪರ್ವತಗಳು ಚಲಿಸುವಂತೆ ಮಾಡುವ ನಂಬಿಕೆ 14

**ಅನು : ಶ್ರೀ ಪುರುಷೋತ್ತಮ ಗಲಗಲಿ**

ನಂಬಿಕೆಯನ್ನು ಹೆಚ್ಚಿಸುವುದು ಹೇಗೆ? 16

**ಅನು : ಶ್ರೀ ವೀರೇಂದ್ರ ಸಿಂಪಿ**

ನಂಬಿಕೆ ಮತ್ತು ವಿಶ್ವಾಸ ಇವೆರಡರ ನಡುವಿರುವ ವ್ಯತ್ಯಾಸ 19

**ಶ್ರೀ ಅರವಿಂದರ ನುಡಿಗಳು**

**ಅನು : ಡಾ. ಕೆ.ಎಸ್. ಆಮೂರ**

ಶ್ರದ್ಧಾ 22
ಇದು ನಿಮಗೆ ತಿಳಿದಿತ್ತೆ? 25
ನಮ್ಮ ನಂಬಿಕೆಯ ಕೈಪಿಡಿ 28
ಮನುಷ್ಯ ತನ್ನಲ್ಲಿಯೇ ಇರಿಸಿಕೊಳ್ಳಬೇಕಾದ ನಂಬಿಕೆ 31
ಈಶ್ವರ ಮತ್ತು ದೈವೀಶಕ್ತಿ ಇವರಲ್ಲಿ ನಂಬಿಕೆ 33
ಅಕಾಲಿಕ ನಂಬಿಕೆಗಳು, ಮಿಥ್ಯೆಯಿಂದ ಕೂಡಿದ ಕೊನೆಯವೆನಿಸುವ ನಂಬಿಕೆಗಳು 35
ಸಂಶಯದ ಆವಶ್ಯಕತೆ ಹಾಗೂ ಉಪಯುಕ್ತತೆ 38
ಸಂದೇಹ ಪಡುವ ಮನಸ್ಸು 40
ಗುರುನಾನಕ ಅವರ ಶಿಷ್ಯನ ಅಚಲ ನಂಬಿಕೆ 42
ಶ್ರೀ ಅರವಿಂದರ ಮಾಂತ್ರಿಕ ನುಡಿಗಳು 45

**ವಾರ್ತಾಪತ್ರ** 47

# "ಕ್ರಿಯಾತ್ಮಕ ನಂಬಿಕೆ"

ನಿಶೆ ಬಚ್ಚಿಟ್ಟಿರುವ ರಹಸ್ಯ ಅವಳದು;
ಆತ್ಮದ ರಸವಿಜ್ಞಾನಿಯ ಚೈತನ್ಯವವಳದು,
ಅವಳು ಸುವರ್ಣ ಸೇತುವೆ, ಅದ್ಭುತ ಅಗ್ನಿ.
ದೈವೀ ಅಜ್ಞಾತವಾದುದರ ಪ್ರಕಾಶಮಯ ಹೃದಯ
ದೇವನಾಳಗಳಲಿ ನಿಶ್ಚಲ ನೀರವತೆಯ ಸಾಮರ್ಥ್ಯ;
ಅವಳು ದೈವೀ ಶಕ್ತಿ, ಅನಿವಾರ್ಯ ದೈವೀ ಶಬ್ದ
ನಮ್ಮ ಕಠಿಣ ಆರೋಹಣದ ಸೂಜಿಗಲ್ಲವಳು
ನಮ್ಮ ಸೂರ್ಯರುಗಳನು ಬೆಳಗಿಸುವ ಸೂರ್ಯ ಅವಳು
ಸಿದ್ಧಿಸಿಕೊಂಡಿರದ ವಿಸ್ತಾರಗಳಿಂದ ನಮ್ಮೆಡೆಗೆ ವಾಲುವ ದೈವೀ ಪ್ರಕಾಶ
ಅಸಾಧ್ಯವಾದುದರಿಂದ ಮೂಕ ಸನ್ನೆ ಮಾಡುವ ಸಂತೋಷ
ಇನ್ನೂ ಕೆಳಗಿಳಿದು ಬರದಿರುವುದೆಲ್ಲದರ ದೈವೀ ಸರ್ವಶಕ್ತಿ.

**ಶ್ರೀ ಅರವಿಂದರು : (ಸಾವಿತ್ರಿ : p314)**

*

## ಕ್ರಿಯಾತ್ಮಕ ನಂಬಿಕೆ

... ನೀನು ಕ್ರಿಯಾತ್ಮಕ ನಂಬಿಕೆಯ ಬಗ್ಗೆ ಮಾತನಾಡುತ್ತಿರುವಿ. ಕ್ರಿಯಾತ್ಮಕ ನಂಬಿಕೆ ಭಿನ್ನವಾದ ಏನೋ ಒಂದು. ಮನುಷ್ಯನ ಅಂತರಂಗದಲ್ಲಿ ದೈವೀಕೃಪೆಯ ಮೇಲೆ ನಂಬಿಕೆ ಇದ್ದರೆ, ದೈವೀ ಕೃಪೆ ಅವನ ಮೇಲೆ ಗಮನವಿರಿಸಿದರೆ, ಮತ್ತು ಸಂಭವಿಸುವುದು ಏನೇ ಅಗಿರಲಿ ದೈವೀ ಕೃಪೆ ತನ್ನ ಮೇಲೆ ಗಮನವಿರಿಸುತ್ತ ಅಲ್ಲಿದೆ ಎಂಬ ಭಾವನೆ ಅವನಲ್ಲಿದ್ದರೆ ಅದರೊಂದಿಗೆ ಅವನು ಎಲ್ಲ ಅಪಾಯಗಳೊಳಗಿಂದ ಹಾಯ್ದು ಹೋಗಬಲ್ಲನು, ಎಲ್ಲ ತೊಂದರೆಗಳನ್ನು ಎದುರಿಸಬಲ್ಲನು ಮತ್ತು ಯಾವುದೂ ಅಲುಗಾಡದು, ಏಕೆಂದರೆ ನಂಬಿಕೆ ನಿಮ್ಮಲ್ಲಿದೆ, ದೈವೀ ಕೃಪೆ ನಿಮ್ಮೊಂದಿಗಿದೆ. ಅದು ಅನಂತಪಟ್ಟು ಬಲವತ್ತರವಾದದ್ದು, ಹೆಚ್ಚು ಪ್ರಜ್ಞೆಯುಳ್ಳದ್ದು, ಬಹಳ ಕಾಲ ಉಳಿದುಕೊಳ್ಳುವಂತಹ ಶಕ್ತಿ, ಅದು ನಿಮ್ಮ ಶಾರೀರಿಕ ಸ್ಥಿತಿಗಳ ಮೇಲೆ ಅವಲಂಬಿಸಿರುವುದಿಲ್ಲ ಮತ್ತು ಹಾಗಾಗಿ ಅದು ದೈವೀ ಸತ್ಯದತ್ತ ವಾಲಿರುತ್ತದೆ, ಅದನ್ನು ಯಾವುದೂ ಅಲುಗಾಡಿಸಲಾರದು.

**(5/298)** **– ಶ್ರೀಮಾತೆ**

*



## ನಂಬಿಕೆ ಎಂದರೇನು?

ಯಾವ ರುಜುವಾತು (proof)ಇಲ್ಲದ ನಿಶ್ಚಿತತೆಯೇ ನಂಬಿಕೆ.

*

ನಂಬಿಕೆ ಒಂದು ನಿಶ್ಚಿತತೆ, ಅದು ಅವಶ್ಯವಾಗಿ ಅನುಭವ ಮತ್ತು ಜ್ಞಾನದ ಆಧಾರ ಹೊಂದಿರುವುದಿಲ್ಲ.

*

ಚೈತ್ಯದಲ್ಲಿರುವ ಸ್ವಯಂಪ್ರೇರಿತ ಜ್ಞಾನ ನಂಬಿಕೆ.

*

ಭೌತಿಕ ಪ್ರಮಾಣಗಳ ಮೇಲೆ ಆಧಾರಿತವಾದ ನಂಬಿಕೆ ನಿಜವಾದ ನಂಬಿಕೆ ಅಲ್ಲ – ಅದು ಚೌಕಾಶಿ ಮಾಡುವುದಾಗಿದೆ.

*

ಅಂಧಕಾರದ ದಿನಗಳಲ್ಲಿ ನಂಬಿಕೆ ಅತ್ಯಂತ ಖಚಿತ ಮಾರ್ಗದರ್ಶನ ಮಾಡುತ್ತದೆ.

*

ಪ್ರತಿಯೊಂದು ಕ್ಷಣದಲ್ಲಿ ಪೂರ್ವಭಾವಿಯಾಗಿ ಊಹಿಸಲಾಗದ, ಅನಿರೀಕ್ಷಿತ, ಅಜ್ಞಾತವಾದ ಸಂಗತಿ ನಮ್ಮೆದುರಿಗೆ ಇರುತ್ತದೆ – ನಮಗೆ ಏನು ಸಂಭವಿಸುತ್ತದೆ ಎಂಬುದು ಹೆಚ್ಚಾಗಿ ನಮ್ಮ ನಂಬಿಕೆ ಮತ್ತು ಪರಿಶುದ್ಧತೆಗಳ ಗಾಢತೆಯ ಮೇಲೆ ಅವಲಂಬಿಸಿರುತ್ತದೆ.

*

ನಮ್ಮ ನಂಬಿಕೆಯಲ್ಲಿರುವ ಕೊರತೆ ನಮ್ಮ ಸೀಮಿತತೆಗಳನ್ನು ಸೃಷ್ಟಿಸುತ್ತದೆ.

*

ಪರಮೋಚ್ಚನ ಸಾಮರ್ಥ್ಯ ಅನಂತವಾಗಿದೆ – ನಮ್ಮ ನಂಬಿಕೆ ಚಿಕ್ಕದಾಗಿರುತ್ತದೆ.

*

ಕೊನೆಯ ವಿಶ್ಲೇಷಣೆಯಲ್ಲಿ, ದೈವೀ ಕೃಪೆಯಲ್ಲಿ ಪರಿಪೂರ್ಣ ನಂಬಿಕೆ ಹಾಗೂ ವಿಶ್ವಾಸ ಹೊಂದಿರುವುದು ಪರಮೋಚ್ಚ ವಿವೇಕವಾಗಿರುತ್ತದೆ.

*

"ಪ್ರತಿಯೊಂದೂ ಕೆಟ್ಟದ್ದಾಗಿದೆ, ಇನ್ನೂ ಹೆಚ್ಚು ಕೆಟ್ಟದ್ದಾಗುವತ್ತ ಸಾಗುತ್ತಿದೆ ಎಂದು ಕಂಡ ಬಂದ ಕ್ಷಣದಲ್ಲಿ ನಾವು ನಂಬಿಕೆಯನ್ನಿರಿಸಿಕೊಳ್ಳುವ ಪರಮೋಚ್ಚ ಕ್ರಿಯೆಯನ್ನು ಕೈಕೊಳ್ಳಬೇಕು ಮತ್ತು ದೈವೀ ಕೃಪೆ ನಮ್ಮನ್ನು ಎಂದಿಗೂ ಕೈಬಿಡುವುದಿಲ್ಲ ಎಂಬುದನ್ನು ತಿಳಿದುಕೊಳ್ಳಬೇಕು."

ಇದರರ್ಥ, ಪರಿಣಾಮಗಳತ್ತ ಗಮನ ಹರಿಸದೆ, ನಮ್ಮ ಆಂತರಿಕ ಮನವರಿಕೆಯ ಪ್ರಕಾರ ಕಾರ್ಯ ಕೈಕೊಳ್ಳಬೇಕು ಮತ್ತು ಅವುಗಳನ್ನು ಕುರಿತು ತೋರಿಕೆಗೆ ವಿರುದ್ಧವಾದ ಪ್ರಮಾಣಗಳೆಂದು ಕರೆಯಲಾದವುಗಳು ಏನೇ ಆಗಿದ್ದರೂ ನಮ್ಮ ನಂಬಿಕೆಯನ್ನು ಅಲುಗಾಡದಂತೆ ಇಟ್ಟುಕೊಳ್ಳಬೇಕು.

*

ಪರಿಪೂರ್ಣ ಶಾಂತಿ ಹಾಗೂ ಸ್ಥಿರತೆಗಳಿಂದ ಮತ್ತು ದೈವೀ ಕೃಪೆಯಲ್ಲಿ ಅಲುಗಾಡದ ಗಾಢ ನಂಬಿಕೆ ಹಾಗೂ ವಿಶ್ವಾಸಗಳನ್ನಿಟ್ಟುಕೊಂಡು ಉಳಿದು ಕೊಳ್ಳುವುದರಿಂದ ಮಾತ್ರ ಪರಿಸ್ಥಿತಿಗಳು ಸಾಧ್ಯವಿದ್ದಷ್ಟು ಒಳ್ಳೆಯವಾಗಲು ನೀವು ಅನುವು ಮಾಡಿಕೊಡುವಿರಿ. ಇಡೀ ವಿಶ್ವಾಸವನ್ನು ಭಗವಂತನಲ್ಲಿ ಮಾತ್ರ ಇರಿಸಿದಾಗ ಯಾವಾಗಲೂ ಅತ್ಯಂತ ಒಳ್ಳೆಯದು ಸಂಭವಿಸುತ್ತದೆ.

*

ಶಾಂತಿಯನ್ನು, ವಿವೇಕವನ್ನು ತಂದುಕೊಳ್ಳಲು ಮನುಷ್ಯ ಶಾಂತನಾಗಿರಬೇಕು, ವಿವೇಕಿಯಾಗಿರಬೇಕು. ನೀನು ದುರ್ಬಲನಾಗಿರುವೆ ಎಂದು ಹೇಳುತ್ತೀ. ಆದರೆ ನೀನು ಕೇವಲ ನಿನ್ನ ಶಕ್ತಿಯ ಮೇಲೆ ಅವಲಂಬಿಸಿಕೊಂಡಿರು ಎಂದು ನಿನಗೆ ಯಾರೂ ಹೇಳುವುದಿಲ್ಲ. ನಿನ್ನ ಶಕ್ತಿ, ನಿನ್ನ ವಿವೇಕ ಮತ್ತು ನಿನ್ನ ಶಾಂತಿ ಭಗವಂತನಿಗೆ ಸೇರಿದವುಗಳಾಗಿವೆ ಮತ್ತು ನೀನು ಆವನನ್ನು ಮಾತ್ರ ನೆಚ್ಚಿ ಕೊಂಡಿರಬೇಕು. ದೈವೀ ಕೃಪೆಯಲ್ಲಿ ಪರಿಪೂರ್ಣ ವಿಶ್ವಾಸವನ್ನಿರಿಸು, ನಿನ್ನ ಚಿಕ್ಕ ವ್ಯಕ್ತಿವಿಶಿಷ್ಟತೆಯನ್ನು ಬದಿಗಿರಿಸು, ದೈವೀ ಕೃಪೆ ಕಾರ್ಯಮಾಡಲು ಅನುವು ಮಾಡಿಕೊಡು. ಆವಶ್ಯವಾಗಿ ನೀನು ಮಾಡಬೇಕಾದದ್ದನ್ನು ಕೈಕೊಳ್ಳುವಂತೆ ಅದು ಮಾಡುವುದು ಮತ್ತು ಎಲ್ಲವೂ ಒಳ್ಳೆಯದಾಗುವುದು.



ಹೌದು, ದೈವೀ ಕೃಪೆಯಲ್ಲಿ ನಂಬಿಕೆ ಯಾವಾಗಲೂ ತನ್ನ ಮಧ್ಯಸ್ಥಿಕೆ ಇರುವಂತೆ ಮಾಡುತ್ತದೆ.

ದೈವೀ ಕೃಪೆ ಮತ್ತು ಸಹಾಯಗಳಿಗಾಗಿ ಅಭೀಪ್ಸೆ ಪಡುವವರೆಲ್ಲರಿಗೂ ಅವು ಯಾವಾಗಲೂ ಅಲ್ಲಿರುತ್ತವೆ ಮತ್ತು ಆವುಗಳನ್ನು ಗಾಢ ನಂಬಿಕೆಯಿಂದ ಸ್ವೀಕರಿಸಿದಾಗ ಅವುಗಳ ಸಾಮರ್ಥ್ಯ ಸೀಮಾತೀತವಾಗಿರುತ್ತದೆ.

**(14/82, 83, 80, 89, 90, 94, 87)** **– ಶ್ರೀಮಾತೆ**

*

## ಅತ್ಯಂತ ಮಹತ್ವದ ನಿಬಂಧನೆ – ಶಿಶು ಸದೃಶ ವಿಶ್ವಾಸ

ಅತ್ಯಂತ ಮಹತ್ವದ ನಿಬಂಧನೆ ಎಂದರೆ ಬಹುಮಟ್ಟಿಗೆ ಶಿಶು ಸದೃಶ ವಿಶ್ವಾಸ ವಿರುವುದು, ಮಗುವೊಬ್ಬನ ಬಿಚ್ಚು ಮನಸ್ಸಿನ ವಿಶ್ವಾಸ, ಅವನಿಗೆ ಏನಾದರೂ ಬೇಕಾದಾಗ ಅದು ಬರುವುದೆಂಬ ನಿಶ್ಚಿತತೆ ಅವನಲ್ಲಿರುತ್ತದೆ, ಅದನ್ನು ಕುರಿತು ತನಗೇ ಪ್ರಶ್ನೆ ಕೇಳುವುದಿಲ್ಲ. ಸರಿ, ಇದು ಈ ಬಗೆಯ ವಿಶ್ವಾಸವಿರುವುದು – ಇದು ನಿಜವಾಗಿ ಬಹಳ ಮಹತ್ವದ ನಿಬಂಧನೆ.

ಅಭೀಪ್ಸೆ ಪಡುವುದು ಅತ್ಯಗತ್ಯವಾದದ್ದು, ಆದರೆ ಕೆಲವು ಜನರು ನಂಬಿಕೆ ಮತ್ತು ಅಪನಂಬಿಕೆ, ವಿಶ್ವಾಸ ಮತ್ತು ಅವಿಶ್ವಾಸ, ಜಯ ನಿಶ್ಚಿತವೆಂಬ ಆಶಾವಾದ ಮತ್ತು ಅನಾಹುತ ಯಾವಾಗ ಬರಬಹುದು ಎಂಬ ನಿರಾಶಾವಾದ ಇವುಗಳ ನಡುವೆ ಸಂಘರ್ಷವನ್ನಿರಿಸಿಕೊಂಡು ಅಭೀಪ್ಸೆ ಪಡುತ್ತಾರೆ. ಇದು ಸತ್ತೆಯಲ್ಲಿದ್ದರೆ ನೀವು ಅಭೀಪ್ಸೆ ಪಡಬಹುದು, ಆದರೆ ನೀವು ಏನನ್ನೂ ದೊರಕಿಸಲಾರಿರಿ. ಮತ್ತು ನೀವು "ನಾನು ಅಭೀಪ್ಸೆಪಟ್ಟೆ, ಆದರೆ ಏನನ್ನೂ ದೊರಕಿಸಲಾಗಲಿಲ್ಲ" ಎಂದು ಹೇಳುತ್ತೀರಿ. ಅದು ಹಾಗಿರುವುದು ಏಕೆಂದರೆ ನೀವು ಎಲ್ಲ ಕಾಲದಲ್ಲಿ ನಿಮ್ಮ ಗಾಢ ನಂಬಿಕೆಯಲ್ಲಿರುವ ಕೊರತೆಯಿಂದ ಅಭೀಪ್ಸೆಯನ್ನು ನಾಶ ಮಾಡುತ್ತೀರಿ. ಆದರೆ ನಿಜವಾಗಿ ನಿಮ್ಮಲ್ಲಿ ವಿಶ್ವಾಸವಿದ್ದರೆ... ಮಕ್ಕಳನ್ನು ಅವರಷ್ಟಕ್ಕೆ ಅವರಿರುವಂತೆ ಬಿಟ್ಟುಕೊಟ್ಟರೆ ಮತ್ತು ಅವರು ಹಿರಿಯರಿಂದ ವಿರೂಪಕ್ಕೊಳಗಾಗದಿದ್ದರೆ ಅವರಲ್ಲಿ ಎಂತಹ ಶ್ರೇಷ್ಠ ವಿಶ್ವಾಸವಿರುತ್ತದೆಂದರೆ ಎಲ್ಲವೂ ಒಳ್ಳೆಯದಾಗುವುದು. ಉದಾಹರಣೆಗೆ ಆವರು ಚಿಕ್ಕದೊಂದು ಅಪಘಾತಕ್ಕೀಡಾದಾಗ, ಅದು ಗಂಭೀರವಾದ ಏನೋ ಒಂದೆಂದು ಅವರು ಯೋಚಿಸುವುದಿಲ್ಲ, ಅದು ಅಲ್ಪ ಕಾಲದಲ್ಲಿ ವಾಸಿಯಾಗುತ್ತದೆಂಬ ಸ್ವಯಂಪ್ರೇರಿತ ಮನವರಿಕೆ ಹೊಂದಿರುತ್ತಾರೆ

ಮತ್ತು ಇದು ಆ ವಿಷಯಕ್ಕೆ ಕೊನೆ ಹೇಳುವುದಕ್ಕೆ ಸಾಮರ್ಥ್ಯಪೂರ್ಣವಾಗಿ ಸಹಾಯ ಮಾಡುತ್ತದೆ.

ಸರಿ, ಮನುಷ್ಯ ದೈವೀಶಕ್ತಿಗಾಗಿ ಅಭೀಪ್ಸೆಪಟ್ಟಾಗ, ಭಗವಂತನಿಂದ ಸಹಾಯ ಕೇಳಿದಾಗ, ಅದು ಬರುವುದೆಂಬ ಅಲುಗಾಡದ ನಿಶ್ಚಿತತೆಯಿಂದ ಕೇಳಿಕೊಂಡದ್ದಾದರೆ ಅದು ಬರದೆ ಇರುವುದು ಅಸಾಧ್ಯವಾದದ್ದು, ಅದು ನಿಶ್ಚಿತವಾಗಿ ಬರುತ್ತದೆ. ಅದು ಈ ಬಗೆಯದು ... ಹೌದು, ಇದು ನಿಜವಾಗಿ ಆಂತರಿಕ ತೆರೆದಿರಿಸಿಕೊಳ್ಳುವಿಕೆ, ಅದು ವಿಶ್ವಾಸದಿಂದ ಇರುವುದಾಗಿರುತ್ತದೆ. ಕೆಲವು ಜನರು ಸತತ ಈ ಸ್ಥಿತಿಯಲ್ಲಿಯೇ ಇರುತ್ತಾರೆ, ಸ್ವೀಕರಿಸಬೇಕಾದ ಏನೋ ಒಂದಿದ್ದಾಗ, ಅದನ್ನು ಸ್ವೀಕರಿಸಲು ಅವರು ಅಲ್ಲಿರುತ್ತಾರೆ. ಇನ್ನಿತರರಿದ್ದಾರೆ, ಹೊಂದಬೇಕಾದ ಏನೋ ಒಂದಿದ್ದಾಗ, ಶಕ್ತಿಯೊಂದು ಅವತರಣ ಮಾಡುತ್ತಿದ್ದಾಗ ಅವರು ಅಲ್ಲಿ ಉಪಸ್ಥಿತರಿರುವುದಿಲ್ಲ. ಆ ಕ್ಷಣದಲ್ಲಿ ಅವರು ಯಾವಾಗಲೂ ತಮ್ಮಲ್ಲಿ ಮುಚ್ಚಿ ಹಾಕಿಕೊಂಡಿರುತ್ತಾರೆ, ಅದು ಹಾಗಿರುವಾಗ ಶಿಶು ಸದೃಶ ವಿಶ್ವಾಸವಿದ್ದವರು ಯಾವಾಗಲೂ ಸರಿಯಾದ ಸಮಯದಲ್ಲಿ ಹಾಜರಿರುತ್ತಾರೆ.

ಇದು ವಿಚಿತ್ರವಾದದ್ದು, ಅಲ್ಲವೆ? ಬಾಹ್ಯದಲ್ಲಿ ಯಾವ ವ್ಯತ್ಯಾಸವೂ ಇರುವುದಿಲ್ಲ. ಅವರಲ್ಲಿ ನಿಖರವಾಗಿ ಅದೇ ಸದ್ಭಾವನೆ, ಅದೇ ಬಗೆಯ ಅಭೀಪ್ಸೆ ಇರಬಹುದು, ಒಳ್ಳೆಯದನ್ನು ಮಾಡುವ ಒಂದೇ ಬಗೆಯ ಅಭೀಪ್ಸೆ ಇರಬಹುದು. ಆದರೆ ಈ ಹಸನ್ಮುಖದ ಗಾಢ ನಂಬಿಕೆಯನ್ನು ತಮ್ಮ ಅಂತರಂಗದಲ್ಲಿ ಇರಿಸಿಕೊಂಡವರು ಪ್ರಶ್ನೆ ಕೇಳುವುದಿಲ್ಲ, ತಮಗೆ ಅದು ದೊರಕುವುದೋ, ಇಲ್ಲವೋ ಎಂದು ತಮ್ಮನ್ನೇ ಕೇಳುವುದಿಲ್ಲ, ಭಗವಂತ ಉತ್ತರ ನೀಡುವನೋ ಇಲ್ಲವೋ – ಆ ಪ್ರಶ್ನೆ ಉದ್ಭವಿಸುವುದಿಲ್ಲ, ಅದು ಅರ್ಥಮಾಡಿಕೊಂಡ ವಿಷಯವಾಗಿರುತ್ತದೆ.... "ನನಗೆ ಅವಶ್ಯವಿದ್ದದ್ದನ್ನು ಕೊಡಲಾಗುತ್ತದೆ, ನಾನು ಪ್ರಾರ್ಥನೆ ಮಾಡಿದರೆ ನನಗೆ ಉತ್ತರ ದೊರಕುತ್ತದೆ, ನಾನು ತೊಂದರೆಯಲ್ಲಿದ್ದಾಗ ಮತ್ತು ಸಹಾಯ ಯಾಚಿಸಿದಾಗ ಅದು ದೊರಕುತ್ತದೆ – ಅದು ಬರುವುದಷ್ಟೇ ಅಲ್ಲ, ಪ್ರತಿಯೊಂದನ್ನೂ ನಿರ್ವಹಿಸುತ್ತದೆ." ಸ್ವಯಂಪ್ರೇರಣೆಯ, ಬಿಚ್ಚು ಮನಸ್ಸಿನ, ಪ್ರಶ್ನಿಸದ ವಿಶ್ವಾಸವಿದ್ದರೆ, ಅದು ಬೇರೆ ಯಾವುದಕ್ಕಿಂತಲೂ ಹೆಚ್ಚು ಒಳ್ಳೆಯ ರೀತಿಯಲ್ಲಿ ಕಾರ್ಯ ಮಾಡುತ್ತದೆ ಮತ್ತು ಪರಿಣಾಮಗಳು ಅದ್ಭುತವಾಗಿರುತ್ತವೆ. ಮನಸ್ಸಿನ ವೈರುಧ್ಯಗಳು, ಸಂಶಯಗಳು ಇವುಗಳಿಂದ ಮನುಷ್ಯ ಎಲ್ಲವನ್ನೂ ಹಾಳುಮಾಡುತ್ತಾನೆ. ತೊಂದರೆಗಳಲ್ಲಿದ್ದಾಗ ಬರುವ ಯೋಚನೆಗಳು:– "ಓ, ಇದು ಅಸಾಧ್ಯವಾದದ್ದು! ಅದನ್ನು ನಾನೆಂದಿಗೂ ನಿರ್ವಹಿಸಲಾರೆ. ಅದು ಉಲ್ಬಣಗೊಳ್ಳುವುದಿದ್ದರೆ,



ನನಗಿಷ್ಟವಿರದ ಈ ಸ್ಥಿತಿ ಇನ್ನೂ ಹೆಚ್ಚು ಕೆಟ್ಟದಾಗಿ ಬೆಳೆಯುತ್ತ ಹೋಗುವುದು, ನಾನು ಮುಂದೆ, ಮುಂದೆ ಜಾರಿಹೋಗುವುದು ಮುಂದುವರಿದರೆ ..." ಈ ಬಗೆಯವಾಗಿದ್ದರೆ ಮನುಷ್ಯ ತನ್ನ ಹಾಗೂ ತಾನು ಸ್ವೀಕರಿಸಬೇಕದ ಶಕ್ತಿಯ ನಡುವೆ ಗೋಡೆಯೊಂದನ್ನು ನಿರ್ಮಿಸುತ್ತಾನೆ. ಚೈತ್ಯಸತ್ತೆಯಲ್ಲಿ ಈ ಬಗೆಯ ಅದ್ಭುತ ರೀತಿಯ, ಛಾಯೆ ಇರದ, ವಿವಾದವಿರದ, ವೈರುಧ್ಯವಿರದ ವಿಶ್ವಾಸವಿರುತ್ತದೆ. ಮತ್ತು ಅದು ಆ ರೀತಿಯದಾಗಿದ್ದಾಗ ಉತ್ತರ ದೊರಕಿಸದ ಪ್ರಾರ್ಥನೆ ಇರುವುದಿಲ್ಲ, ಸಿದ್ಧಿಸಿಕೊಳ್ಳಲಾಗದ ಅಭೀಪ್ಸೆ ಇರುವುದಿಲ್ಲ.

**– ಶ್ರೀಮಾತೆ**

ನಿಮ್ಮ ನಂಬಿಕೆ ನಿಮ್ಮನ್ನು ಸರ್ವಸಮರ್ಥನಾದ ಪರಮೋಚ್ಚನ ರಕ್ಷಣೆಯಲ್ಲಿ ಇರಿಸುತ್ತದೆ.

**(6/403–04, 12/311)** **– ಶ್ರೀಮಾತೆ**

*

## ಎರಡನೆಯ ನಿಬಂಧನೆ – ಸಮಗ್ರ ನಂಬಿಕೆ

(ಮಾನಸಿಕ ನಿರ್ಣಯ ಸಾಕಾಗದು)

**ಪ್ರಶ್ನೆ :** *ಶ್ರೀಮಾತೆಯವರೆ, ಮಾನಸಿಕ ನಿರ್ಣಯದ ಮೂಲಕ – ಉದಾಹರಣೆಗೆ ಮನುಷ್ಯ ಅನಾರೋಗ್ಯಕ್ಕೆ ಒಳಗಾದಾಗ ಔಷಧಿಗಳನ್ನು ಸೇವಿಸಬಾರದು ಎಂಬ ನಿರ್ಣಯದ ಮೂಲಕ – ದೇಹ ಅದನ್ನು ಅರ್ಥ ಮಾಡಿಕೊಳ್ಳುವಂತೆ ಮಾಡಬಹುದೆ?*

**ಶ್ರೀಮಾತೆ :** ಅದು ಸಾಕಾಗದು. ಮಾನಸಿಕ ನಿರ್ಣಯ ಸಾಕಾಗದು, ಇಲ್ಲ. ನಿಮ್ಮ ದೇಹದಲ್ಲಿ ಸೂಕ್ಷ್ಮ ಪ್ರತಿಕ್ರಿಯೆಗಳಿರುತ್ತವೆ, ಅವು ಮಾನಸಿಕ ನಿರ್ಣಯಗಳಿಗೆ ವಿಧೇಯವಾಗಿರುವುದಿಲ್ಲ. ಇನ್ನೂ ಏನೋ ಒಂದರ ಆವಶ್ಯಕತೆ ಇರುತ್ತದೆ.

ಇತರ ಕಾರ್ಯ ಕ್ಷೇತ್ರಗಳನ್ನು ಸಂಪರ್ಕಿಸಬೇಕಾಗುತ್ತದೆ. ಮನಸ್ಸಿನ ಸಾಮರ್ಥ್ಯಕ್ಕಿಂತ ಉಚ್ಚತರವಾದುದರ ಆವಶ್ಯಕತೆ ಇದೆ.

ಮತ್ತು ಈ ದೃಷ್ಟಿಕೋನದಿಂದ ಮನಸ್ಸಿನಲ್ಲಿ ಇರುವುದೆಲ್ಲ, ಯಾವಾಗಲೂ, ಆಂತರಿಕವಾಗಿ ಪ್ರಶ್ನಿಸುವುದಕ್ಕೆ ಅಧೀನವಾಗಿರುತ್ತದೆ. ನೀವೊಂದು ನಿರ್ಣಯ ತೆಗೆದುಕೊಳ್ಳುತ್ತೀರಿ. ಆದರೆ, ಯಾವಾಗಲೂ, ಮತ್ತೊಂದೇನೋ ಬರುವುದು ಖಂಡಿತ. ಅದರಲ್ಲಿ ಅದು ಬಹುಶಃ ಈ ನಿರ್ಣಯದ ವಿರುದ್ಧ ಬಹಿರಂಗವಾಗಿ

ಹೋರಾಟ ನಡೆಸದೇ ಇರಬಹುದು, ಆದರೆ ಆದರ ಪರಿಣಾಮಕಾರಿತ್ವವನ್ನು ಪ್ರಶ್ನಿಸುತ್ತದೆ. ನಿಮ್ಮ ನಿರ್ಣಯ ಅದರ ಪರಿಣಾಮದಲ್ಲಿ ಅರ್ಧಭಾಗ ಕಳೆದುಕೊಳ್ಳುವುದಕ್ಕೆ, ಅದನ್ನು ಕನಿಷ್ಠ ಮಟ್ಟದ ಸಂಶಯಕ್ಕೆ ಒಳಪಡಿಸುವುದು ಸಾಕಾಗುತ್ತದೆ. "ನನಗೆ ಬೇಕಾಗಿದೆ" ಎಂದು ಹೇಳಿದ ಸಮಯದಲ್ಲಿಯೇ ಹಿನ್ನೆಲೆಯಲ್ಲಿ, ಎಲ್ಲಿಯೋ ಒಂದೆಡೆ, ಏನೋ ಒಂದು "ಪರಿಣಾಮ ಏನಾಗಬಹುದು?" ಎಂದು ಕೇಳುವ ಸುಪ್ತ ಸಂದೇಹವಿರುತ್ತದೆ, ಪ್ರತಿಯೊಂದನ್ನೂ ಹಾಳು ಮಾಡುವುದಕ್ಕೆ ಅದಿಷ್ಟು ಸಾಕಾಗುತ್ತದೆ.

ಮನಸ್ಸಿನ ಕಾರ್ಯಗತಿಯ ಈ ಲೀಲೆ ಬಹಳ ಸೂಕ್ಷ್ಮವಾಗಿರುತ್ತದೆ ಮತ್ತು ಯಾವ ಮಾನವ ಸಾಧನವೂ ಅದನ್ನು ಪರಿಪೂರ್ಣವಾಗಿ ನಿಯಂತ್ರಿಸಲು ಯಶಸ್ವಿಯಾಗುವುದಿಲ್ಲ. ಉದಾಹರಣೆಗೆ ತತ್ಪರರಾಗಿ ಕೈಕೊಂಡ ಯೌಗಿಕ ಪ್ರಯತ್ನದ ಮೂಲಕ ತಮ್ಮಲ್ಲಿದ್ದ ಏನೋ ಒಂದರ ಮೇಲೆ ನಿಯಂತ್ರಣ ಸಾಧಿಸುವುದರಲ್ಲಿ ಯಶಸ್ವಿಯಾದವರಿರುತ್ತಾರೆ. – ಅದು ದೇಹದಲ್ಲಿರುವ ವಿಶಿಷ್ಟ ದೌರ್ಬಲ್ಯವಾಗಿರಬಹುದು ಇಲ್ಲವೆ ಅಸಮತೋಲನಕ್ಕೆ ತೆರೆದಿಟ್ಟುಕೊಂಡಿದ್ದಾಗಿರ ಬಹುದು – ಅದರ ಮೇಲೆ ನಿಯಂತ್ರಣವನ್ನು ಮತ್ತು ಪರಿಣಾಮವೊಂದನ್ನು ದೊರಕಿಸಿರುತ್ತಾರೆ. ಅಸಮತೋಲನವನ್ನು ನಿವಾರಿಸಿದ ಉದಾಹರಣೆಯನ್ನೇ ತೆಗೆದುಕೊಳ್ಳೋಣ. ಹಲವಾರು ವರ್ಷಗಳ ನಂತರ ಒಮ್ಮೆಗೆ, ಯಾವುದೊಂದು ಕ್ಷಣದಲ್ಲಿ "ಅಹಾ! ಅದನ್ನು ನಿವಾರಿಸಲಾಯಿತು" ಎಂಬ ಯೋಚನೆ ಒಮ್ಮೆಗೆ ಬಂದರೆ ಸರಿ, ಅದರ ಮುಂದಿನ ಕ್ಷಣದಲ್ಲಿ ಆ ತೊಂದರೆ ಮರಳಿ ಬರುತ್ತದೆ. ಅದಿಷ್ಟೇ ಸಾಕಾಗುತ್ತದೆ. ಏಕೆಂದರೆ ಅವರು ನಿರಾಕರಿಸಿದ ವಿಷಯದ ಕಂಪನಗಳಿರುವ, ಮನನೋಯಿಸುವ ಯೋಚನೆಯ ಸ್ತರದ ಸಂಪರ್ಕದಲ್ಲಿ ಬಂದಿದ್ದರು ಮತ್ತು ಒಂದಿಲ್ಲೊಂದು ಕಾರಣಕ್ಕಾಗಿ ಶಕ್ತಿಗಳ ಲೀಲೆಯಲ್ಲಿ ಅವರು ತಮ್ಮನ್ನು ತೆರೆದುಕೊಂಡಿದ್ದರು ಮತ್ತು ಅದು ಮರಳಿ ಬರುತ್ತದೆ ಎಂಬುದನ್ನು ಅದು ಸಿದ್ಧಪಡಿಸುತ್ತದೆ.

ಇದು ಯೋಗದ ಆಚರಣೆಯಲ್ಲಿ ಸುಪರಿಚಿತವಾದ ವಿಷಯಗಳಲ್ಲೊಂದು. ಮನುಷ್ಯ ಗಳಿಸಿರುವ ವಿಜಯವನ್ನು ಅವಲೋಕಿಸುವ ಸರಳ ವಾಸ್ತವತೆ – ಮಾನಸಿಕವಾಗಿ ಅವಲೋಕಿಸುವುದು, ಅದರ ಬಗ್ಗೆ ಯೋಚಿಸುವುದು ಹಲವಾರು ವರ್ಷಗಳ ಕಾಲ ಉಳಿದುಕೊಂಡು ಬಂದ ಯೋಗದ ಪರಿಣಾಮವನ್ನು ನಾಶಪಡಿಸಲು ಸಾಕಾಗುತ್ತದೆ.



ಇಲ್ಲ, ಮಾನಸಿಕ ಕ್ಷೇತ್ರದಲ್ಲಿ ವಿಜಯಗಳನ್ನು ಗಳಿಸಲಾಗುವುದಿಲ್ಲ. ಅದು ಅಸಾಧ್ಯವಾದದ್ದು. ಅದು ಎಲ್ಲ ಬಗೆಯ ಪ್ರಭಾವಗಳಿಗೆ, ಎಲ್ಲ ವೈರುಧ್ಯಗಳ ಪ್ರವಾಹಗಳಿಗೆ ತೆರೆದುಕೊಂಡಿರುತ್ತದೆ. ಮನುಷ್ಯ ಮಾಡುವ ಎಲ್ಲ ಮಾನಸಿಕ ರಚನೆಗಳು ತಮ್ಮೊಡನೆ ತಮ್ಮವೇ ಆದ ವೈರುಧ್ಯಗಳನ್ನು ಕೊಂಡೊಯ್ಯುತ್ತವೆ. ಅದರ ಮೇಲೆ ಜಯ ಸಾಧಿಸಲು ಮನುಷ್ಯ ಪ್ರಯತ್ನ ಮಾಡಬಹುದು ಇಲ್ಲವೆ ಅದು ಸಾಧ್ಯವಿದ್ದಷ್ಟು ನಿರುಪದ್ರವದ್ದಾಗುವಂತೆ ಮಾಡಬಹುದು. ಆದರೆ ಅದು ಅಸ್ತಿತ್ವದಲ್ಲಿದೆ, ಅದು ಅಲ್ಲಿದೆ ಮತ್ತು ಅತಿ ಚಿಕ್ಕ ದೌರ್ಬಲ್ಯವಿದ್ದಾಗ ಇಲ್ಲವೆ ಜಾಗರೂಕತೆಯಲ್ಲಿ ಕೊರತೆ ಇಲ್ಲವೆ ಅಸಡ್ಡೆ ಇದ್ದಾಗ ಅದು ಪ್ರವೇಶಿಸುತ್ತದೆ ಮತ್ತು ಎಲ್ಲವನ್ನೂ ನಾಶಮಾಡುತ್ತದೆ. ಮಾನಸಿಕವಾಗಿ ಮನುಷ್ಯ ಅತಿ ಕಡಿಮೆ ಪರಿಣಾಮಗಳತ್ತ ತಲುಪುತ್ತಾನೆ, ಅವು ಯಾವಾಗಲೂ ಮಿಶ್ರಣಕ್ಕೊಳಗಾಗಿರುತ್ತವೆ. ಮತ್ತೊಂದೇನೋ ಅವಶ್ಯವಿರುತ್ತದೆ. ಸುರಕ್ಷಿತವಾಗಿ ಕಾರ್ಯ ಕೈಕೊಳ್ಳಬೇಕಾದರೆ ಮನುಷ್ಯ ಮನಸ್ಸಿನಿಂದ ನಂಬಿಕೆಯ ಇಲ್ಲವೆ ಉಚ್ಚಪ್ರಜ್ಞೆಯ ಕಾರ್ಯಕ್ಷೇತ್ರದಲ್ಲಿ ಸಾಗಿ ಹೋಗಬೇಕು.

ದೇಹದ ಮೇಲೆ ಕಾರ್ಯಮಾಡಲು ಅತ್ಯಂತ ಸಾಮರ್ಥ್ಯಪೂರ್ಣ ಸಾಧನಗಳಲ್ಲಿ ನಂಬಿಕೆಯೂ ಒಂದು. ಸರಳ ಹೃದಯವಿರುವ, ಬಹಳ ಜಟಿಲತೆಗೆ ಒಳಗಾಗದ ಮನಸ್ಸು ಇರುವ ಜನರು – ಸರಳ ಜನರು – ಆದರೆ ಬಹಳ ಆಳವಾದ ನಂಬಿಕೆಯುಳ್ಳವರು ತಮ್ಮ ದೇಹಗಳ ಮೇಲೆ ಕಾರ್ಯ ಕೈಕೊಳ್ಳಲು ಶ್ರೇಷ್ಠ ಸಾಮರ್ಥ್ಯ ಹೊಂದಿರುತ್ತಾರೆ. ಆ ಕಾರಣದಿಂದಾಗಿ ಮನುಷ್ಯನಿಗೆ ಕೆಲವೊಮ್ಮೆ ಆಶ್ಚರ್ಯವಾಗುತ್ತದೆ: "ಹೆಚ್ಚಿನ ಸಿದ್ಧಿ ಪಡೆದ ಮನುಷ್ಯ ಇಲ್ಲಿದ್ದಾನೆ, ಅವನು ಅಸಾಧಾರಣ ವ್ಯಕ್ತಿ, ಮತ್ತು ಭೌತಿಕ ವಿಷಯಗಳಲ್ಲಿ ಅತಿ ಚಿಕ್ಕದಾದುದಕ್ಕೂ ಗುಲಾಮನಾಗಿದ್ದಾನೆ. ಅದು ಹಾಗಿರುವಾಗ ಈ ಮನುಷ್ಯ, ಸರಿ, ಎಷ್ಟೊಂದು ಸರಳ, ಅಸಂಸ್ಕೃತನಾಗಿ ಕಾಣುತ್ತಾನೆ, ಆದರೆ ಆವನಲ್ಲಿ ಶ್ರೇಷ್ಠಮಟ್ಟದ ನಂಬಿಕೆ ಇದೆ ಮತ್ತು ಅವನು ವಿಜೇತನ ಹಾಗೆ ತೊಂದರೆಗಳಲ್ಲಿ, ಅಡೆತಡೆಗಳಲ್ಲಿ ಸಾಗಿ ಹೋಗುತ್ತಾನೆ!".

ಅತ್ಯಂತ ಸುಸಂಸ್ಕೃತ ಮನುಷ್ಯ ನಂಬಿಕೆ ಹೊಂದಿರುವುದಿಲ್ಲ ಎಂದು ನಾನು ಹೇಳುವುದಿಲ್ಲ, ಆದರೆ ಅದು ಹೆಚ್ಚು ಕಠಿಣವಾದದ್ದು, ಏಕೆಂದರೆ, ಯಾವಾಗಲೂ, ಈ ಮಾನಸಿಕ ಅಂಶವಿರುತ್ತದೆ ಅದು ವಿರೋಧಿಸುತ್ತದೆ, ಚರ್ಚೆ ಮಾಡುತ್ತದೆ, ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುತ್ತದೆ, ಅದಕ್ಕೆ ಮನವರಿಕೆ ಮಾಡಿಕೊಡುವುದು ಕಷ್ಟತರವಾದದ್ದು, ಅದಕ್ಕೆ ಪ್ರಮಾಣಗಳು ಬೇಕಾಗುತ್ತವೆ. ಅವನ ನಂಬಿಕೆ ಕಡಿಮೆ

ಪರಿಶುದ್ಧವಾಗಿರುತ್ತದೆ. ಹಾಗಾಗಿ ಉತ್ಕ್ರಾಂತಿಯ ಸುರಳಿಯಲ್ಲಿ ಉಚ್ಚದರ್ಜೆಯತ್ತ, ಮಾನಸಿಕವಾದುದರಿಂದ ಆಧ್ಯಾತ್ಮಿಕವಾದುದರತ್ತ ಸಾಗಿ ಹೋಗಬೇಕಾಗುತ್ತದೆ, ಆಗ ಸ್ವಾಭಾವಿಕವಾಗಿ ನಂಬಿಕೆ ಉಚ್ಚಮಟ್ಟದ ಗುಣಲಕ್ಷಣವನ್ನು ಪಡೆಯುತ್ತದೆ. ಆದರೆ ದೈನಂದಿನ, ಸಾದಾ ಜೀವನದಲ್ಲಿ ಬಹಳ ಸರಳ ಮತ್ತು ಉತ್ಕಟ ನಂಬಿಕೆಯುಳ್ಳ ಮನುಷ್ಯ ತನ್ನ ದೇಹದ ಮೇಲೆ ಪ್ರಭುತ್ವ ಪಡೆಯಬಲ್ಲ. – ಅದು ನಿಜವಾದ ಪ್ರಭುತ್ವವಾಗಿರಲಿಕ್ಕಿಲ್ಲ, ಅದು ಕೇವಲ ಸ್ವಯಂಪ್ರೇರಿತ ಚಲನೆಯಾಗಿರುತ್ತದೆ – ಅವನು ಹೊಂದಿರುವ ದೇಹದ ಮೇಲಿನ ನಿಯಂತ್ರಣ ಬಹಳ ಉಚ್ಚತರ ಅಭಿವೃದ್ಧಿ ಹೊಂದಿದ ಮನುಷ್ಯನಲ್ಲಿರುವುದಕ್ಕಿಂತ ಹೆಚ್ಚು ಶ್ರೇಷ್ಠವಾಗಿರುತ್ತದೆ.

**ಪ್ರಶ್ನೆ :** *ಕೇವಲ ನಂಬಿಕೆ ಎಲ್ಲವನ್ನೂ ಸೃಷ್ಟಿಸುತ್ತದೆಯೆ: ಎಲ್ಲದರ ಮೇಲೆ ಜಯ ಸಾಧಿಸುತ್ತದೆಯೆ?*

**ಶ್ರೀಮಾತೆ :** ಹೌದು, ಆದರೆ ಆ ನಂಬಿಕೆ ಸಮಗ್ರವಾಗಿರಬೇಕು ಮತ್ತು ಪರಿಪೂರ್ಣವಾಗಿರಬೇಕು, ಸರಿಯಾದ ಬಗೆಯದಾಗಿರಬೇಕು, ಕೇವಲ ಮನಸ್ಸಿನ ಶಕ್ತಿಯಿಂದ, ಸಂಕಲ್ಪದಿಂದ ಕೂಡಿರಬಾರದು, ಹೆಚ್ಚಿನದಾದ ಆಳವಾದ ಏನೋ ಒಂದಾಗಿರಬೇಕು. ಮನಸ್ಸು ಮುಂದಿರಿಸಿದ ಸಂಕಲ್ಪ ವಿರುದ್ಧ ಪ್ರತಿಕ್ರಿಯೆಗಳನ್ನು ಎದುರಿಗಿರಿಸುತ್ತದೆ ಮತ್ತು ವಿರೋಧವನ್ನು ಸೃಷ್ಟಿಸುತ್ತದೆ. ರೋಗಗಳನ್ನು ವಾಸಿ ಮಾಡುವ ಕೂಯೆ(Coué)ನ ವಿಧಾನದ ಬಗ್ಗೆ ನೀವು ಸ್ವಲ್ಪ ಕೇಳಿರಬಹುದು. ಅವನಿಗೆ ಈ ಸಾಮರ್ಥ್ಯದ ರಹಸ್ಯದ ಬಗ್ಗೆ ಸ್ವಲ್ಪ ತಿಳಿದಿತ್ತು, ಅವನು ಅದನ್ನು ಅಸಾಧಾರಣ ರೀತಿಯಲ್ಲಿ ಪರಿಣಾಮಕಾರಿಯಾಗುವಂತೆ ಉಪಯೋಗಿಸಿದ. ಆದರೆ ಅದನ್ನು ಅವನು ಕಲ್ಪನೆ ಎಂದು ಕರೆದ ಮತ್ತು ಅವನ ವಿಧಾನ ಅವನು ಕರೆಕೊಟ್ಟ ನಂಬಿಕೆಗೆ ಅತಿ ಮಾನಸಿಕ ರೂಪ ಕೊಟ್ಟಿತು. ಮಾನಸಿಕ ನಂಬಿಕೆ ಸಾಕಾಗದು, ಅದನ್ನು ಪೂರ್ತಿಗೊಳಿಸಬೇಕು, ಪ್ರಾಣಿಕ ಮತ್ತು ಭೌತಿಕ ನಂಬಿಕೆಯನ್ನು ಕೂಡ ಅದರ ಮೇಲೆ ಹೇರಬೇಕು. ನಿಮ್ಮ ಎಲ್ಲ ಸತ್ತೆಯಲ್ಲಿ ಈ ಬಗೆಯ ಸಮಗ್ರ ಶಕ್ತಿಯನ್ನು ಸೃಷ್ಟಿಸಬಲ್ಲಿರಾದರೆ, ಆಗ ಯಾವುದೂ ಅದನ್ನು ವಿರೋಧಿಸಲಾರದು; ಆದರೆ ಅತ್ಯಂತ ಅವಚೇತನ(sub-conscious)ದ ಆಳವನ್ನು ನೀವು ತಲುಪಬೇಕು, ನಿಮ್ಮ ದೇಹದ ಜೀವಕೋಶಗಳಲ್ಲಿ ನಂಬಿಕೆಯನ್ನು ಗಟ್ಟಿಗೊಳಿಸಬೇಕು.

**(9/123–26, 3/36)** — **– ಶ್ರೀಮಾತೆ**

*



## ಮೂರನೆಯ ನಿಬಂಧನೆ – ಪರಿಶುದ್ಧ ನಂಬಿಕೆ

"ಮಾನಸಿಕ ಹಾಗೂ ಪ್ರಾಣಿಕ ಸತ್ತೆಗಳಲ್ಲಿ ಅಹಂಕಾರದಿಂದ ಕೂಡಿದ ನಂಬಿಕೆ, ಮಹತ್ವಾಕಾಂಕ್ಷೆ, ಅಭಿಮಾನ, ಜಂಬ, ಮಾನಸಿಕ ಉದ್ಧಟತನ, ಪ್ರಾಣಿಕ ಸ್ವ–ಸಂಕಲ್ಪ, ವೈಯಕ್ತಿಕ ಬೇಡಿಕೆ, ನಿಮ್ಮ ಸ್ವಭಾವದ ಕ್ಷುದ್ರ ತೃಪ್ತಿಗಳಿಗಾಗಿ ಆಸೆ ಇವುಗಳಿಂದ ಕಲಂಕಿತವಾದ ಇದೆಲ್ಲ ಕೆಳಮಟ್ಟದ, ಹೊಗೆ ಕವಿದ ಮಬ್ಬಾದ ಜ್ವಾಲೆ, ಅದು ಸ್ವರ್ಗದತ್ತ ಮುಖ ಮಾಡಿ ಬೆಳಗಲಾರದು."

**(25/9)** — **– ಶ್ರೀ ಅರವಿಂದರು**

**ಪ್ರಶ್ನೆ :** *"ಮಾನಸಿಕ ಸತ್ತೆಯಲ್ಲಿ ಅಹಂಕಾರದಿಂದ ಕೂಡಿದ ನಂಬಿಕೆ"* ಇರುವುದು *ಹೇಗೆ?*

**ಶ್ರೀಮಾತೆ :** ಅವರು (ಶ್ರೀ ಅರವಿಂದರು) ಅದನ್ನು "ಮಹತ್ವಾಕಾಂಕ್ಷೆಯಿಂದ ಕಲಂಕಿತವಾದದ್ದು" ಇತ್ಯಾದಿ ಶಬ್ದಗಳಿಂದ ಸರಿಯಾಗಿಯೇ ವರ್ಣಿಸಿ ಹೇಳಿದ್ದಾರೆ. ನೀನು ಅದನ್ನು ಬೇರೆ ಶಬ್ದಗಳಲ್ಲಿ ಇರಿಸಿದರೆ ಅದು ಇನ್ನೂ ಹೆಚ್ಚು ಸತ್ಯವಾದದ್ದು ಆಗುವುದೆಂದು ನಾನು ಕಂಡುಕೊಂಡಿದ್ದೇನೆ. ಅಂತಹದೆಲ್ಲ ಅಲ್ಪಮಟ್ಟಿಗಾದರೂ ಇರದ ಯಾವ ಬಗೆಯ ನಂಬಿಕೆಯಾದರೂ ಇದೆಯೆ? ಏಕೆಂದರೆ ನಂಬಿಕೆ ಪರಿಶುದ್ಧವಾಗಿದ್ದರೆ, ಅದು ಸಾಮರ್ಥ್ಯವುಳ್ಳದ್ದಾಗಿರುತ್ತದೆ ... ಅದನ್ನು ಯಾರೂ ವಿರೋಧಿಸಲಾರರು ಎಂದು ಹೇಳಲಾಗಿದೆ, ಪುನರುಚ್ಚರಿಸಲಾಗಿದೆ, ಇದರರ್ಥ ಮನುಷ್ಯನಲ್ಲಿ ಇವೆಲ್ಲ ವಿಷಯಗಳಿಂದ ಕಲಂಕಿತವಾಗಿರದ, ಪರಿಪೂರ್ಣವಾಗಿ ಪರಿಶುದ್ಧವಾಗಿರುವ ನಂಬಿಕೆ ಇದ್ದರೆ ಅದನ್ನು ನಿಜವಾದ ನಂಬಿಕೆ ಎಂದು ಕರೆಯಬಹುದು, ಅದಿದ್ದಾಗ ಯಾವುದೂ ಅಸಾಧ್ಯವಾಗುವುದಿಲ್ಲ. ಮನುಷ್ಯನನ್ನು ದಿನ ಬೆಳಗಾಗುವುದರಲ್ಲಿ ಪರಿವರ್ತಿಸಬಹುದು, ಒಂದೇ ಕ್ಷಣದಲ್ಲಿ ಅತಿ ಮನಸ್ಸನ್ನು ಕೆಳಗಿಳಿಸಿ ತರಬಹುದು. ಮನುಷ್ಯನಲ್ಲಿ ನಂಬಿಕೆ ಇದ್ದರೆ ಏನೆಲ್ಲವನ್ನೂ ಕೈಕೊಳ್ಳಬಹುದು. ಆದರೆ ಅದು ಪರಿಶುದ್ಧ ನಂಬಿಕೆಯಾಗಿರಬೇಕು, ವೈಯಕ್ತಿಕ ಪ್ರತಿಕ್ರಿಯೆಗಳು ಇಲ್ಲವೆ ಸಂಕಲ್ಪ ಇಂತಹದರಿಂದ ಮಿಶ್ರಣಕ್ಕೊಳಗಾಗಿರಬಾರದು.

ಪರಿಶುದ್ಧ ನಂಬಿಕೆ ಸರ್ವಸಮರ್ಥವಾದ, ವಿರೋಧಿಸಲು ಸಾಧ್ಯವಾಗದ ಏನೋ ಒಂದು. ಸರ್ವಸಮರ್ಥವಾದ ಹಾಗೂ ವಿರೋಧಿಸಲು ಸಾಧ್ಯವಾಗದ ನಂಬಿಕೆಯನ್ನು ಬಹಳ ಸಲ ಕಂಡುಕೊಳ್ಳಲಾಗುವುದಿಲ್ಲ, ಅದು ನಂಬಿಕೆ ಪರಿಶುದ್ಧವಾಗಿರುವುದಿಲ್ಲ ಎಂಬುದನ್ನು ತೋರಿಸಿಕೊಡುತ್ತದೆ. ಆ ಪ್ರಶ್ನೆಯನ್ನು ಈ ರೀತಿಯಲ್ಲಿ ಇರಿಸಬಹುದು: ನಮ್ಮಲ್ಲಿ, ಪ್ರತಿಯೊಬ್ಬನಲ್ಲಿ ನಂಬಿಕೆ ಇದೆ,

ಉದಾಹರಣೆಗೆ ಯಾವುದರಲ್ಲಿಯೋ ಒಂದು ನಂಬಿಕೆ, ಅದು ನಮ್ಮೊಳಗಿರುವ ದೈವೀ ಸಾನ್ನಿಧ್ಯದಲ್ಲಿ ನಂಬಿಕೆ ಎಂದು ಹೇಳುವಾ. ನಮ್ಮ ನಂಬಿಕೆ ಪರಿಶುದ್ಧವಾಗಿದ್ದರೆ ನಾವು ಕೂಡಲೆ ನಮ್ಮೊಳಗಿರುವ ದೈವೀ ಸಾನ್ನಿಧ್ಯದ ಬಗ್ಗೆ ಅರಿವುಳ್ಳವರಾಗುತ್ತಿದ್ದೆವು. ತಿಳಿದುಕೊಳ್ಳಲು ಈ ಉದಾಹರಣೆ ಸುಲಭವಾಗಿದೆ. ನಿಮ್ಮಲ್ಲಿ ನಂಬಿಕೆ ಇದೆ, ಅದು ಅಲ್ಲಿದೆ, ಆದರೆ ಅನುಭವ ನಿಮಗಾಗುತ್ತಿಲ್ಲ, ಏಕೆ? ಏಕೆಂದರೆ ನಂಬಿಕೆ ಪರಿಶುದ್ಧವಾಗಿಲ್ಲ. ನಂಬಿಕೆ ಬಹಳ ಪರಿಶುದ್ಧವಾಗಿದ್ದರೆ, ಕೂಡಲೇ ಕಾರ್ಯ ಸಿದ್ಧಿಸಿಕೊಳ್ಳುತ್ತಿತ್ತು. ಇದು ಬಹಳ ಸತ್ಯವಾದ ಸಂಗತಿ. ಹಾಗಾಗಿ ಕಾರ್ಯ ಕೂಡಲೇ ಸಿದ್ಧಿಸಿಕೊಳ್ಳಲಿಲ್ಲ ಎಂಬುದರ ಬಗೆಗೆ ನಿಮಗೆ ಅರಿವುಂಟಾದಾಗ, ನೀವು ಅವಲೋಕಿಸಲು ಪ್ರಾರಂಭಿಸುತ್ತೀರಿ. "ಆದರೆ ಅದು ಸಿದ್ಧಿಸಿಕೊಳ್ಳಲಿಲ್ಲ ಏಕೆ? ನನ್ನ ನಂಬಿಕೆಯಲ್ಲಿ ಏನಿದೆ?" ಅದೇ ಬಗೆಯ ನಿಷ್ಕಾಪಟ್ಯದಿಂದ ನಿಮ್ಮ ಅವಲೋಕನವನ್ನು ಮುಂದುವರಿಸಿದರೆ, ಅಲ್ಲಿ ಹಲವಾರು ಚಿಕ್ಕಪುಟ್ಟ ಸಂಗತಿಗಳು ಇರುವುದನ್ನು ಕಂಡುಕೊಳ್ಳುತ್ತೀರಿ, ಅವು ಎಷ್ಟೊಂದು ಚಿಕ್ಕಪುಟ್ಟ ಸಂಗತಿಗಳಾಗಿರುತ್ತವೆ:– ದೊಡ್ಡವಾದವುಗಳಲ್ಲ – ಜುಗುಪ್ಸೆ ಹುಟ್ಟಿಸುವಂತಹವುಗಳಲ್ಲ. ಚಿಕ್ಕಪುಟ್ಟ ವಿಷಯಗಳು. ಹಾಗಾಗಿ ಬಹಳಷ್ಟು ಸಲ ಕ್ಷುದ್ರ ಜಂಬ ತಲೆದೋರುತ್ತದೆ, ನಂತರ ಒಂದು ಆಸೆ, ಬಹಳ ಉಗ್ರವಾದದ್ದಲ್ಲ – ಅದು ತನ್ನನ್ನು ಬಹಳಷ್ಟು ತೋರಿಸಿಕೊಡುವುದಿಲ್ಲ. ಅದು ನಿಮಗೆ ಮಹತ್ವ ಕೊಡುತ್ತದೆ, ಸಾಮರ್ಥ್ಯ ಕೊಡುತ್ತದೆ ಮತ್ತು ತೃಪ್ತಿಯನ್ನು ಕೊಡುತ್ತದೆ....

**(15/340–41)** **– ಶ್ರೀಮಾತೆ**

*

ಯೋಚನೆಯಲ್ಲಿ ಸಂಶಯಪಡುವ, ವಾದವಿವಾದ ಮಾಡುವ ಚಿಕ್ಕ ಮೂಲೆಯೊಂದಿರುತ್ತದೆ, ಹಾಗಾಗಿ ಅದು ಎಲ್ಲವನ್ನೂ ಹಾಳು ಮಾಡುತ್ತದೆ. ಮನುಷ್ಯ ಅತ್ಯಂತ ವಿಷಮ ಪರಿಸ್ಥಿತಿಯಲ್ಲಿದ್ದಾಗ, ತಾನೇನೂ ಮಾಡಲಾರೆ ಎಂಬುದು ಮನಸ್ಸಿಗೆ ಅರಿವಾದಾಗ, ಅದು (ಮನಸ್ಸು) ಮೂಢತನ, ಅಸಮರ್ಥತೆ–ಗಳಿಂದ ನಿಂತುಕೊಂಡಾಗ, ಆ ಕ್ಷಣದಲ್ಲಿ ಮನುಷ್ಯ ಉಚ್ಚತರ ಸಹಾಯಕ್ಕಾಗಿ ಅಭೀಪ್ಸೆ ಪಟ್ಟಾಗ, ಆ ಅಭೀಪ್ಸೆಗೆ, ನಿಖರವಾಗಿ, ನಿರಾಶೆಯಿಂದುಂಟಾದ ಗಾಢತೆ ಇರುತ್ತದೆ ಮತ್ತು ಅದು ಪರಿಣಾಮಕಾರಿಯಾಗುತ್ತದೆ. ಆದರೆ ನಿಮ್ಮ ಯೋಚನೆ ವಾದವನ್ನು ಮುಂದುವರಿಸಿದರೆ ಮತ್ತು "ಹೌದು, ನಾನು ಅಭೀಪ್ಸೆ ಪಟ್ಟೆ, ಪ್ರಾರ್ಥನೆ ಮಾಡಿದೆ, ಇದು ಸರಿಯಾದ ಕ್ಷಣ ಹೌದೋ, ಅಲ್ಲವೋ, ಅದು ಬರುವುದೋ, ಇಲ್ಲವೆ ಅಸಾಧ್ಯವಾದದ್ದೋ" ಎಂದು ನೀವು ಹೇಳಿದರೆ, ಸರಿ, ಅದು ಅಲ್ಲಿಗೆ ಮುಕ್ತಾಯಗೊಂಡಂತೆ, ಅದು ಕಾರ್ಯಗತವಾಗುವುದಿಲ್ಲ. ಇದು ಅತ್ಯಂತ



ಸಾಮಾನ್ಯವಾದ ವಿಷಯಗಳಲ್ಲಿ ಒಂದು. ...ಅವರು ಆ ಇಡೀ ಚಲನೆಯನ್ನು ಅದರ ಬೇರಿನಲ್ಲಿಯೇ ಕತ್ತರಿಸಿ ಹಾಕುತ್ತಾರೆ ಎಂಬುದನ್ನು ಅವರು ಗಮನಿಸುವುದಿಲ್ಲ! ಅವರಲ್ಲಿ ನಂಬಿಕೆ ಇರುವುದಿಲ್ಲ, ಕೇವಲ "ಅದು ನನಗೆ ಅವಶ್ಯವಿದೆ" ಎಂಬುದಿಷ್ಟೇ ಇರುತ್ತದೆ.

**(5/367–68)** **–ಶ್ರೀಮಾತೆ**

*

## ಪರ್ವತಗಳು ಚಲಿಸುವಂತೆ ಮಾಡುವ ನಂಬಿಕೆ

ಚೈತ್ಯದ ಗ್ರಹಿಕೆಯನ್ನು ಬಾಹ್ಯಪ್ರಜ್ಞೆಯ ಗ್ರಹಿಕೆ ನಿರಾಕರಿಸಬಹುದು, ಆದರೆ ಚೈತ್ಯಕ್ಕೆ ನಿಜವಾದ ಜ್ಞಾನವಿರುತ್ತದೆ, ಅದು ಅಂತರ್ಬೋಧೆಯ ಹುಟ್ಟುಗುಣದ ಜ್ಞಾನ. "ನಾನು ಅರಿತಿದ್ದೇನೆ, ಅದಕ್ಕೆ ಕಾರಣ ಕೊಡಲಾರೆ, ಆದರೆ ನಾನು ಅರಿತುಕೊಂಡಿದ್ದೇನೆ" ಎಂದು ಹೇಳುತ್ತದೆ. ಏಕೆಂದರೆ ಅದರ ಜ್ಞಾನ ಮನಸ್ಸಿನದಲ್ಲ, ಅನುಭವದ ಆಧಾರ ಹೊಂದಿದಂತಹದಲ್ಲ ಇಲ್ಲವೆ ಸತ್ಯವೆಂದು ಸಿದ್ಧಪಡಿಸಿದ್ದಲ್ಲ. ಪ್ರಮಾಣಗಳನ್ನು ಒದಗಿಸಿದ ನಂತರ ಅದು ನಂಬುವುದಿಲ್ಲ: ನಂಬಿಕೆ ಆತ್ಮದ ಚಲನೆಯಾಗಿರುತ್ತದೆ, ಅದರ ಜ್ಞಾನ ಸ್ವಯಂಪ್ರೇರಿತ ಹಾಗೂ ನೇರವಾದದ್ದು. ಆ ನಂಬಿಕೆಯನ್ನು ಇಡೀ ಜಗತ್ತು ನಿರಾಕರಿಸಿದಾಗಲೂ ಕೂಡ, ಅದರ ವಿರುದ್ಧ ಸಾವಿರಾರು ಪ್ರಮಾಣಗಳನ್ನು ಒದಗಿಸಿದಾಗಲೂ, ಅದು ತನ್ನ ಆಂತರಿಕ ಜ್ಞಾನದಿಂದ, ಪ್ರತಿಯೊಂದನ್ನು ಎದುರಿಸಬಹುದಾದ ನೇರ ಹಾಗೂ ತಾದಾತ್ಮ್ಯದ ಗ್ರಹಿಕೆಯಿಂದ ಅರಿತುಕೊಳ್ಳುತ್ತದೆ. ಚೈತ್ಯದ ಜ್ಞಾನ ಮೂರ್ತರೂಪದ್ದು, ವಾಸ್ತವ (tangible) ವಾದದ್ದು, ಘನರೂಪದ ಮೊತ್ತದಂತಿರುವಂತಹದು. ನೀವು ಅದನ್ನು ನಿಮ್ಮ ಮಾನಸಿಕ, ಪ್ರಾಣಿಕ ಹಾಗೂ ಭೌತಿಕ ಭಾಗಗಳಲ್ಲಿ ತಂದುಕೊಳ್ಳಬಹುದು, ಆಗ ಅದು ಸಮಗ್ರ ನಂಬಿಕೆಯಾಗುತ್ತದೆ – ಆ ನಂಬಿಕೆ ನಿಜವಾಗಿ ಪರ್ವತಗಳು ಚಲಿಸುವಂತೆ ಮಾಡಬಹುದು. ಆದರೆ "ಅದು ಹಾಗಲ್ಲ" ಎಂದು ಸತ್ತೆಯೊಳಗಿನ ಯಾವುದೂ ಮುಂದೆ ಬಂದು ಅದನ್ನು ಪರೀಕ್ಷೆಗೊಳಪಡಿಸಲು ಕೇಳಬಾರದು. ಅತ್ಯಲ್ಪ ಅಪನಂಬಿಕೆಯಿಂದ ನೀವು ವಿಷಯಗಳು ಹಾಳಾಗುವಂತೆ ಮಾಡುತ್ತೀರಿ. ನಂಬಿಕೆ ಸಮಗ್ರ ಹಾಗೂ ಅಚಲವಾಗುವಂತೆ ಮಾಡದಿದ್ದರೆ ಪರಮೋಚ್ಚನು ಹೇಗೆ ಪ್ರಕಟನಾಗಬಲ್ಲ? ನಂಬಿಕೆ ಅದರಲ್ಲಿಯೇ ಅಚಲವಾದದ್ದು, – ಅದು ಅದರ ಸ್ವಭಾವ, ಹಾಗಿಲ್ಲದಿದ್ದರೆ ಅದು ನಂಬಿಕೆಯೇ ಅಲ್ಲ. ಆದರೆ ಚೈತ್ಯದ ಚಲನೆಯನ್ನು ಮನಸ್ಸು, ಪ್ರಾಣಿಕ ಹಾಗೂ ಭೌತಿಕವಾದವುಗಳು ಅನುಸರಿಸದೆ ಹೋಗಬಹುದು. ಮನುಷ್ಯನೊಬ್ಬ ಯೋಗಿಯ ಬಳಿ ಬಂದಾಗ ಅವನು ತನ್ನನ್ನು ಗುರಿ ಮುಟ್ಟುವಂತೆ ಮಾಡಬಲ್ಲ ಎಂಬ ನಂಬಿಕೆ ಆ ಮನುಷ್ಯನಲ್ಲಿ ಉಂಟಾಗ

ಬಹುದು. ಆ ಯೋಗಿಯಲ್ಲಿ ಜ್ಞಾನವಿದೆಯೋ ಇಲ್ಲವೋ ಎಂಬುದನ್ನು ಆ ಮನುಷ್ಯ ತಿಳಿದಿರುವುದಿಲ್ಲ. ಅವನಿಗೆ ಚೈತ್ಯದ ಆಘಾತವೊಂದು ಆಗಿರುತ್ತದೆ ಮತ್ತು ಅವನು ತನ್ನ ಗುರುವನ್ನು ಭೇಟಿ ಮಾಡಿದೆ ಎಂದು ತಿಳಿದುಕೊಳ್ಳುತ್ತಾನೆ. ಮನಸ್ಸಿನಲ್ಲಿ ದೀರ್ಘ ಆಲೋಚನೆ ಮಾಡಿದ ನಂತರ, ಇಲ್ಲವೆ ಹಲವಾರು ಪವಾಡಗಳನ್ನು ಕಂಡ ನಂತರ ಅವನು ನಂಬುವುದಿಲ್ಲ. ಮತ್ತು ಈ ಬಗೆಯ ನಂಬಿಕೆ ಮಾತ್ರ ಯೋಗ್ಯವಾದದ್ದು. ನೀವು ವಾದ ಮಾಡುತ್ತ ಕುಳಿತರೆ ನಿಮ್ಮ ಅದೃಷ್ಟವನ್ನು ಯಾವಾಗಲೂ ತಪ್ಪಿಸಿಕೊಳ್ಳುತ್ತೀರಿ. ಚೈತ್ಯದ ಪ್ರಚೋದನೆ ತರ್ಕಬದ್ಧವಾದದ್ದೋ ಅಲ್ಲವೋ ಎಂಬುದನ್ನು ಕುರಿತು ಕೆಲವು ಜನರು ಆಲೋಚನೆ ಮಾಡುತ್ತ ಕುಳಿತು ಕೊಳ್ಳುತ್ತಾರೆ.

ಕುರುಡು ನಂಬಿಕೆ ಎಂದು ಕರೆಯಲಾಗುವುದರಿಂದ ಜನರು ತಪ್ಪುದಾರಿ ಹಿಡಿಯುವುದಿಲ್ಲ. "ಓ, ನಾನು ಈ ಮನುಷ್ಯ, ಆ ಮನುಷ್ಯ ಇಂತಹರನ್ನು ನಂಬಿದೆ, ಅವನಿಂದ ನನಗೆ ದ್ರೋಹವಾಯಿತು" ಎಂದು ಹೇಳುತ್ತಾರೆ. ವಾಸ್ತವದಲ್ಲಿ ದೋಷ ಅ ಮನುಷ್ಯನದಾಗಿರುವುದಿಲ್ಲ, ಆದರೆ ಅದು ನಂಬಿಕೆಯನ್ನು ಇರಿಸಿಕೊಂಡವನ ದಾಗಿರುತ್ತದೆ, ಅವನಲ್ಲಿರುವ ಯಾವುದೋ ದೌರ್ಬಲ್ಯ ಅದಕ್ಕೆ ಕಾರಣವಾಗುತ್ತದೆ. ಅವನು ತನ್ನ ನಂಬಿಕೆಯನ್ನು ಭದ್ರವಾಗಿ ಇರಿಸಿಕೊಂಡಿದ್ದನಾದರೆ ನಂಬಿಕೊಂಡ ಮನುಷ್ಯನನ್ನೇ ಬದಲಾಯಿಸಬಹುದು. ಅವನು ನಂಬಿಕೊಂಡಿದ್ದ ಅದೇ ಪ್ರಜ್ಞೆಯಲ್ಲಿ ಉಳಿದುಕೊಳ್ಳದೆ ಇದ್ದುದರ ಕಾರಣದಿಂದಾಗಿ ತಾನು ದ್ರೋಹಕ್ಕೊಳಗಾದುದನ್ನು ಕಂಡುಕೊಂಡ ಮತ್ತು ತಾನು ನಂಬಿಕೊಂಡಿದ್ದ ಮನುಷ್ಯ ಏನಾಗಬೇಕಿತ್ತೊ ಅದನ್ನು ಮಾಡಲಾಗಲಿಲ್ಲ. ಅವನಲ್ಲಿ ಸಮಗ್ರ ನಂಬಿಕೆ ಇದ್ದಿತಾದರೆ ಆ ಮನುಷ್ಯ ಬದಲಾಗುವ ನಿರ್ಬಂಧಕ್ಕೆ ಒಳಗಾಗುತ್ತಿದ್ದ. ಯಾವಾಗಲೂ ನಂಬಿಕೆಯಿಂದ ಪವಾಡಗಳು ಸಂಭವಿಸುತ್ತವೆ. ಒಬ್ಬ ಮನುಷ್ಯ ಇನ್ನೊಬ್ಬನಲ್ಲಿಗೆ ಹೋಗುತ್ತಾನೆ, ಅಲ್ಲಿ ದೈವೀ ಸಾನ್ನಿಧ್ಯದ ಸಂಪರ್ಕ ಪಡೆಯುತ್ತಾನೆ, ಈ ಸಂಪರ್ಕವನ್ನು ಪರಿಶುದ್ಧವಾಗಿರುವಂತೆ, ನಿಲ್ಲಿಸದೆ ಅವನು ಕಾಪಾಡಿಕೊಂಡು ಬರಬಲ್ಲನಾದರೆ ದೈವೀ ಪ್ರಜ್ಞೆ ತನ್ನನ್ನು ಅತ್ಯಂತ ಭೌತಿಕವಾದುದರಲ್ಲಿ ಪ್ರಕಟಿಸುವ ನಿರ್ಬಂಧಕ್ಕೆ ಒಳಗಾಗುತ್ತದೆ. ಆದರೆ ಎಲ್ಲವೂ ನಿಮ್ಮದೇ ಮಾನದಂಡ, ನಿಮ್ಮದೇ ನಿಷ್ಕಾಪಟ್ಯದ ಮೇಲೆ ಅವಲಂಬಿಸಿರುತ್ತದೆ. ನೀವು ಹೆಚ್ಚು ಹೆಚ್ಚಾಗಿ ಚೈತ್ಯಿಕವಾಗಿ ಸಿದ್ಧರಾಗಿದ್ದರೆ, ಅಷ್ಟೇ ಹೆಚ್ಚಿನ ರೀತಿಯಲ್ಲಿ ನಿಮ್ಮನ್ನು ಸರಿಯಾದ ಮೂಲದತ್ತ, ಸರಿಯಾದ ಗುರುವಿನತ್ತ ಕೊಂಡೊಯ್ಯಲಾಗುತ್ತದೆ. ಚೈತ್ಯ ಹಾಗೂ ಅದರ ನಂಬಿಕೆ ಯಾವಾಗಲೂ ನಿಷ್ಕಪಟದ್ದಾಗಿರುತ್ತವೆ, ಆದರೆ ನಿಮ್ಮ ಬಾಹ್ಯ ಸತ್ತೆಯಲ್ಲಿ ಕಪಟತನವಿದ್ದರೆ, ನೀವು ಆಧ್ಯಾತ್ಮಿಕ ಜೀವನವನ್ನು ಅರಸುವುದರ ಬದಲಾಗಿ



ವೈಯಕ್ತಿಕ ಸಾಮರ್ಥ್ಯಗಳನ್ನು ಅರಸುತ್ತಿದ್ದರೆ ಅದು ನಿಮ್ಮನ್ನು ತಪ್ಪು ದಾರಿಗೆ ಎಳೆಯಬಹುದು. ತಪ್ಪು ದಾರಿಗೆ ಎಳೆಯುವುದು ಅದು, ನಿಮ್ಮ ನಂಬಿಕೆಯಲ್ಲ. ತನ್ನಲ್ಲಿ ಪರಿಶುದ್ಧವಾಗಿರುವ ನಂಬಿಕೆ ಸತ್ತೆಯಲ್ಲಿ ನಿಮ್ನ ಚಲನೆಗಳೊಂದಿಗೆ ಮಿಶ್ರಣಕ್ಕೊಳಗಾಗಬಹುದು ಮತ್ತು ಆಗ ನೀವು ತಪ್ಪು ದಾರಿ ಹಿಡಿಯುತ್ತೀರಿ.

*

ಇತಿಮಿತಿಗಳನ್ನು ಇರಿಸುವವರು ನಾವೇ ಆಗಿರುತ್ತೇವೆ. ನಾವು ಎಲ್ಲ ಕಾಲದಲ್ಲಿ "ಆ ಕಾರ್ಯ ಸಾಧ್ಯವಿದೆ, ಆ ಇನ್ನೊಂದು ಅಸಾಧ್ಯವಾಗಿದೆ. ಇದು, ಹೌದು, ಇದನ್ನು ಕೈಕೊಳ್ಳಬಹುದು, ಅದನ್ನು ಕೈಕೊಳ್ಳಲಾಗದು. ಓ ಇದು ಸತ್ಯವಾದದ್ದು, ಕಾರ್ಯ ಸಾಧ್ಯವಾದದ್ದು, ಅದನ್ನು ಕೈಕೊಂಡೂ ಆಗಿದೆ, ಆದರೆ ಅದು, ಅದು ಅಸಾಧ್ಯವಾಗಿದೆ" ಎಂದು ಹೇಳುತ್ತೇವೆ. ನಮ್ಮ ಸೀಮಿತತೆಗಳ ಸೆರೆಮನೆಯಲ್ಲಿ ನಮ್ಮನ್ನು ಗುಲಾಮರಂತೆ ಇರಿಸಿಕೊಳ್ಳುವವರು, ಎಲ್ಲ ಕಾಲಕ್ಕೆ ನಾವೇ ಆಗಿರುತ್ತೇವೆ, ಆ ಸೆರೆಮನೆ ನಮ್ಮ ಮೂರ್ಖತನ, ಸಂಕುಚಿತತೆ, ಜೀವನದ ನಿಯಮಗಳನ್ನು ಕುರಿತು ಏನನ್ನೂ ತಿಳಿದುಕೊಂಡಿರದ ಅಜ್ಞಾನಿ ಭಾವನೆ ಇವುಗಳಿಂದ ಕೂಡಿಕೊಂಡಿರುತ್ತದೆ. ಜೀವನದ ನಿಯಮಗಳನ್ನು ಕುರಿತು, ನೀವು ಅವೇನಾಗಿರಬಹುದೆಂದು ಯೋಚಿಸುತ್ತಿರೋ ಅಥವಾ ಬಹಳ ಬುದ್ಧಿವಂತ ಜನರು ಅವುಗಳನ್ನು ಕುರಿತು ಏನನ್ನು ಯೋಚಿಸುತ್ತಾರೋ ಅವುಗಳಾಗಿರುವುದಿಲ್ಲ. ಅವು ಬಹಳ ಭಿನ್ನವಾಗಿರುತ್ತವೆ. (ಆಧ್ಯಾತ್ಮಿಕ) ಮಾರ್ಗದಲ್ಲಿ ಮನುಷ್ಯ ಹೆಜ್ಜೆ ಇರಿಸಿದಾಗ, ವಿಶೇಷವಾಗಿ ಮೊದಲ ಹೆಜ್ಜೆ ಇರಿಸಿದಾಗ ಅವುಗಳನ್ನು ಕಂಡುಕೊಳ್ಳಲು ಪ್ರಾರಂಭಿಸುತ್ತಾನೆ.

**(3/152–53), (6/124–25)** **– ಶ್ರೀಮಾತೆ**

*

## ನಂಬಿಕೆಯನ್ನು ಹೆಚ್ಚಿಸುವುದು ಹೇಗೆ?

ನಂಬಿಕೆ ನಿಶ್ಚಿತವಾಗಿ ದೈವೀ ಕೃಪೆಯಿಂದ ನಮಗೆ ದೊರೆತ ಕಾಣಿಕೆಯಾಗಿದೆ. ಅದು ಸನಾತನ ಸತ್ಯದತ್ತ ಒಮ್ಮೆಗೆ ತೆರೆದುಕೊಂಡ ದ್ವಾರದ ಹಾಗಿರುತ್ತದೆ. ಅದರ ಮೂಲಕ ಸತ್ಯವನ್ನು ನೋಡಬಹುದು, ಬಹುಮಟ್ಟಿಗೆ ಸ್ಪರ್ಶಿಸಬಹುದು.

ಇತರ ಪ್ರತಿಯೊಂದರಲ್ಲಿ ಇರುವ ಹಾಗೆ ಮಾನವತೆಯ ಆರೋಹಣದಲ್ಲಿ, ಅದರಲ್ಲಿಯೂ ವಿಶೇಷವಾಗಿ ಪ್ರಾರಂಭದಲ್ಲಿ ಮಾನವ ಪ್ರಯತ್ನದ ಆವಶ್ಯಕತೆ ಇದೆ. ಕೆಲವೊಂದು ವಿಶೇಷ ಪರಿಸ್ಥಿತಿಗಳಲ್ಲಿ, ನಮ್ಮ ಬುದ್ಧಿಗೆ ನಿಲುಕದ ಕಾರಣಗಳಿಂದಾಗಿ

ನಂಬಿಕೆ ಆಕಸ್ಮಿಕವಾಗಿ ಬರಬಹುದು, ಅದರ ಬರುವಿಕೆ ಅನಿರೀಕ್ಷಿತವಾದದ್ದು, ಅದಕ್ಕಾಗಿ ಕೇಳಿಕೊಳ್ಳದೆ ಇದ್ದಂತಹದು ಆಗಿರಬಹುದು. ಅದು ಹಾತೊರೆತಕ್ಕೆ, ಆವಶ್ಯಕತೆಗೆ, ಅಭೀಪ್ಸೆಗೆ ಸತ್ತೆಯಲ್ಲಿರುವ ಏನೋ ಒಂದರ ಅರಸುವಿಕೆಗೆ, ಬಯಕೆಗೆ ಉತ್ತರ ರೂಪದಲ್ಲಿ ಬರಬಹುದು, ಪ್ರಜ್ಞಾಪೂರ್ಣವಾಗಿ ಹಾಗೂ ಪದ್ಧತಿ ಪ್ರಕಾರ ಇರದೆ ಹೋಗಬಹುದು. ಆದರೆ ಯಾವುದೇ ಸಂದರ್ಭದಲ್ಲಿ ನಂಬಿಕೆ ಅನುಗ್ರಹ ರೂಪದಲ್ಲಿ ಬಂದರೆ, ಮನುಷ್ಯನಲ್ಲಿ ಒಮ್ಮೆ ಆಂತರಿಕ ಪ್ರಕಾಶ ಹೊಳೆದರೆ ಅದನ್ನು ಸತತ ಕ್ರಿಯಾಶೀಲ ಪ್ರಜ್ಞೆಯಲ್ಲಿ ರಕ್ಷಿಸಿಕೊಂಡು ಬರುವುದಕ್ಕಾಗಿ ವ್ಯಕ್ತಿಗತ ಪ್ರಯತ್ನ, ಒಟ್ಟಿನಲ್ಲಿ, ಅತ್ಯಗತ್ಯದ್ದಾಗಿರುತ್ತದೆ. ಮನುಷ್ಯ ತನ್ನ ನಂಬಿಕೆಯನ್ನು ಗಟ್ಟಿಯಾಗಿ ಹಿಡಿದಿಟ್ಟುಕೊಳ್ಳಬೇಕು, ನಂಬಿಕೆಗಾಗಿ ಸಂಕಲ್ಪ ಮಾಡಬೇಕು, ಅದನ್ನು ಅರಸಬೇಕು, ಪೋಷಿಸಬೇಕು ಮತ್ತು ರಕ್ಷಿಸಬೇಕು.

ಮಾನವ ಮನಸ್ಸಿನಲ್ಲಿ ಅಸ್ವಸ್ಥ, ವಿಷಾದಕರ ಸಂಶಯ, ವಾದವಿವಾದದ ಪ್ರವೃತ್ತಿ, ಸಂದೇಹವಾದ (scepticism) ಇವುಗಳಿರುವ ರೂಢಿ ಇರುತ್ತದೆ. ಈ ವಿಷಯದಲ್ಲೇ ಮನುಷ್ಯ ಪ್ರಯತ್ನ ಕೈಕೊಳ್ಳಬೇಕು, ಅವುಗಳಿಗೆ ಒಪ್ಪಿಗೆ ನೀಡುವುದನ್ನು, ಕಿವಿಗೊಡುವುದನ್ನು, ಅದಕ್ಕಿಂತಲೂ ಹೆಚ್ಚಾಗಿ ಅವುಗಳನ್ನು ಅನುಸರಿಸುವುದನ್ನು ನಿರಾಕರಿಸಬೇಕು. ಮಾನಸಿಕವಾಗಿ ಸಂಶಯ ಮತ್ತು ಸಂದೇಹವಾದ ಇವುಗಳೊಡನೆ ಆಟವಾಡುವುದಕ್ಕಿಂತ ಹೆಚ್ಚು ಅಪಾಯಕಾರಿಯಾದ ವಿಷಯ ಬೇರೊಂದಿಲ್ಲ. ಅವು ಕೇವಲ ಶತ್ರುಗಳಷ್ಟೇ ಅಲ್ಲ, ಭಯಾನಕ ಕಂದಕಗಳಾಗಿರುತ್ತವೆ. ಒಮ್ಮೆ ಮನುಷ್ಯ ಅವುಗಳಲ್ಲಿ ಬಿದ್ದನಾದರೆ ಅಲ್ಲಿಂದ ತನ್ನನ್ನು ಹೊರಗೆಳೆದುಕೊಳ್ಳುವುದು ಅತ್ಯಂತ ಕಠಿಣವಾಗುತ್ತದೆ.

ವಿಚಾರಗಳೊಡನೆ ಆಟವಾಡುವುದು, ಅವುಗಳನ್ನಿಟ್ಟುಕೊಂಡು ಚರ್ಚೆ ಮಾಡುವುದು, ತಮ್ಮ ನಂಬಿಕೆಯನ್ನು ವಿರೋಧಿಸುವುದು ಇದೆಲ್ಲ ಬಹಳ ಶ್ರೇಷ್ಠ ಮಾನಸಿಕ ಅಭಿರುಚಿ ಎಂದು ಕೆಲವರು ಯೋಚಿಸುತ್ತಾರೆ, ಇದು ಅವರಿಗೆ ಉಚ್ಚಮಟ್ಟದ ಮನೋಭಾವವನ್ನು ಕೊಡುತ್ತದೆ ಮತ್ತು ಈ ರೀತಿಯಲ್ಲಿ ಮೂಢ ನಂಬಿಕೆಗಳು ಹಾಗೂ ಅಜ್ಞಾನ ಇವುಗಳ ಮೇಲೇರಿ ಹೋಗುವಂತೆ ಮಾಡುತ್ತದೆಂದು ಅವರು ಯೋಚಿಸುತ್ತಾರೆ. ಆದರೆ ನೀವು ಸಂಶಯ ಮತ್ತು ಸಂದೇಹವಾದ ಇವುಗಳ ಸೂಚನೆಗಳಿಗೆ ಕಿವಿಗೊಟ್ಟರೆ ಆಗ ನೀವು ಅತ್ಯಂತ ಅಸಂಸ್ಕೃತ ಅಜ್ಞಾನದಲ್ಲಿ ಬಿದ್ದು ಬಿಡುತ್ತೀರಿ ಮತ್ತು ಸರಿಯಾದ ಮಾರ್ಗ ಬಿಟ್ಟು ಅಡ್ಡದಾರಿ ಹಿಡಿಯುತ್ತೀರಿ. ನೀವು ಗೊಂದಲ, ದೋಷ, ವೈರುಧ್ಯಗಳ ಜಟಿಲ ಮಾರ್ಗಗಳಲ್ಲಿ ಸಿಕ್ಕಿಹಾಕಿಕೊಳ್ಳುತ್ತೀರಿ, ಆವುಗಳಿಂದ ಹೊರಬರುವುದಕ್ಕೆ ನಿಮ್ಮಲ್ಲಿ ಯಾವಾಗಲೂ ನಿಶ್ಚಿತತೆ ಇರುವುದಿಲ್ಲ. ಆಂತರಿಕ ಸತ್ಯದಿಂದ ನೀವು ಎಷ್ಟೊಂದು



ದೂರ ಹೋಗಿಬಿಡುತ್ತೀರಿ ಎಂದರೆ ಅದು ನಿಮಗೆ ಕಾಣಿಸದಂತಾಗುತ್ತದೆ ಮತ್ತು ಕೆಲವೊಮ್ಮೆ ನಿಮ್ಮ ಆತ್ಮದೊಡನೆ ಸಾಧ್ಯವಿರುವ ಎಲ್ಲ ಸಂಪರ್ಕವನ್ನೂ ಕಳೆದು ಕೊಳ್ಳುತ್ತೀರಿ.

ಮನುಷ್ಯ ತನ್ನ ನಂಬಿಕೆಯನ್ನು ರಕ್ಷಿಸಿಕೊಳ್ಳಲು ಮತ್ತು ಅದು ಅಭಿವೃದ್ಧಿ ಹೊಂದುವಂತೆ ಮಾಡಲು ವೈಯಕ್ತಿಕ ಪ್ರಯತ್ನದ ಆವಶ್ಯಕತೆ ಇದೆ. ನಂತರ ಬಹಳ ಕಾಲದ ನಂತರ – ಒಂದು ದಿನ ಹಿಂತಿರುಗಿ ನೋಡಿದಾಗ ಅಲ್ಲಿಯವರೆಗೆ ಸಂಭವಿಸಿದ ಪ್ರತಿಯೊಂದೂ, ಅದರಲ್ಲಿ ಅತಿ ಕೆಟ್ಟದ್ದೂ ಕೂಡ, ದೈವೀ ಕೃಪೆಯಿಂದಾಗಿತ್ತು. ನಮ್ಮನ್ನು ಮುಂದೆ ಕರೆದೊಯ್ಯುವುದಕ್ಕಾಗಿ ಆಗಿತ್ತು ಮತ್ತು ಆಗ ವೈಯಕ್ತಿಕ ಪ್ರಯತ್ನವೂ ಕೂಡ ದೈವೀ ಕೃಪೆಯಿಂದ ಸಾಧ್ಯವಾಗಿತ್ತು ಎಂಬುದರ ಬಗ್ಗೆ ಅರಿವುಳ್ಳವರಾಗುತ್ತೇವೆ. ಆದರೆ ಆ ಹಂತ ತಲುಪುವುದಕ್ಕಿಂತ ಮೊದಲು ಮನುಷ್ಯ ಬಹಳ ಮುಂದುವರಿಯಬೇಕಾಗುತ್ತದೆ, ಹೋರಾಟ ನಡೆಸಬೇಕಾಗುತ್ತದೆ, ಕೆಲವೊಮ್ಮೆ ಬಹಳಷ್ಟು ವೇದನೆ ಪಡಬೇಕಾಗುತ್ತದೆ.

ಜಡ ನಿಷ್ಕ್ರಿಯತೆಯಲ್ಲಿ ಉಳಿದುಕೊಂಡು "ನನ್ನಲ್ಲಿ ನಂಬಿಕೆ ಉಂಟಾಗುವುದಿದ್ದರೆ ನಾನು ಅದನ್ನು ಪಡೆಯುವೆ, ಭಗವಂತ ನನಗೆ ಅದನ್ನು ಕೊಡುತ್ತಾನೆ" ಎಂದು ಹೇಳುವುದು ಆಲಸ್ಯತನದ ಅಪ್ರಜ್ಞೆಯ, ಬಹುಮಟ್ಟಿಗೆ ದುರುದ್ದೇಶದ ಮನೋಭಾವವಾಗಿರುತ್ತದೆ.

ಆಂತರಿಕ ಜ್ವಾಲೆ ಪ್ರಜ್ವಲಿಸಬೇಕಾದರೆ ಮನುಷ್ಯ ಅದಕ್ಕೆ ಇಂಧನ ಒದಗಿಸ ಬೇಕಾಗುತ್ತದೆ, ಅದನ್ನು ಜಾಗರೂಕತೆಯಿಂದ ಕಾದುಕೊಂಡು ಬರಬೇಕಾಗುತ್ತದೆ. ಅದರಲ್ಲಿ ಮನುಷ್ಯ ತೊಡೆದು ಹಾಕಬೇಕೆನ್ನುವ ಎಲ್ಲ ದೋಷಗಳನ್ನು, ಪ್ರಗತಿಯನ್ನು ನಿಧಾನಗೊಳಿಸುವುದನ್ನು, ಮಾರ್ಗದಲ್ಲಿ ಅಂಧಕಾರ ಉಂಟುಮಾಡುವುದನ್ನು ಇಂಧನವೆಂದು ಚೆಲ್ಲಿಕೊಡಬೇಕು. ಮನುಷ್ಯ ಆ ಜ್ವಾಲೆಗೆ ಇಂಧನ ಒದಗಿಸದಿದ್ದರೆ ಅದು ಅಪ್ರಜ್ಞೆಯ ಹಾಗೂ ಜಡತ್ವದ ಬೂದಿಯಲ್ಲಿ ಹೊಗೆಯಾಡತೊಡಗುತ್ತದೆ ಮತ್ತು ನಂತರ ಮನುಷ್ಯ ಗುರಿಯನ್ನು ತಲುಪಲು ಕೇವಲ ವರ್ಷಗಳಷ್ಟೇ ಅಲ್ಲ, ಹಲವಾರು ಜನ್ಮಗಳು, ಶತಮಾನಗಳು ಬೇಕಾಗುತ್ತವೆ.

ಅನಂತಪಟ್ಟು ಮೌಲ್ಯವಿರುವ ಏನೋ ಒಂದು ಜನ್ಮ ತಾಳುತ್ತಿರುವಾಗ ಮಾಡುವಂತೆ ಮನುಷ್ಯ ತನ್ನ ನಂಬಿಕೆಯನ್ನು ಜಾಗರೂಕತೆಯಿಂದ ಕಾಪಾಡಿ ಕೊಂಡು ಬರಬೇಕು ಮತ್ತು ಅದಕ್ಕೆ ಧಕ್ಕೆ ತರಬಹುದಾದ ಪ್ರತಿಯೊಂದರಿಂದ ಲಕ್ಷ್ಯಗೊಟ್ಟು ರಕ್ಷಿಸಬೇಕು.

ಪ್ರಾರಂಭದ ಅಜ್ಞಾನ ಹಾಗೂ ಅಂಧಕಾರಗಳಲ್ಲಿ, ನಂಬಿಕೆ ದೈವೀ ಸಾಮರ್ಥ್ಯದ ಅತ್ಯಂತ ನೇರ ಅಭಿವ್ಯಕ್ತಿಯಾಗಿರುತ್ತದೆ, ಅದು ಹೋರಾಟ ನಡೆಸಲು ಮತ್ತು ಗೆದ್ದುಕೊಳ್ಳಲು ಬರುತ್ತದೆ.

**(9/351–52)** **– ಶ್ರೀಮಾತೆ**

*

## ನಂಬಿಕೆ ಮತ್ತು ವಿಶ್ವಾಸ ಇವೆರಡರ ನಡುವಿರುವ ವ್ಯತ್ಯಾಸ

**ಪ್ರಶ್ನೆ :** *ಭಗವಂತನಲ್ಲಿ ಮನುಷ್ಯನಿಗೆ ನಂಬಿಕೆ ಹಾಗೆಯೇ ವಿಶ್ವಾಸ ಕೂಡ ಇದ್ದರೆ ಅವೆರಡರ ನಡುವಿರುವ ವ್ಯತ್ಯಾಸವೇನು?*

**ಶ್ರೀಮಾತೆ :** ನಂಬಿಕೆ ಹೆಚ್ಚು ಸಮಗ್ರವಾದದ್ದು – ಅದನ್ನು ಕುರಿತು ಶ್ರೀ ಅರವಿಂದರು ಬರೆದಿದ್ದಾರೆ. – ವಿಶ್ವಾಸಕ್ಕಿಂತ ಹೆಚ್ಚು ಸಮಗ್ರವಾದದ್ದು. ನಿನಗೆ ಭಗವಂತನಲ್ಲಿ ವಿಶ್ವಾಸವಿದೆ, ಅದರರ್ಥ ಅವನಿಂದ ಬಂದುದೆಲ್ಲ ಯಾವಾಗಲೂ ನಿನಗೆ ಅತ್ಯಂತ ಹೆಚ್ಚಿನ ರೀತಿಯಲ್ಲಿ ಒಳ್ಳೆಯದಾಗಿರುತ್ತದೆ. ನಿನಗೆ ಅವನು ಕಳಿಸಿದ ನಿರ್ಣಯ ಮತ್ತು ಅನುಭವ ಇಲ್ಲವೆ ಅವನು ನಿನ್ನನ್ನು ಇರಿಸಿರುವ ಪರಿಸ್ಥಿತಿಗಳು ಯಾವಾಗಲೂ ನಿನಗೆ ಅತ್ಯಂತ ಒಳ್ಳೆಯದಾಗುವುದಕ್ಕಾಗಿಯೇ ಇರುತ್ತವೆ ಎಂಬುದು ನಿನಗೆ ಮನವರಿಕೆಯಾಗಿದೆ. ಇದು ವಿಶ್ವಾಸ. ಆದರೆ ನಂಬಿಕೆ – ಭಗವಂತನ ಅಸ್ತಿತ್ವದಲ್ಲಿ ಅಲುಗಾಡದ ದೃಢವಾದ ನಂಬಿಕೆ – ಆ ನಂಬಿಕೆ ಇಡೀ ಸತ್ತೆಯನ್ನು ಹಿಡಿದಿಟ್ಟುಕೊಂಡಿರುವ ಏನೋ ಒಂದು.

**ಪ್ರಶ್ನೆ :** *ವಿಶ್ವಾಸ ಇಡಿಯಾದದ್ದು, ಸಮಸ್ತವಾದದ್ದು ಆಗಲಾರದೆ?*

**ಶ್ರೀಮಾತೆ :** ಅವಶ್ಯವಾಗಿ ಇಲ್ಲ. ಸರಿ, ಅಲ್ಲಿ ವ್ಯತ್ಯಾಸದ ಒಂದು ಛಾಯೆಯಿದೆ. – ಹಾಗಿದ್ದಾಗ್ಯೂ, ನನಗೆ ತಿಳಿಯದು, ಅದು ಒಂದೇ ವಿಷಯವಲ್ಲ.

ಮನುಷ್ಯ ತನ್ನನ್ನು ಇಡಿಯಾಗಿ ದೈವೀ ಕಾರ್ಯಕ್ಕಾಗಿ ಕೊಟ್ಟುಕೊಂಡಿರುತ್ತಾನೆ, ಅವನಿಗೆ ಅದರಲ್ಲಿ, ಅದರ ಸಾಧ್ಯತೆಯಲ್ಲಿ ಅಷ್ಟೇ ಅಲ್ಲ ಆದರೆ ಅದು ಸತ್ಯವಾದ ಕಾರ್ಯ, ಅದಿರಲೇಬೇಕು ಎಂಬ ನಂಬಿಕೆ, ಮುಂದೇನು ಸಂಭವಿಸುವುದು ಎಂಬುದನ್ನು ಕೇಳದೆ ಮನುಷ್ಯ ತನ್ನನ್ನು ಅದಕ್ಕೆ ಇಡಿಯಾಗಿ ಕೊಟ್ಟುಕೊಳ್ಳುತ್ತಾನೆ. ಮತ್ತು ಹಾಗಾಗಿ ಅದರಲ್ಲಿ ಇಲ್ಲವೆ ಅದರ ಮೇಲೆ ದೃಢ ನಂಬಿಕೆಯನ್ನು ಕಸಿ ಮಾಡಲಾಗಿರುತ್ತದೆ, ಆ ಗಾಢ ನಂಬಿಕೆ ಎಂದರೆ ಮನುಷ್ಯ ಅದನ್ನು ಸಿದ್ಧಿಸಿಕೊಳ್ಳುವುದಕ್ಕೆ, ಅದರಲ್ಲಿ ಭಾಗವಹಿಸುವುದಕ್ಕೆ ಮತ್ತು ಕೈಕೊಳ್ಳುವುದಕ್ಕೆ ಸಮರ್ಥನಾಗಿದ್ದಾನೆ, ಏಕೆಂದರೆ ಅವನು ಅದಕ್ಕೆ ತನ್ನನ್ನು ಕೊಟ್ಟುಕೊಂಡಿದ್ದಾನೆ, –



ಅವನು ಮಾಡಲಿರುವುದನ್ನು, ಮಾಡಲು ಬಯಸಿದ್ದನ್ನು, ಕೈಕೊಳ್ಳಲು ಶಕ್ತನಾಗುವೆನೆಂಬ ಮತ್ತು ಸಿದ್ಧಿಸಿಕೊಳ್ಳಬೇಕಾದ ಈ ಸಿದ್ಧಿಯನ್ನು ಸಿದ್ಧಿಸಿಕೊಳ್ಳುವೆನೆಂಬ ಗಾಢ ನಂಬಿಕೆ ಅವನಲ್ಲಿರುತ್ತದೆ. ಮೊದಲನೆಯದು ಯಾವ ಪ್ರಶ್ನೆಗಳನ್ನೂ ಕೇಳುವುದಿಲ್ಲ ಪರಿಣಾಮಗಳನ್ನು ಕುರಿತು ಯೋಚಿಸುವುದಿಲ್ಲ, ಅದು ತನ್ನನ್ನು ಇಡಿಯಾಗಿ ಕೊಟ್ಟುಕೊಳ್ಳುತ್ತದೆ – ಅದು ತನ್ನನ್ನು ಕೊಟ್ಟುಕೊಳ್ಳುತ್ತದೆ ಅಷ್ಟೇ. ಇನ್ನೊಂದನ್ನು ಅದರ ಮೇಲೆ ಕಸಿಮಾಡಬಹುದು. "ಹೌದು, ನಾನು ಭಾಗವಹಿಸುತ್ತೇನೆ, ಸಿದ್ಧಿಸಿಕೊಳ್ಳಬೇಕಾದುದನ್ನು ಸಿದ್ಧಿಸಿಕೊಳ್ಳುತ್ತೇನೆ" ಎಂದು ಗಾಢ ನಂಬಿಕೆ ಹೇಳುತ್ತದೆ. ಇನ್ನೊಂದಕ್ಕೆ ಎಲ್ಲವೂ ಆಗಿರುವವನು ಭಗವಂತ, ಅವನು ಎಲ್ಲವನ್ನೂ ಕೈಕೊಳ್ಳಬಲ್ಲ ಮತ್ತು ಕೈಕೊಳ್ಳುತ್ತಾನೆ, ನಿಜವಾದ ಅಸ್ತಿತ್ವವುಳ್ಳವನು ಅವನು ಮಾತ್ರ ಎಂಬ ನಂಬಿಕೆ ಇದೆ. – ಮನುಷ್ಯ ಈ ನಂಬಿಕೆಗೆ, ಭಗವಂತನಿಗೆ ತನ್ನನ್ನು ಇಡಿಯಾಗಿ ಕೊಟ್ಟುಕೊಳ್ಳುತ್ತಾನೆ, ಅಷ್ಟೇ. ಭಗವಂತನ ಅಸ್ತಿತ್ವದಲ್ಲಿ ಮನುಷ್ಯನಿಗೆ ನಂಬಿಕೆ ಇದೆ, ಮತ್ತು ಅವನಿಗೆ ತನ್ನನ್ನು ಕೊಟ್ಟುಕೊಂಡಿರುತ್ತಾನೆ, ಇದರ ಮೇಲೆ ವಿಶ್ವಾಸವೊಂದನ್ನು ಕಸಿ ಮಾಡಬಹುದು, ಈ ವಿಶ್ವಾಸವೆಂದರೆ ಭಗವಂತನೊಡನೆ ಇರುವ ಮನುಷ್ಯನ ಈ ಸಂಬಂಧ, ಅವನಲ್ಲಿ ಇಟ್ಟುಕೊಂಡಿರುವ ಈ ನಂಬಿಕೆ ಕಾರ್ಯ ಮಾಡುವ ರೀತಿಯೆಂದರೆ ಅವನಿಗೆ ಸಂಭವಿಸುವುದೆಲ್ಲ – ಅದೇನೇ ಆಗಿರಲಿ ಅದು ದೈವೀ ಸಂಕಲ್ಪದ ಅಭಿವ್ಯಕ್ತಿಯಾಗಿರುತ್ತದೆ (ಸಹಜವಾಗಿ ಇದನ್ನು ಅರ್ಥಮಾಡಿಕೊಳ್ಳಲಾಗಿರುತ್ತದೆ) ಅಷ್ಟೇ ಅಲ್ಲ, ಆದರೆ ಸಂಭವಿಸ ಬಹುದಾದುದರಲ್ಲಿ ಅತ್ಯಂತ ಒಳ್ಳೆಯದಾಗಿರುತ್ತದೆ, ಅದಕ್ಕಿಂತ ಹೆಚ್ಚು ಒಳ್ಳೆಯದಾವುದೂ ಅವನಿಗೆ ಸಂಭವಿಸುವುದು ಸಾಧ್ಯವಿರಲಿಲ್ಲ, ಏಕೆಂದರೆ ಅವನಿಗಾಗಿ ಭಗವಂತನೇ ಕಾರ್ಯಕೈಕೊಳ್ಳುತ್ತಾನೆ. ಈ ಮನೋಭಾವ ಅವಶ್ಯವಾಗಿ ನಂಬಿಕೆಯ ಭಾಗವಾಗಿರುವುದಿಲ್ಲ. ಏಕೆಂದರೆ ನಂಬಿಕೆ ಯಾವುದನ್ನೂ ಕುರಿತು ಪ್ರಶ್ನಿಸುವುದಿಲ್ಲ, ತನ್ನ ಕೊಟ್ಟುಕೊಳ್ಳುವಿಕೆಯ ಪರಿಣಾಮ ಏನಾಗುವುದೆಂದು ಕೇಳುವುದಿಲ್ಲ, – ಅದು ತನ್ನನ್ನು ಕೊಟ್ಟುಕೊಳ್ಳುತ್ತದೆ – ಅಷ್ಟೇ, ಅದು ಹಾಗಿರುವಾಗ ಗಾಢ ನಂಬಿಕೆ ಬಂದು "ಪರಿಣಾಮ ಅದೇ ಆಗುತ್ತದೆ" ಎಂದು ಹೇಳುತ್ತದೆ. ಮತ್ತು ಇದು ಪರಿಪೂರ್ಣ ವಾಸ್ತವ ಸಂಗತಿ, ಎಂದರೆ ಯಾವ ಲೆಕ್ಕಾಚಾರವಿಲ್ಲದೆ, ಇಡಿಯಾದ ನಂಬಿಕೆಯಿಂದ, ಯಾವ ಬಗೆಯ ಚೌಕಾಶಿಯಿಲ್ಲದೆ ತನ್ನನ್ನು ಕೊಟ್ಟುಕೊಂಡ ಕ್ಷಣದಲ್ಲಿ ಏನೇ ಬರಲಿ "ಅದು ನನಗೆ ಸಂಬಂಧಿಸಿದುದಲ್ಲ, ನಾನು ಕೇವಲ ನನ್ನನ್ನು ಕೊಟ್ಟುಕೊಳ್ಳುತ್ತೇನೆ" ಎಂದು ಮನುಷ್ಯ ಹೇಳುತ್ತಾನೆ, – ಆಗ ಎಲ್ಲ ಪರಿಸ್ಥಿತಿಗಳಲ್ಲಿ, ಪ್ರತಿಕ್ಷಣದಲ್ಲಿ ಸ್ವಯಂಚಾಲಿತವೆಂಬಂತೆ ನಿಮಗೆ ಅತ್ಯಂತ ಒಳ್ಳೆಯದೇ ಸಂಭವಿಸುವುದು... ಅದು ನೀವು ಕಲ್ಪನೆ ಮಾಡಿಕೊಳ್ಳುವ ರೀತಿಯದಾಗಿರುವುದಿಲ್ಲ

(ಸ್ವಾಭಾವಿಕವಾಗಿ ಯೋಚನೆ ಏನನ್ನೂ ತಿಳಿದಿರುವುದಿಲ್ಲ), ಆದರೆ ನೈಜತೆಯಲ್ಲಿ ಅದು ಹಾಗಿರುತ್ತದೆ. ಸರಿ, ಇದರ ಬಗ್ಗೆ ಅರಿವು ತಂದುಕೊಳ್ಳುವ ಮತ್ತು ಗಾಢ ನಂಬಿಕೆ ಹೊಂದುವ ಸತ್ತೆಯ ಒಂದು ಭಾಗವಿದೆ. ಇದು ನಂಬಿಕೆಗೆ ಅಧಿಕವಾಗಿ ಕೂಡಿಕೊಂಡಿರುತ್ತದೆ ಮತ್ತು ಅದಕ್ಕೆ ಹೆಚ್ಚಿನ ಬಲಕೊಡುತ್ತದೆ. ಆ ಬಲ – ಅದನ್ನು ನಾನು ಹೇಗೆ ಹೇಳಲಿ? ಇಡಿಯಾಗಿ ಸ್ವೀಕಾರ ಮಾಡುವ ಮತ್ತು ಸಂಭವಿಸಿದ್ದನ್ನು ಅತ್ಯಂತ ಒಳ್ಳೆಯ ರೀತಿಯಲ್ಲಿ ಉಪಯೋಗ ಮಾಡಿಕೊಳ್ಳುವ ಬಲವಾಗಿರುತ್ತದೆ.

*

ಭಗವಂತನಲ್ಲಿ ಸಂಪೂರ್ಣ ವಿಶ್ವಾಸ ಹೊಂದಿರುವ ನಂಬಿಕೆ ನಿಮ್ಮದಾಗಿರದಿದ್ದರೆ, ಸರಿ, ನಿಮ್ಮಲ್ಲಿ ನಂಬಿಕೆ ಇದೆ ಎಂಬ ಭಾವನೆಯನ್ನು ಇಟ್ಟುಕೊಂಡು ನೀವು ಸುಲಭವಾಗಿ ಉಳಿದುಕೊಂಡು ಬಿಡಬಹುದು, ಆದಾಗ್ಯೂ ದೈವೀ ಸಾಮರ್ಥ್ಯದಲ್ಲಿ, ದೈವೀ ಒಳ್ಳೆಯತನದಲ್ಲಿ ವಿಶ್ವಾಸವನ್ನು ಇಲ್ಲವೆ ಭಗವಂತ ನಿಮ್ಮಲ್ಲಿರಿಸಿರುವ ವಿಶ್ವಾಸವನ್ನು ಕಳೆದುಕೊಳ್ಳಬಹುದು. ಈ ಮೂರು ಸಂಗತಿಗಳು ತೊಂದರೆ ಉಂಟುಮಾಡುವುದಕ್ಕೆ ಕಾರಣಗಳಾಗುತ್ತವೆ.

ಅಲುಗಾಡದ ನಂಬಿಕೆ ಎಂದು ಕರೆಯಬಹುದಾದುದನ್ನು ನೀವು ಭಗವಂತನಲ್ಲಿ ಇರಿಸಿದ್ದೇವೆ ಮತ್ತು "ಭಗವಂತನೇ ಎಲ್ಲವನ್ನೂ ಕೈಕೊಳ್ಳುವವನು ಅವನು ಮಾತ್ರ ಅದನ್ನು ಮಾಡಬಲ್ಲ, ನನ್ನಲ್ಲಿ ಹಾಗೂ ಇತರರಲ್ಲಿ ಸಂಭವಿಸುವುದೆಲ್ಲ ಕೇವಲ ಭಗವಂತನ ಕಾರ್ಯ" ಎಂದು ಹೇಳುವವರಲ್ಲಿ ವಿಶ್ವಾಸವಿರದಿದ್ದರೆ ಅವರು ಅದೇ ಬಗೆಯ ತರ್ಕ ಮಾಡುವುದನ್ನು ಮುಂದುವರಿಸಿ, ಕೆಲ ಸಮಯದ ನಂತರ, ಜಗತ್ತಿನಲ್ಲಿ ಸಂಭವಿಸುವ ಎಲ್ಲ ಭಯಾನಕ ತಪ್ಪುಗಳಿಗೆ ಭಗವಂತನೇ ಕಾರಣವಾಗಿರುವನೆಂದು ಅವನನ್ನು ದೂಷಿಸುತ್ತಾರೆ ಮತ್ತು ಅವನನ್ನು ಕ್ರೂರ ಹಾಗೂ ಭಯಾನಕ ರಾಕ್ಷಸನನ್ನಾಗಿ ಮಾಡುತ್ತಾರೆ.

ನಂಬಿಕೆ ಹೊಂದಿರುವ ಜನರಿರುತ್ತಾರೆ, ಆದರೆ ಅವರು ತಮಗೇ ಹೇಳಿಕೊಳ್ಳುತ್ತಾರೆ: "ಸರಿ, ಭಗವಂತನಲ್ಲಿ ನನಗೆ ನಂಬಿಕೆ ಇದೆ. ಆದರೆ ಜಗತ್ತು, ಅದು ಹೇಗಿದೆ ಎಂಬುದು ನನಗೆ ಚೆನ್ನಾಗಿ ತಿಳಿದಿದೆ! ಮೊಟ್ಟಮೊದಲು ಹೇಳುವುದಾದರೆ ನಾನು ಎಷ್ಟೊಂದು ವೇದನೆಪಡುತ್ತಿದ್ದೇನೆ, ಅಲ್ಲವೆ? ನಾನು ಬಹಳ ಅಸಂತುಷ್ಟನಾಗಿದ್ದೇನೆ, ನನ್ನ ನೆರೆಹೊರೆಯವರಿಗಿಂತ ಅತ್ಯಂತ ಅಸಂತುಷ್ಟನಾಗಿದ್ದೇನೆ" – ಏಕೆಂದರೆ ಮನುಷ್ಯ ಯಾವಾಗಲೂ ತನ್ನ ನೆರೆಹೊರೆಯವರಿಗಿಂತ ಹೆಚ್ಚು ಅಸಂತುಷ್ಟನಾಗಿರುತ್ತಾನೆ – " ನಾನು ಬಹಳ ಅಸಂತುಷ್ಟನಾಗಿದ್ದೇನೆ. ಜೀವನ ನನಗೆ ಕ್ರೂರವಾಗಿದೆ. ಆದರೆ ಭಗವಂತ ಅವನು



ಭಗವಂತನೇ, ಅವನು ಎಲ್ಲ ರೀತಿಯಿಂದ ಒಳ್ಳೆಯವನು, ಉದಾರನಾದವನು, ಸಾಮರಸ್ಯದಿಂದ ಇರುವವನು, ಹಾಗಿದ್ದರೂ ನಾನು ಇಷ್ಟೊಂದು ಅಸಂತುಷ್ಟನಾಗಿರುವುದು ಏಕೆ? ಅವನಲ್ಲಿ ಸಾಮರ್ಥ್ಯವಿರಲಿಕ್ಕಿಲ್ಲ. ಹಾಗಿರದಿದ್ದರೆ ಇಷ್ಟೊಂದು ಒಳ್ಳೆಯವನಾದ ಅವನು ಇಷ್ಟೊಂದು ವೇದನೆಗೊಳಗಾಗಲು ನನ್ನನ್ನು ಏಕೆ ಬಿಟ್ಟುಕೊಡುತ್ತಿದ್ದ?"

ತೊಂದರೆ ಉಂಟುಮಾಡುವುದಕ್ಕೆ ಅದು ಎರಡನೆಯ ಕಾರಣ.

ಮತ್ತು ಮೂರನೆಯ ಕಾರಣ ಹೀಗಿದೆ: ಅತ್ಯಂತ ವಕ್ರವಾಗಿರುವ, ಅತಿ ಹೆಚ್ಚು ವಿನಮ್ರತೆ ಇರುವ ಜನರಿರುತ್ತಾರೆ. ಅವರು " ನಿಶ್ಚಿತವಾಗಿ ಭಗವಂತ ನನ್ನನ್ನು ದೂರ ಎಸೆದು ಬಿಟ್ಟಿದ್ದಾನೆ. ನಾನು ಯಾವ ಉಪಯೋಗಕ್ಕೂ ಬಾರದವನು, ನನ್ನನ್ನು ಕಟ್ಟಿಕೊಂಡು ಅವನು ಏನು ಮಾಡಬಲ್ಲ. ಆಟದಲ್ಲಿ ಭಾಗವಹಿಸುವುದನ್ನು ಬಿಟ್ಟುಕೊಡುವುದಷ್ಟೇ ನನಗೆ ಉಳಿದಿರುವ ಮಾರ್ಗ, ಏಕೆಂದರೆ ನಾನು ಅಯೋಗ್ಯನೆಂಬುದನ್ನು ಅವನು ಕಂಡುಕೊಂಡಿದ್ದಾನೆ!" ಎಂದು ಹೇಳುತ್ತಾರೆ.

ಹಾಗಾಗಿ ನಂಬಿಕೆಯ ಜೊತೆಗೆ ದೈವೀಕೃಪೆಯಲ್ಲಿ ಇಡಿಯಾದ, ಸಂಪೂರ್ಣವಾದ ವಿಶ್ವಾಸವನ್ನು ಅಧಿಕವಾಗಿ, ಇರಿಸದಿದ್ದರೆ ತೊಂದರೆಗಳು ಉಂಟಾಗುವವು. ಆದ್ದರಿಂದ ಎರಡೂ ಸಂಗತಿಗಳು ಅವಶ್ಯವಾಗಿವೆ....

**(16/122–23), (8/38–391)** **– ಶ್ರೀಮಾತೆ**

*

## ಶ್ರದ್ಧಾ

ಈ ಶ್ರದ್ಧಾ ಶಬ್ದವನ್ನು ಇಂಗ್ಲೀಷ ಶಬ್ದ faith ದಿಂದ ಸರಿಯಾಗಿ ಅಭಿವ್ಯಕ್ತಪಡಿಸಲಿಕ್ಕಾಗದು – ಅದು ನೈಜತೆಯಲ್ಲಿ ಪರಮೋಚ್ಚ ದಿವ್ಯಾತ್ಮದ ಪ್ರಭಾವವಾಗಿರುತ್ತದೆ ಮತ್ತು ಅದರ ಪ್ರಕಾಶ ನಮ್ಮ ಅತಿಮಾನಸ ಸತ್ತೆಯಿಂದ ಬಂದ ಒಂದು ಸಂದೇಶ. ಆ ಸಂದೇಶ ನಿಮ್ಮ ಸ್ವಭಾವಕ್ಕೆ – ಅದರ ಸದ್ಯದ ಕ್ಷುದ್ರ ಸ್ಥಿತಿಯಿಂದ ಶ್ರೇಷ್ಠ ಸ್ವ–ಸಂಭೂತಿಯತ್ತ, ಸ್ವ–ಅತಿಶಯಿಸುವಿಕೆಯತ್ತ ಮೇಲಕ್ಕೇರಲು ಕರೆ ಕೊಡುತ್ತದೆ. ಮತ್ತು ಆ ಪ್ರಭಾವವನ್ನು ಸ್ವೀಕರಿಸುವುದು ಮತ್ತು ಅದಕ್ಕೆ ಉತ್ತರ ನೀಡುವುದು ಬುದ್ಧಿಮತ್ತೆಯಾಗಲಿ, ಹೃದಯವಾಗಲಿ, ಪ್ರಾಣಿಕ ಮನಸ್ಸಾಗಲಿ ಆಗಿರುವುದಿಲ್ಲ, ಅದು ತನ್ನ ಅದೃಷ್ಟದ ಹಾಗೂ ಮಣಿಹದ ಸತ್ಯವನ್ನು ಚೆನ್ನಾಗಿ ಅರಿತುಕೊಂಡ ಆಂತರಿಕ ಆತ್ಮವಾಗಿರುತ್ತದೆ.

**(21/746)**

ಈ ನಂಬಿಕೆ ಮೇಲ್ಗಡೆಯಿಂದ ಬಂದ ಆಧಾರ, ಅದು ರಹಸ್ಯ ಪ್ರಕಾಶ ಚೆಲ್ಲಿಕೊಟ್ಟ ಉಜ್ವಲ ಛಾಯೆ. ಆ ಪ್ರಕಾಶ ಬುದ್ಧಿಮತ್ತೆಯನ್ನು ಮತ್ತು ಅದರ ಮಾಹಿತಿಯನ್ನು ಮೀರಿರುತ್ತದೆ, ಅದು ಅಡಗಿರುವ ಜ್ಞಾನದ ಹೃದಯ, ಕೂಡಲೆ ಕಂಡುಬರುವ ತೋರಿಕೆಗಳಿಗೆ ಅಧೀನವಾಗಿರದಂತಹದು.

**(20/233)**

ನಂಬಿಕೆ ಇನ್ನೂ ಪ್ರಕಟವಾಗಿರದ, ಸಿದ್ಧಿಸಿಕೊಂಡಿರದ ಏನೋ ಒಂದನ್ನು ಕುರಿತು ಇರುವ ಸಾಕ್ಷಿ, ಆದಾಗ್ಯೂ ನಮ್ಮ ಅಂತರಂಗದಲ್ಲಿರುವ ದೈವೀ ತಿಳಿದುಕೊಳ್ಳುವವನು, ಸೂಚನೆಗಳಾವೂ ಇಲ್ಲದೆ ಇದ್ಯಾಗ್ಯೂ ಸತ್ಯವೆಂದೂ ಪರಮೋಚ್ಚ ರೀತಿಯಲ್ಲಿ ಸಿದ್ಧಿಸಿಕೊಳ್ಳಲು ಅನುಸರಿಸಲು ಯೋಗ್ಯವೆಂದೂ ಭಾವಿಸುತ್ತಾನೆ. ನಮ್ಮೊಳಗಿರುವ ಈ ವಿಷಯ, ಮನಸ್ಸಿನಲ್ಲಿ ಗಟ್ಟಿಯಾದ ನಂಬಿಕೆ ಇಲ್ಲದಿದ್ದಾಗ್ಯೂ, ಪ್ರಾಣಿಕವು ಹೋರಾಟ ಮತ್ತು ಬಂಡಾಯ ನಡೆಸುತ್ತಿದ್ದಾಗ್ಯೂ, ನಿರಾಕರಿಸುತ್ತಿದ್ದಾಗ್ಯೂ ಉಳಿದುಕೊಳ್ಳಬಹುದು.

**(23/573)**

ನಂಬಿಕೆ, ಪ್ರಕಟಣೆಯಲ್ಲಿ ಇನ್ನೂ ಸಿದ್ಧಿಸಿಕೊಂಡಿರದ ದೈವೀ ಸತ್ಯದ ಇಲ್ಲವೆ ನಿಜವಾದ ದೈವೀ ವಿಚಾರದ ಪ್ರತಿಫಲಿತ ಪ್ರಕಾಶ.

**(20/39)**

ನಂಬಿಕೆ, ಮನಸ್ಸಿನ ಅಜ್ಞಾನ, ಸಂಶಯಗಳು, ದೌರ್ಬಲ್ಯ, ಅನಿಶ್ಚಿತತೆಗಳು ಇವೆಲ್ಲವುಗಳ ಮಧ್ಯೆ ಆತ್ಮದಿಂದ ಬಂದ ರಹಸ್ಯ ಪ್ರಕಾಶ ಮತ್ತು ಸಾಮರ್ಥ್ಯ. ಮನುಷ್ಯನಿಗೆ ನಂಬಿಕೆ ಅತ್ಯಗತ್ಯವಾದದ್ದು, ಏಕೆಂದರೆ ಅದಿಲ್ಲದೆ ಅವನು ಈ ದೈವೀ ಅಜ್ಞಾತವಾದುದರ ಮೂಲಕ ತನ್ನ ಪ್ರಯಾಣದಲ್ಲಿ ಮುಂದುವರಿಯಲಾರನು. ಆದರೆ ಅದನ್ನು ಹೇರುವುದು ಯೋಗ್ಯವಾದದ್ದಲ್ಲ. ಅದು ಮುಕ್ತ ಗ್ರಹಿಕೆಯಿಂದ ಇಲ್ಲವೆ ಆತ್ಮದ ಆಜ್ಞಾರ್ಥಕ ನಿರ್ದೇಶನದಿಂದ ಬರಬೇಕು.

**(19/864)**

... ಅದರರ್ಥ ಆಂತರಿಕ ಸತ್ತೆಯಲ್ಲಿ ಅತೀಂದ್ರಿಯ ವಿಷಯಗಳ ಸತ್ಯಗಳನ್ನು ಕುರಿತು ಕ್ರಿಯಾತ್ಮಕ ಅಂತರ್ಬೋಧೆಯಿಂದ ಮನವರಿಕೆ ಮಾಡಿಕೊಳ್ಳುವುದಾಗಿದೆ, ಅವುಗಳನ್ನು ಭೌತಿಕ ಸಾಕ್ಷಿಯಿಂದ ಪ್ರಮಾಣೀಕರಿಸಲಾಗದು, ಆದರೆ ಅವು ಅನುಭವಕ್ಕೆ ಅಧೀನವಾದ ವಿಷಯಗಳಾಗಿವೆ.

**(22/167)**



ಆಧ್ಯಾತ್ಮಿಕ ವಿಷಯಗಳಲ್ಲಿ ಸಾಧಕನಿಂದ ಬೇಡಲಾದ ನಂಬಿಕೆ ಅಜ್ಞಾನದ್ದಲ್ಲ, ಆದರೆ ಪ್ರಕಾಶದಿಂದ ಕೂಡಿದ ನಂಬಿಕೆ, ಪ್ರಕಾಶದಲ್ಲಿರುವ ನಂಬಿಕೆ, ಅಂಧಕಾರದಲ್ಲಿರುವುದಲ್ಲ. ಅದನ್ನು ಸಂದೇಹವಾದಿ ಬುದ್ಧಿಮತ್ತೆ ಕುರುಡು ನಂಬಿಕೆ ಎಂದು ಕರೆಯುತ್ತದೆ, ಏಕೆಂದರೆ ಅದು ಬಾಹ್ಯ ತೋರಿಕೆಗಳ, ತೋರಿಬರುವ ವಾಸ್ತವ ಸಂಗತಿಗಳ ಆಧಾರ ಪಡೆಯುವುದಿಲ್ಲ, – ಏಕೆಂದರೆ ಅದು ಹಿಂದಿರುವ ಸತ್ಯದತ್ತ ನೋಡುತ್ತದೆ – ಮತ್ತು ಏಕೆಂದರೆ ಪ್ರಮಾಣ ಹಾಗೂ ಸಾಕ್ಷಿಗಳ ಆಧಾರದಿಂದ ಹೆಜ್ಜೆ ಮುಂದಿರಿಸುವುದಿಲ್ಲ. ಅದು ಒಂದು ಅಂತರ್ಬೋಧೆ, ಅನುಭವವನ್ನು ಸಮರ್ಥಿಸುವುದಕ್ಕೆ ಕಾದುಕೊಂಡಿರುವ ಅಂತರ್ಬೋಧೆಯಷ್ಟೇ ಅಲ್ಲ, ಆದರೆ ಅನುಭವದತ್ತ ಕೊಂಡೊಯ್ಯುವ ಅಂತರ್ಬೋಧೆ. ನನ್ನ ರೋಗವನ್ನು ನಾನೇ ವಾಸಿಮಾಡಿಕೊಳ್ಳುವುದರಲ್ಲಿ ನನಗೆ ನಂಬಿಕೆ ಇದ್ದರೆ ಕೆಲಕಾಲದ ನಂತರ ನನ್ನ ರೋಗ ವಾಸಿಮಾಡಿಕೊಳ್ಳುವ ವಿಧಾನದ ರಹಸ್ಯವನ್ನು ಕಂಡು ಹಿಡಿಯುವುದರಲ್ಲಿ ಮುಕ್ತಾಯ ಕಂಡುಕೊಳ್ಳುತ್ತೇನೆ.

**(22/166)**

(ಕುರುಡು ನಂಬಿಕೆ) ಪದಗುಚ್ಛಕ್ಕೆ ನಿಜವಾದ ಅರ್ಥವಿಲ್ಲ. ಅದರರ್ಥ ಪ್ರಮಾಣವಿಲ್ಲದೆ ಅವರು ನಂಬುವುದಿಲ್ಲ ಎಂದು ನಾನು ಭಾವಿಸುತ್ತೇನೆ – ಆದರೆ ಪ್ರಮಾಣವನ್ನು ಒದಗಿಸಿದ ನಂತರ ಕೈಕೊಂಡ ತೀರ್ಮಾನ ನಂಬಿಕೆಯಾಗಿರುವುದಿಲ್ಲ, ಅದು ಜ್ಞಾನ ಇಲ್ಲವೆ ಮಾನಸಿಕ ಅಭಿಪ್ರಾಯ. ಪ್ರಮಾಣ ಇಲ್ಲವೆ ಜ್ಞಾನ ಇರುವುದಕ್ಕಿಂತ ಮೊದಲು ಮನುಷ್ಯ ಹೊಂದಿರುವ ಏನೋ ಒಂದು ನಂಬಿಕೆಯಾಗಿರುತ್ತದೆ ಮತ್ತು ಅದು ಜ್ಞಾನವನ್ನು ಇಲ್ಲವೆ ಅನುಭವವನ್ನು ತಲುಪಲು ಸಹಾಯ ಮಾಡುತ್ತದೆ, ಭಗವಂತ ಅಸ್ತಿತ್ವದಲ್ಲಿದ್ದಾನೆ ಎಂಬುದಕ್ಕೆ ಪ್ರಮಾಣವಿಲ್ಲ, ಆದರೆ ನನಗೆ ಭಗವಂತನಲ್ಲಿ ನಂಬಿಕೆ ಇದ್ದರೆ ಆಗ ಭಗವಂತನನ್ನು ಅನುಭವಕ್ಕೆ ತಂದುಕೊಳ್ಳುವತ್ತ ತಲುಪಬಹುದು.

**(23/572)**

ಕುರುಡು ನಂಬಿಕೆ ತಪ್ಪಾದದ್ದೇ ಎಂದು ಶ್ರೀ ರಾಮಕೃಷ್ಣರಿಗೆ ಕೇಳಿದಾಗ ಅವರು "ಕುರುಡು ನಂಬಿಕೆ ಮಾತ್ರ ಹೊಂದಲು ಯೋಗ್ಯವಾದದ್ದು" ಎಂದು ಹೇಳುವಷ್ಟರ ಮಟ್ಟಿಗೆ ಅವರು ಸಾಗಿ ಹೋಗಿದ್ದರು. ಏಕೆಂದರೆ ನಂಬಿಕೆ ಕುರುಡಾಗಿರುತ್ತದೆ ಇಲ್ಲವೆ ಅದು ನಂಬಿಕೆಯಾಗಿರುವುದಿಲ್ಲ, ಆದರೆ ಮತ್ತೇನೋ ಆಗಿರುತ್ತದೆ – ತರ್ಕದಿಂದ ದೊರಕಿಸಿದ ತೀರ್ಮಾನ, ಪ್ರಮಾಣೀಕರಿಸಿದ ಮನವರಿಕೆ ಇಲ್ಲವೆ ಖಚಿತ ಪಡಿಸಿಕೊಂಡ ಜ್ಞಾನ.

**(23/572–73)**

ನಂಬಿಕೆ ಇಲ್ಲದೆ ಇರುವುದು ಕುರುಡುತನ, – ಅದು ಬಹಳ ಮುಂದೆ ನೋಡಲಾರದು, ಬಲಕ್ಕೆ ಉತ್ತೇಜನ ನೀಡುವುದಿಲ್ಲ, ಕ್ರಿಯೆಗೆ ಸ್ಫೂರ್ತಿ ಕೊಡುವುದಿಲ್ಲ.

**(1/290)**

ಸಿದ್ಧಿಯು ದೊರೆತ ನಂತರ ನಂಬಿಕೆ ದೈವಿಕವಾಗಿ ನೆರವೇರಿಕೆ ಕಂಡುಕೊಂಡು, ಸಂಪೂರ್ಣಗೊಂಡು ಸನಾತನ ಜ್ಞಾನದ ಜ್ವಾಲೆಯಾಗಿ ಪರಿವರ್ತನೆ ಹೊಂದುತ್ತದೆ.

**(20/77)**

ಸಿದ್ಧಿಯನ್ನು ತಲುಪುವುದಕ್ಕೆ ನಂಬಿಕೆ ಅವಶ್ಯವಾದ ಸಾಧನ, ಏಕೆಂದರೆ ನಾವು ಅಜ್ಞಾನಿಗಳಾಗಿದ್ದೇವೆ, ಮತ್ತು ಸಿದ್ಧಿಸಿಕೊಳ್ಳುವುದನ್ನು ನಾವು ಅರಸುತ್ತಿರುವುದನ್ನು ಇನ್ನೂ ತಿಳಿದುಕೊಂಡಿರುವುದಿಲ್ಲ. ನಂಬಿಕೆ ನಿಜವಾಗಿ ಜ್ಞಾನ, ಅದು ತನ್ನದೇ ಪ್ರಕಟಣೆಯಾಗುವ ಪೂರ್ವದಲ್ಲಿ ಅಜ್ಞಾನಕ್ಕೆ ತಿಳಿವಳಿಕೆ ನೀಡುವಂತಹದು, ಇನ್ನೂ ಉದಯಿಸದ ಸೂರ್ಯ ಮೊದಲೇ ಕಳಿಸಿಕೊಟ್ಟ ಮಿನುಗು ನೋಟ. ಸೂರ್ಯ ಉದಯಿಸಿದ ನಂತರ ಅವನ ಮಿನುಗು ನೋಟದ ಆವಶ್ಯಕತೆ ಇರುವುದಿಲ್ಲ. ಅತಿಮಾನಸ ಜ್ಞಾನ ತನಗೆ ತಾನೇ ಆಧಾರವಾಗಿರುತ್ತದೆ, ಅದಕ್ಕೆ ನಂಬಿಕೆಯ ಆಧಾರದ ಆವಶ್ಯಕತೆ ಇರುವುದಿಲ್ಲ, ಅದು ತನ್ನದೇ ದೃಢ ನಂಬಿಕೆಯ ಮೂಲಕ ಜೀವಿಸುತ್ತದೆ, ಇನ್ನೂ ಮುಂದಿನ ಪ್ರಗತಿಪರತೆ, ಅಭಿವೃದ್ಧಿ ಇವುಗಳಿಗೆ ನಂಬಿಕೆ ಅವಶ್ಯವೆಂದು ನೀನು ಹೇಳಬಹುದು. ಇಲ್ಲ, ಇನ್ನೂ ಮುಂದಿನ ಬೆಳವಣಿಗೆ ಜ್ಞಾನದ ಆಧಾರದ ಮೇಲೆ ಮುಂದುವರಿಯುತ್ತದೆ, ಅವಿದ್ಯೆಯ ಆಧಾರದ ಮೇಲಲ್ಲ. ನಾವು ದೈವೀ ಜ್ಞಾನದ ಪ್ರಕಾಶದಲ್ಲಿ, ಅದರದೇ ಹೆಚ್ಚು ವಿಸ್ತಾರವಾದ, ಸ್ವ–ನೆರವೇರಿಕೆಯ ನೀಳನೋಟಗಳತ್ತ ಹೆಜ್ಜೆ ಇರಿಸುತ್ತೇವೆ.

**(22/22)** **– ಶ್ರೀ ಅರವಿಂದರು**

*

## ಇದು ನಿಮಗೆ ತಿಳಿದಿತ್ತೆ?

(ನಂಬಿಕೆ – ಮುಚ್ಚುಮರೆಯಲ್ಲಿ ಹಾಗೂ ಮುಚ್ಚುಮರೆಯಿಲ್ಲದೆ ನಡೆಯುವ ಎಲ್ಲ ಪ್ರಯತ್ನ ಹಾಗೂ ಕ್ರಿಯೆಗಳಿಗೆ ಕೇಂದ್ರಬಿಂದು)

ತರ್ಕದ ಪ್ರಕಾಶಕ್ಕನುಗುಣವಾಗಿ ಚಲಿಸುತ್ತಿದ್ದೇನೆಂದು ಜಗತ್ತು ಯೋಚಿಸುತ್ತದೆ, ಅದರೆ ಅದು ತನ್ನ ನಂಬಿಕೆಗಳು ಹಾಗೂ ಹುಟ್ಟುಗುಣಗಳಿಂದ ಬಲವಂತಕ್ಕೊಳಗಾಗುತ್ತದೆ.



ತರ್ಕ ನಂಬಿಕೆಯ ಜೊತೆಗೆ ಹೊಂದಾಣಿಕೆ ಮಾಡಿಕೊಳ್ಳುತ್ತದೆ ಇಲ್ಲವೆ ಹುಟ್ಟುಗುಣಗಳಿಗೆ ಸಮರ್ಥನೆ ದೊರಕಿಸಲು ವಾದ ಮಾಡುತ್ತದೆ, ಆದರೆ ಅದು ಪ್ರಚೋದನೆಯನ್ನು ಅವಚೇತನದಿಂದ ಪಡೆಯುತ್ತದೆ, ಆದ್ದರಿಂದ ಜನರು ತರ್ಕಬದ್ಧವಾಗಿ ಕ್ರಿಯೆ ಕೈಕೊಳ್ಳುತ್ತಿದ್ದೇವೆಂದು ಯೋಚಿಸುತ್ತಾರೆ.

**(17/110)**

ಮನುಷ್ಯನಲ್ಲಿರುವ ಏನೋ ಒಂದು ಅವನ ನಂಬಿಕೆಗೆ ಅಂಟಿಕೊಂಡಿರುತ್ತದೆ, ಅದು ಹಾಗಲ್ಲದಿದ್ದರೆ ಅವನು ಬದಲಾಗುವ ಮನಸ್ಸಿನ ಆಟಿಗೆ ವಸ್ತುವಾಗುತ್ತಿದ್ದ ಇಲ್ಲವೆ ಪರಿಸ್ಥಿತಿಗಳ ಒಂದು ಆಟವಾಗುತ್ತಿದ್ದ.

**(23/616)**

ಈ ಆತ್ಮನಂಬಿಕೆ, ಅದರ ಯಾವುದೋ ಒಂದು ರೂಪದಲ್ಲಿ, ಸತ್ತೆಯ ಕ್ರಿಯೆಗೆ ಅತ್ಯಗತ್ಯವಾದದ್ದು ಮತ್ತು ಅದಿಲ್ಲದೆ ಜೀವನದಲ್ಲಿ ಮನುಷ್ಯ ಒಂದು ಹೆಜ್ಜೆ ಕೂಡ ಮುಂದಿಡಲಾರ, ಅದಕ್ಕೂ ಕಡಿಮೆ ರೀತಿಯಲ್ಲಿ, ಇನ್ನೂ ಸಿದ್ಧಿಸಿಕೊಳ್ಳಲಾಗಿರದ ಪರಿಪೂರ್ಣತೆಯತ್ತ ಯಾವ ಹೆಜ್ಜೆಯನ್ನು ಮುಂದಿರಿಸಲಾರ. ಅದು ಎಷ್ಟೊಂದು ಪ್ರಧಾನವಾದ ಮತ್ತು ಅವಶ್ಯವಾದ ವಿಷಯವೆಂದರೆ ಗೀತೆ* ಅದನ್ನು ಕುರಿತು 'ಮನುಷ್ಯನ ಶ್ರದ್ಧೆ ಏನಾಗಿರುತ್ತದೆಯೋ ಅದೇ ಅವನಾಗಿರುತ್ತಾನೆ', 'ಯೋ ಯಚ್ಛ್ರದ್ಧಃ ಸ ಏವ ಸಃ' ಎಂದು ನ್ಯಾಯಯುತವಾಗಿಯೇ ಹೇಳಿದೆ. ಯಾವುದೊಂದು ಸಾಧ್ಯವಿದೆ ಎಂದು ಕಂಡುಕೊಳ್ಳಲು ಮತ್ತು ಅದಕ್ಕಾಗಿ ಹೋರಾಟ ನಡೆಸಲು ಮನುಷ್ಯನಲ್ಲಿ ನಂಬಿಕೆ ಇದ್ದಾಗ ಅದನ್ನು ಅವನು

---

* ಒಂದು ಅಸಾಧಾರಣ ಸಾಲಿನಲ್ಲಿ ಗೀತೆ ನಮಗೆ ಹೇಳಿದ್ದು ಹೀಗಿದೆ: ಈ ಪುರುಷ, ಮನುಷ್ಯನಲ್ಲಿರುವ ಈ ಆತ್ಮ ಶ್ರದ್ಧೆಯಿಂದ ರೂಪುಗೊಂಡಿದ್ದಾನೆ, ಆ ಶ್ರದ್ಧೆ ಒಂದು ನಂಬಿಕೆ, ಇರುವುದಕ್ಕಾಗಿ ಒಂದು ಸಂಕಲ್ಪ, ತನ್ನಲ್ಲಿ ಹಾಗೂ ಅಸ್ತಿತ್ವದಲ್ಲಿ ನಂಬಿಕೆ ಇವುಗಳಿಂದ ಕೂಡಿದೆ ಮತ್ತು ಆ ಸಂಕಲ್ಪ, ಶ್ರದ್ಧೆ, ಅವನಲ್ಲಿ ರಚನೆಗೊಳ್ಳುತ್ತಿರುವ ನಂಬಿಕೆ ಏನಾಗಿವೆಯೋ ಅದು ಅವನಾಗಿರುತ್ತಾನೆ ಮತ್ತು ಅದು ಅವನಾಗಿರುತ್ತದೆ. 'ಶ್ರದ್ಧಾಮಯೋಽಯಂ ಪುರುಷಃ ಯೋ ಯಚ್ಛ್ರದ್ಧಃ ಸ ಏವ ಸಃ'. ಈ ಅರ್ಥಗರ್ಭಿತ ಹೇಳಿಕೆಯಲ್ಲಿ ನಾವು ಗಮನವಿಟ್ಟು ಹತ್ತಿರದಿಂದ ನೋಡಿದರೆ, ಈ ಒಂದು ಸಾಲು ಒಳಗೊಳ್ಳುವ ಅದರ ಶಕ್ತಿಯುತ ಶಬ್ದಗಳಲ್ಲಿ ಬಹುಮಟ್ಟಿಗೆ ಆಧುನಿಕ ವ್ಯಾವಹಾರಿಕ ಮನೋವೃತ್ತಿಯ ವೇದವಾಕ್ಯದ ಇಡೀ ಸಿದ್ಧಾಂತ ಒಳಗೊಂಡಿರುವುದನ್ನು ಕಾಣುತ್ತೇವೆ.

**(13/465–66)**

ಸೃಷ್ಟಿಸಬಲ್ಲನು ಮತ್ತು ಅದಾಗಬಲ್ಲನು ಎಂಬುದನ್ನು ಮೇಲಿನದಕ್ಕೆ ಅಧಿಕವಾಗಿ ಸೇರಿಸಬಹುದು.

**(21/743)**

(ಗೀತೆಯ ಪ್ರಕಾರ) ನಾವು ಜೀವಿಸುತ್ತಿರುವಾಗ, ನಮ್ಮ ಆಸೆಗಳಿಗನು ಸಾರವಾಗಿ ಇರುತ್ತಿರುವಾಗ ಹಾಗೂ ಕಾರ್ಯಮಾಡುತ್ತಿರುವಾಗ ಅದು ಶ್ರದ್ಧೆ ಪಟ್ಟುಹಿಡಿದು ಕೈಕೊಳ್ಳುತ್ತಿರುವ ಕಾರ್ಯ, ಆ ಶ್ರದ್ಧೆ ಹೆಚ್ಚಾಗಿ ನಮ್ಮ ಪ್ರಾಣಿಕ, ಭೌತಿಕ, ತಾಮಸಿಕ ಹಾಗೂ ರಾಜಸಿಕ ಸ್ವಭಾವಕ್ಕೆ ಸೇರಿದ್ದಾಗಿರುತ್ತದೆ. ನಾವು ಶಾಸ್ತ್ರದ ಪ್ರಕಾರ ಇರಲು, ಜೀವಿಸಲು ಹಾಗೂ ಕಾರ್ಯ ಕೈಕೊಳ್ಳಲು ಪ್ರಯತ್ನಿಸಿದಾಗ, ಪಟ್ಟು ಹಿಡಿದು ಕಾರ್ಯ ಕೈಕೊಳ್ಳುವ ಶ್ರದ್ಧೆಯ ಮೂಲಕ ಮುಂದುವರಿಯುತ್ತೇವೆ, ಅದು ರೂಢಿಗತ ನಂಬಿಕೆಯದಾಗಿರದಿದ್ದರೆ ಸಾತ್ವಿಕ ಪ್ರವೃತ್ತಿಗೆ ಸೇರಿದ್ದಾಗಿರುತ್ತದೆ ಮತ್ತು ತನ್ನನ್ನು ರಾಜಸಿಕ ಮತ್ತು ತಾಮಸಿಕ ಭಾಗಗಳ ಮೇಲೆ ಹೇರಲು ಶ್ರಮಿಸುತ್ತದೆ. ನಾವು ಇವೆರಡನ್ನೂ ಬಿಟ್ಟುಕೊಟ್ಟು ನಾವೇ ಕಂಡುಕೊಂಡ ಸತ್ಯದ ಪ್ರಕಾರ ಇಲ್ಲವೆ ನಮ್ಮದೇ ವೈಯಕ್ತಿಕ ಸ್ವೀಕೃತಿಯ ಪ್ರಕಾರ ಇರಲು ಹಾಗೂ ಜೀವಿಸಲು ಪ್ರಯತ್ನಿಸಿದಾಗ ಅದೂ ಕೂಡ ಪಟ್ಟು ಹಿಡಿದು ಕಾರ್ಯಮಾಡುವ ಶ್ರದ್ಧೆಯದಾಗಿರುತ್ತದೆ, ಈ ಶ್ರದ್ಧೆಯ ಮೇಲೆ ಈ ಮೂರು ಗುಣಗಳಲ್ಲಿ (ಸಾತ್ವಿಕ ಇತ್ಯಾದಿ) ಯಾವುದಾದರೊಂದು, ಸತತ, ನಮ್ಮ ಪ್ರತಿಯೊಂದು ಯೋಚನೆ, ಸಂಕಲ್ಪ, ಭಾವನೆ ಮತ್ತು ಕ್ರಿಯೆಯ ಮೇಲೆ ತನ್ನ ಪ್ರಾಬಲ್ಯ ಬೀರುತ್ತಿರುತ್ತದೆ. ಹಾಗೆಯೇ ನಾವು ದೈವೀ ಸ್ವಭಾವದ ಪ್ರಕಾರ ಇರಲು, ಜೀವಿಸಲು ಮತ್ತು ಕಾರ್ಯ ಕೈಕೊಳ್ಳಲು ಪ್ರಯತ್ನಿಸಿದಾಗಲೂ ಕೂಡ ಅದು ಪಟ್ಟು ಹಿಡಿದು ಕಾರ್ಯ ಮಾಡುವ ಶ್ರದ್ಧೆಯ ಮೂಲಕವೇ ಮುಂದುವರಿಯಬೇಕು, ಅದು ಗೀತೆಯ ಪ್ರಕಾರ ಸಾತ್ವಿಕ ಸ್ವಭಾವ ಪರಾಕಾಷ್ಠೆ ತಲುಪುವಂತೆ ಮಾಡುವ ಹಾಗೂ ಮತ್ತು ತನ್ನದೇ ಸ್ಪಷ್ಟ ಮಿತಿಗಳನ್ನು ಮೀರಿ ಹೋಗುವಂತೆ ಮಾಡುವ ಶ್ರದ್ಧೆಯಾಗಿರುತ್ತದೆ.

**(13/467–68)**

*

ನಾನು ನಂಬಿಕೆಯನ್ನಿರಿಸುವ ಧರ್ಮ, ತತ್ವಜ್ಞಾನ, ನೈತಿಕ ನಿಯಮ, ಸಾಮಾಜಿಕ ವಿಚಾರ, ಸಾಂಸ್ಕೃತಿಕ ಕಲ್ಪನೆ ಇವೆಲ್ಲ ನನಗೆ ನನ್ನ ಸ್ವಭಾವದ ನಿಯಮವನ್ನು, ಅದರ ಕಾರ್ಯಗಳನ್ನು, ಸಾಪೇಕ್ಷವಾಗಿ ಸರಿಯಾಗಿರುವುದರ ವಿಚಾರವನ್ನು ಇಲ್ಲವೆ ಸಾಪೇಕ್ಷವಾಗಿ ಇಲ್ಲವೆ ಸಂಪೂರ್ಣವಾಗಿ ಪರಿಪೂರ್ಣ–ವಾದುದರ ಬಗ್ಗೆ ವಿಚಾರವನ್ನು ಕೊಡುತ್ತವೆ, ಮತ್ತು ನನ್ನಲ್ಲಿರುವ ನಿಷ್ಕಾಪಟ್ಯ, ಶ್ರದ್ಧೆಯ ಪರಿಪೂರ್ಣತೆ, ಆ ಶ್ರದ್ಧೆಯ ಪ್ರಕಾರ ಜೀವಿಸುವ ಸಂಕಲ್ಪದ ಗಾಢತೆ



ಇವುಗಳ ಪ್ರಕಾರ ನಾನೇನಾಗಬೇಕೆಂದು ಅದು ಉದ್ದೇಶಿಸುತ್ತದೆಯೋ ಅದಾಗಬಲ್ಲೆ, ಪರಿಪೂರ್ಣತೆಯ ಆ ಸರಿಯಾದ ಇಲ್ಲವೆ ಆದರ್ಶದ ಪ್ರತೀಕದಲ್ಲಿ ನನಗೆ ಆಕಾರ ಕೊಟ್ಟುಕೊಳ್ಳಬಲ್ಲೆ.

**(13/462)** **– ಶ್ರೀ ಅರವಿಂದರು**

*

## ನಮ್ಮ ನಂಬಿಕೆಯ ಕೈಪಿಡಿ

(ನಾವು ಹೊಂದಿರಲೇಬೇಕಾದ ಮೂಲಭೂತ ನಂಬಿಕೆ)

"ಭಗವಂತ ಅಸ್ತಿತ್ವದಲ್ಲಿದ್ದಾನೆ, ನಾವು ಬೆಂಬತ್ತಬೇಕಾದ ಒಂದು ವಿಷಯವೆಂದರೆ ಅದು ಭಗವಂತನನ್ನು ಕುರಿತಾಗಿದೆ – ಜೀವನದಲ್ಲಿ ಅದಕ್ಕೆ ಹೋಲಿಸಬಹುದಾದ ವಿಷಯ ಬೇರೊಂದಿಲ್ಲ" ಎಂಬುದು ಯೋಗದಲ್ಲಿ ಮೂಲಭೂತವಾದ ಮತ್ತು ಆತ್ಮದಲ್ಲಿ ಅಂತರ್ನಿಹಿತವಾದ ನಂಬಿಕೆ. ಮನುಷ್ಯನಲ್ಲಿ ಆ ನಂಬಿಕೆ ಇರುವವರೆಗೆ ಅವನನ್ನು ಆಧ್ಯಾತ್ಮಿಕ ಜೀವನಕ್ಕಾಗಿ ಗುರುತಿಸಲಾಗಿರುತ್ತದೆ ಮತ್ತು ಅವನ ಸ್ವಭಾವ, ನಿರಾಕರಣೆಗಳು ಹಾಗೂ ತೊಂದರೆಗಳು ಉಂಟು ಮಾಡುವ ಅಡೆತಡೆಗಳಿಂದ ತುಂಬಿಕೊಂಡಿದ್ದರೂ, ಅವನು ಹಲವಾರು ವರ್ಷಗಳ ಕಾಲ ಹೋರಾಡಬೇಕಾಗಿ ಬಂದರೂ ಆಧ್ಯಾತ್ಮಿಕ ಜೀವನದಲ್ಲಿ ಯಶಸ್ಸು ಪಡೆಯುವುದನ್ನು ನಿಶ್ಚಿತಪಡಿಸಲಾಗಿರುತ್ತದೆ.

ಭಗವಂತ ಅಸ್ತಿತ್ವದಲ್ಲಿದ್ದರೆ ಮತ್ತು ಆಧ್ಯಾತ್ಮಿಕ ಮಾರ್ಗದಲ್ಲಿ ನಡೆಯಲು ನಿಮಗೆ ಕರೆ ಕೊಟ್ಟಿದ್ದರೆ (ಅದು ಸ್ಪಷ್ಟವಿದೆ), ಆಗ ಅದರ ಹಿಂದೆ ಭಗವಂತನ ಮಾರ್ಗದರ್ಶನವಿರಬೇಕು, ಎಲ್ಲ ತೊಂದರೆಗಳಿದ್ದಾಗ್ಯೂ ಅವುಗಳ ಮೂಲಕ ನೀವು ಗುರಿ ತಲುಪುತ್ತೀರಿ ಎಂಬ ಈ ನಂಬಿಕೆಯನ್ನು ನೀವು ಅಭಿವೃದ್ಧಿಪಡಿಸಬೇಕು – ಇದು ತರ್ಕ ಹಾಗೂ ಸಾಮಾನ್ಯ ಜ್ಞಾನ ಇವುಗಳಿಗೆ ಅನುಗುಣವಾದ ನಂಬಿಕೆ. ವಿಫಲತೆಯನ್ನು ಸೂಚಿಸುವ ವಿರೋಧಿ ಧ್ವನಿಗಳಿಗೆ ಇಲ್ಲವೆ ಅಸಹಿಷ್ಣುತೆಯ ಧ್ವನಿಗಳು ಮತ್ತು ಅವುಗಳನ್ನು ಪ್ರತಿಧ್ವನಿಸುವ ಪ್ರಾಣಿಕದ ಅವಸರಪಡಿಸುವಿಕೆಗಳು ಇವುಗಳಿಗೆ ಕಿವಿಗೊಡದೆ ಇರುವುದು, ಅಲ್ಲಿ ದೊಡ್ಡ ತೊಂದರೆಗಳಿವೆ, ಯಶಸ್ಸು ಸಾಧ್ಯವಾಗದು ಇಲ್ಲವೆ ಭಗವಂತ ಇನ್ನೂ ತನ್ನನ್ನು ತೋರಿಸಿಕೊಡದೆ ಇದ್ದುದರಿಂದ ಅವನೆಂದಿಗೂ ತನ್ನನ್ನು ತೋರಿಸಿಕೊಡುವುದಿಲ್ಲ ಎಂಬುದನ್ನು ನಂಬದೆ ಇರುವುದು, ಆದರೆ ಶ್ರೇಷ್ಠ ಹಾಗೂ ಕಠಿಣ ಗುರಿಯ ಮೇಲೆ ತನ್ನ ಮನಸ್ಸನ್ನು ಸ್ಥಿರಗೊಳಿಸಿರುವ ಪ್ರತಿಯೊಬ್ಬ ಮನುಷ್ಯನ ಹಾಗೆ "ತೊಂದರೆಗಳೇನೇ ಇರಲಿ, ಯಶಸ್ಸನ್ನು ದೊರಕಿಸುವವರೆಗೆ ನಾನು ಸಾಗಿ ಹೋಗುತ್ತೇನೆ" ಎಂಬ ನಿಲುವನ್ನು

ತೆಗೆದುಕೊಳ್ಳುವುದು ಒಳ್ಳೆಯದು. ಭಗವಂತನಲ್ಲಿ ನಂಬಿಕೆಯನ್ನು ಇಟ್ಟುಕೊಂಡವನು "ಭಗವಂತ ಅಸ್ತಿತ್ವದಲ್ಲಿದ್ದಾನೆ, ಅವನನ್ನು ಬೆಂಬತ್ತುವ ನನ್ನ ಪ್ರಯತ್ನ ವಿಫಲವಾಗದು, ಅವನನ್ನು ಕಂಡುಕೊಳ್ಳುವವರೆಗೆ ನಾನು ಪ್ರತಿಯೊಂದರ ಮೂಲಕ ಸಾಗಿ ಹೋಗುತ್ತೇನೆ" ಎಂದು ಅಧಿಕವಾಗಿ ಹೇಳುತ್ತಾನೆ.

*

ಸಮಗ್ರ ಯೋಗ ಅತ್ಯಗತ್ಯದ್ದೆಂದು ಬೇಡುವ ಒಂದು ಬಗೆಯ ನಂಬಿಕೆ ಇದೆ, ಅದರ ವರ್ಣನೆ ಹೀಗಿದೆ: ಭಗವಂತನಲ್ಲಿ ಹಾಗೂ ದೈವೀ ಶಕ್ತಿಯಲ್ಲಿ ನಂಬಿಕೆ, ನಮ್ಮಲ್ಲಿ ಹಾಗೂ ಜಗತ್ತಿನಲ್ಲಿ ದೈವೀ ಸಾನ್ನಿಧ್ಯ ಹಾಗೂ ಸಾಮರ್ಥ್ಯವಿರುವುದರಲ್ಲಿ ನಂಬಿಕೆ, ಜಗತ್ತಿನಲ್ಲಿ ಎಲ್ಲವೂ ದೈವೀಶಕ್ತಿಯ ಕಾರ್ಯಗತಿ, ಯೋಗದ ಎಲ್ಲ ಹೆಜ್ಜೆಗಳು ಅದರ ಹೆಣಗುವಿಕೆಗಳು, ವೇದನೆಗಳು, ವಿಫಲತೆಗಳು ಹಾಗೆಯೇ ಅದರ ಯಶಸ್ಸುಗಳು, ತೃಪ್ತಿಗಳು ಮತ್ತು ವಿಜಯಗಳು ಅವಳ ಕಾರ್ಯಗತಿಗಳಿಗಾಗಿ ಉಪಯುಕ್ತವಾದವುಗಳು ಮತ್ತು ಅವಶ್ಯವಾದವುಗಳು ಎಂಬುದರಲ್ಲಿ ನಂಬಿಕೆ ಮತ್ತು ನಮ್ಮಲ್ಲಿರುವ ಭಗವಂತ ಹಾಗೂ ದೈವೀಶಕ್ತಿಗೆ ಇಡಿಯಾಗಿ ಸ್ವ–ಸಮರ್ಪಣದ ಮೂಲಕ ಹಾಗೂ ಅವರ ಮೇಲೆ ಬಲವತ್ತರವಾದ ಅವಲಂಬನೆ ಹೊಂದಿರುವುದರ ಮೂಲಕ ನಾವು ಏಕತೆಯನ್ನು, ಸ್ವಾತಂತ್ರ್ಯವನ್ನು, ವಿಜಯವನ್ನು ಮತ್ತು ಪರಿಪೂರ್ಣತೆಯನ್ನು ಸಿದ್ಧಿಸಿಕೊಳ್ಳುವೆವೆಂಬುದರಲ್ಲಿ ನಂಬಿಕೆ.

*

ನಂಬಿಕೆಯಲ್ಲಿ ಎರಡು ಬಗೆಗಳಿವೆ:

ಸಮತೆ ಕೆಳಗಿಳಿದು ಬರಲು ಕರೆ ಕೊಡುವ ನಂಬಿಕೆ, ಮತ್ತು ಸಿದ್ಧಿ ಕೆಳಗಿಳಿದು ಬರಲು ಕರೆ ಕೊಡುವ ನಂಬಿಕೆ.

ಇವೆರಡು ನಂಬಿಕೆಗಳು ಭಗವಂತನ ಎರಡು ಭಿನ್ನ ಮುಖಗಳಿಗೆ ಅನುಗುಣವಾಗಿ ಇವೆ.

ವಿಶ್ವಾತೀತ ಭಗವಂತನಿದ್ದಾನೆ, ವಿಶ್ವಂಭರ ಭಗವಂತನಿದ್ದಾನೆ.

ಸಿದ್ಧಿಗಾಗಿರುವ ಸಂಕಲ್ಪ ವಿಶ್ವಾತೀತ ಭಗವಂತನದು.

ವಿಶ್ವಂಭರ ಭಗವಂತ ಸದ್ಯದ ಪರಿಸ್ಥಿತಿಗಳಡಿಯಲ್ಲಿ ವಿಷಯಗಳನ್ನು ವಾಸ್ತವಿಕವಾಗಿ ಕಾರ್ಯಗತಗೊಳಿಸುವುದಕ್ಕೆ ಸಂಬಂಧಿಸಿದವನು. ಈ ಜಗತ್ತಿನ ಪ್ರತಿಯೊಂದು ಪರಿಸ್ಥಿತಿಯಲ್ಲಿ, ಪ್ರತಿಯೊಂದು ಚಲನೆಯಲ್ಲಿ ಅವನ ಸಂಕಲ್ಪ ಪ್ರಕಟಗೊಳ್ಳುತ್ತದೆ.



ನಮ್ಮ ಸಾಮಾನ್ಯ ಪ್ರಜ್ಞೆಗೆ ವಿಶ್ವಂಭರ ಸಂಕಲ್ಪ ಸ್ವತಂತ್ರ ಸಾಮರ್ಥ್ಯವಾಗಿ ತಾನು ಆಯ್ದುಕೊಂಡದ್ದನ್ನು ಕೈಕೊಳ್ಳುವ ಏನೋ ಒಂದಾಗಿರುವುದಿಲ್ಲ, ಅದು ಎಲ್ಲ ಸತ್ತೆಗಳು, ಜಗತ್ತಿನಲ್ಲಿ ಲೀಲೆಯಲ್ಲಿ ತೊಡಗಿರುವ ಎಲ್ಲ ಶಕ್ತಿಗಳು, ಆ ಶಕ್ತಿಗಳ ನಿಯಮ ಹಾಗೂ ಪರಿಣಾಮ ಇವೆಲ್ಲವುಗಳ ಮೂಲಕ ಕಾರ್ಯ ಮಾಡುತ್ತದೆ.– ನಮ್ಮನ್ನು ತೆರೆದಿರಿಸಿಕೊಂಡು ಸಾಮಾನ್ಯ ಪ್ರಜ್ಞೆಯಿಂದಾಚೆಗೆ ಬಂದಾಗ ಆ ಸಂಕಲ್ಪ ಸ್ವತಂತ್ರ ಸಾಮರ್ಥ್ಯವಾಗಿ ಮಧ್ಯೆ ಪ್ರವೇಶಿಸುತ್ತಿರುವುದರ ಬಗ್ಗೆ ಮತ್ತು ಶಕ್ತಿಗಳ ಸಾಮಾನ್ಯ ಲೀಲೆಯನ್ನು ರದ್ದುಪಡಿಸುತ್ತಿದ್ದುದರ ಬಗ್ಗೆ ನಾವು ಭಾವನೆ ತಂದುಕೊಳ್ಳಬಹುದು.

ಆಗ, ಶಕ್ತಿಗಳ ಲೀಲೆಯಲ್ಲಿ ಮತ್ತು ಅವುಗಳ ವಿರೂಪಗೊಳಿಸುವಿಕೆಯಲ್ಲಿಯೂ ಕೂಡ ವಿಶ್ವಂಭರ ಸಂಕಲ್ಪ ವಿಶ್ವಾತೀತ ಭಗವಂತನ ಸಂಕಲ್ಪದ ಕೊನೆಯ ಸಿದ್ಧಿಯನ್ನು ಪಡೆಯುವುದಕ್ಕಾಗಿ ಕಾರ್ಯ ಮಾಡುತ್ತಿರುವುದನ್ನು ನೋಡಬಹುದು.

ಅತಿಮಾನಸ ಸಿದ್ಧಿ ವಿಶ್ವಾತೀತ ಭಗವಂತನ ಸಂಕಲ್ಪದ್ದಾಗಿರುತ್ತದೆ,

ಅದನ್ನು ನಾವು ಕಾರ್ಯಗತಗೊಳಿಸಬೇಕು. ಅದನ್ನು ಕಾರ್ಯಗತಗೊಳಿಸಲು ನಮಗಿರುವ ಪರಿಸ್ಥಿತಿಗಳು ಕೆಳದರ್ಜೆಯ ಪ್ರಜ್ಞೆಯವಾಗಿರುತ್ತವೆ; ಆ ಪ್ರಜ್ಞೆಯಲ್ಲಿ ನಮ್ಮ ಅಜ್ಞಾನ, ದೌರ್ಬಲ್ಯ, ತಪ್ಪುಗಳು, ಹೋರಾಡುತ್ತಿರುವ ಶಕ್ತಿಗಳ ಸಂಘರ್ಷ ಇವೆಲ್ಲವುಗಳಿಂದ ವಿಷಯಗಳು ವಿರೂಪಗೊಳ್ಳುವಂತೆ ಆಗಬಹುದು. ಆ ಕಾರಣದಿಂದಾಗಿಯೆ ನಂಬಿಕೆ ಮತ್ತು ಸಮತೆ ಅತ್ಯಗತ್ಯವಾಗಿವೆ.

ನಮ್ಮಲ್ಲಿ ಅಜ್ಞಾನ, ದೋಷಗಳು, ದೌರ್ಬಲ್ಯಗಳು ಇದ್ದಾಗಲೂ, ನಮ್ಮ ಮೇಲೆ ವಿರೋಧಿ ಶಕ್ತಿಗಳು ಆಕ್ರಮಣ ಮಾಡುತ್ತಿದ್ದಾಗಲೂ, ಕೂಡಲೆ ಕಂಡುಬರುವ ವಿಫಲತೆ ಇದ್ದಾಗ್ಯೂ ದೈವೀ ಸಂಕಲ್ಪ ನಮ್ಮನ್ನು ಪ್ರತಿಯೊಂದು ಪರಿಸ್ಥಿತಿಯ ಮೂಲಕ ಕೊನೆಯ ಸಿದ್ಧಿಯತ್ತ ಮುನ್ನಡೆಸುತ್ತಿದೆ ಎಂಬ ನಂಬಿಕೆ ಇರಬೇಕು. ಈ ನಂಬಿಕೆ ನಮಗೆ ಸಮತೆಯನ್ನು ತಂದುಕೊಡುತ್ತದೆ, ಆ ನಂಬಿಕೆ ಸಂಭವಿಸಿದ್ದನ್ನೆಲ್ಲ ನಿರ್ಧಾರಕವೆಂದಲ್ಲ, ಆದರೆ ಮಾರ್ಗದಲ್ಲಿ ಅನುಭವಿಸಬೇಕಾದ ಏನೋ ಒಂದೆಂದು ಸ್ವೀಕರಿಸುತ್ತದೆ. ಒಮ್ಮೆ ಸಮತೆ ಸ್ಥಾಪಿತಗೊಂಡ ನಂತರ ಇನ್ನೊಂದು ಬಗೆಯ ನಂಬಿಕೆಯೂ ಕೂಡ ಸ್ಥಾಪಿತಗೊಳ್ಳಬಹುದು, ಆ ನಂಬಿಕೆಯ ಆಧಾರ ಪಡೆದು ಅತಿಮಾನಸದ ಏನೋ ಒಂದರಿಂದ ಅದನ್ನು ಕ್ರಿಯಾತ್ಮಕವನ್ನಾಗಿ ಮಾಡಬಹುದು ಮತ್ತು ಅದರ ಆಧಾರದಿಂದ ಸದ್ಯದ ಪರಿಸ್ಥಿತಿಗಳ ಮೇಲೆ ಜಯ ಸಾಧಿಸಬಹುದು ಮತ್ತು ಮುಂದೆ ಸಂಭವಿಸುವುದನ್ನು ನಿರ್ಧರಿಸಬಹುದು, ವಿಶ್ವಾತೀತ ಭಗವಂತನ ಸಂಕಲ್ಪದ ಸಿದ್ಧಿಯನ್ನು ಕೆಳಗಿಳಿಸಿ ತರುವುದಕ್ಕೆ ಸಹಾಯ ಪಡೆಯಬಹುದು.

ವಿಶ್ವಂಭರ ಭಗವಂತನತ್ತ ಸಾಗುವ ನಂಬಿಕೆ, ಅದರ ಕ್ರಿಯೆಯ ಸಾಮರ್ಥ್ಯದಲ್ಲಿ, ಲೀಲೆಯ ಅವಶ್ಯಕತೆಗಳಿಂದಾಗಿ, ಸೀಮಿತವಾಗಿರುತ್ತದೆ.

ಈ ಎಲ್ಲ ಸೀಮಿತತೆಗಳಿಂದ ಸಮಗ್ರವಾಗಿ ಮುಕ್ತನಾಗಲು ಮನುಷ್ಯ ವಿಶ್ವಾತೀತ ಭಗವಂತನನ್ನು ತಲುಪಬೇಕು.

*

ವಿಶ್ವಂಭರ ಶಕ್ತಿಗಳ ಲೀಲೆ ಮತ್ತು ಸಂಕಲ್ಪಗಳ ಹಿಂದೆ ವಿಶ್ವಾತೀತವಾದ ರಹಸ್ಯ ದೈವೀ ಸಂಕಲ್ಪವಿದೆ – ಆ ಶಕ್ತಿಗಳ ಲೀಲೆ ಅನುಕೂಲಕರ ಮತ್ತು ವಿರೋಧಿ ವಿಷಯಗಳಿಂದ ಮಿಶ್ರಣಕ್ಕೊಳಗಾಗಿರುತ್ತದೆ – ಈ ರಹಸ್ಯ ದೈವೀ ಸಂಕಲ್ಪಕ್ಕಾಗಿ ಮನುಷ್ಯ ಕಾದುಕೊಂಡಿರಬೇಕು ಮತ್ತು ಅದರಲ್ಲಿ ನಂಬಿಕೆಯನ್ನಿರಿಸಬೇಕು.

**(23/573, 21/743, 23/578–79, 579)** **–ಶ್ರೀ ಅರವಿಂದರು**

*

## ಮನುಷ್ಯ ತನ್ನಲ್ಲಿಯೇ ಇರಿಸಿಕೊಳ್ಳಬೇಕಾದ ನಂಬಿಕೆ

ನಮ್ಮಿಂದ ಒತ್ತಾಯಪೂರ್ವಕವಾಗಿ ಬೇಡಲಾದ ನಂಬಿಕೆ ಅದರ ಸರ್ವಸಾಮಾನ್ಯ ತತ್ವದಲ್ಲಿ ಮತ್ತು ಅದರ ಸತತ ವಿಶಿಷ್ಟ ಅನ್ವಯದಲ್ಲಿ ಇಡೀ ಸತ್ತೆ ಹಾಗೂ ಅದರ ಭಾಗಗಳು ಭವ್ಯವಾದ, ಯಾವಾಗಲೂ ಹೆಚ್ಚುತ್ತಿರುವ ಮತ್ತು ಸತತವಾಗಿ ಹೆಚ್ಚು ಶುದ್ಧ, ಪೂರ್ಣ ಹಾಗೂ ಬಲವತ್ತರವಾಗಿರುವ ಭಗವಂತನ ಹಾಗೂ ದೈವೀಶಕ್ತಿಯ ಸಾನ್ನಿಧ್ಯ ಹಾಗೂ ಮಾರ್ಗದರ್ಶನವನ್ನು ಒಪ್ಪಿಕೊಳ್ಳು–ವಂತಹದಿರಬೇಕು. ದೈವೀಶಕ್ತಿಯ ಸಾನ್ನಿಧ್ಯದ ಅರಿವಿರದೆ ಇರುವವರೆಗೆ ಹಾಗೂ ಆ ಸಾನ್ನಿಧ್ಯದಿಂದ ನಾವು ತುಂಬಿಕೊಂಡಿರದೆ ಇರುವವರೆಗೆ ಆ ಶಕ್ತಿಯಲ್ಲಿ ನಮ್ಮ ನಂಬಿಕೆಯು, ಏಕತೆ, ಸ್ವಾತಂತ್ರ್ಯ ಮತ್ತು ಪರಿಪೂರ್ಣತೆಗಳತ್ತ ಯಶಸ್ವಿಯಾಗಿ ಚಲಿಸುವುದಕ್ಕಾಗಿ ನಮ್ಮದೇ ದೃಢವಾದ, ವೀರ್ಯವತ್ತಾದ ನಂಬಿಕೆ ಇರುವ ಆಧ್ಯಾತ್ಮಿಕ ಸಂಕಲ್ಪ ಮತ್ತು ಚೈತನ್ಯಗಳಲ್ಲಿ ಪೂರ್ವಭಾವಿಯಾಗಿ ಇರಬೇಕು ಇಲ್ಲವೆ ಕನಿಷ್ಠಪಕ್ಷ ಜೊತೆಗೂಡಿರಬೇಕು. ಮನುಷ್ಯನಿಗೆ ಅವನಲ್ಲಿಯೇ, ಅವನ ವಿಚಾರಗಳಲ್ಲಿ ಹಾಗೂ ಸಾಮರ್ಥ್ಯಗಳಲ್ಲಿ ನಂಬಿಕೆಯನ್ನು ಕೊಡಲಾಗಿದೆ, ಅದರಿಂದ ಅವನು ಕಾರ್ಯ ಕೈಕೊಳ್ಳಬಲ್ಲನು, ಸೃಷ್ಟಿಸಬಲ್ಲನು, ಹೆಚ್ಚಿನ ವಿಷಯಗಳತ್ತ ಮೇಲಕ್ಕೇರಿ ಹೋಗಬಲ್ಲನು, ಮತ್ತು ಕೊನೆಯಲ್ಲಿ ದಿವ್ಯಾತ್ಮನ ವೇದಿಕೆಗೆ ಯೋಗ್ಯ ಕಾಣಿಕೆಯೆಂದು ತನ್ನ ಬಲವನ್ನು ಅರ್ಪಿಸಬಲ್ಲನು. ಶಾಸ್ತ್ರಗಳು ಹೇಳುವ ಹಾಗೆ ಈ



ಮನೋಧರ್ಮವನ್ನು ದುರ್ಬಲರು ಹೊಂದಿರಲಾರರು 'ನಾಯಮಾತ್ಮಾ ಬಲಹೀನೇನ ಲಭ್ಯಃ'. ನಿಷ್ಕ್ರಿಯೆಗೆ ಒಳಗಾಗುವಂತೆ ಮಾಡುವ ನಮ್ಮಲ್ಲಿರುವ ಅಪನಂಬಿಕೆಯನ್ನು, ಸಿದ್ಧಿಸಿಕೊಳ್ಳುವುದರಲ್ಲಿ ನಮ್ಮ ಬಲದ ಬಗೆಗೆ ಇರುವ ಸಂಶಯವನ್ನು ಒಪ್ಪಿಕೊಳ್ಳಬಾರದು, ಏಕೆಂದರೆ ಅದು ನಿರ್ವೀರ್ಯಕ್ಕೆ, ದೌರ್ಬಲ್ಯದ ಕಲ್ಪನೆಗೆ, ಆತ್ಮದ ಸರ್ವಸಾಮರ್ಥ್ಯವನ್ನು ನಿರಾಕರಿಸುವುದಕ್ಕೆ ಮಿಥ್ಯೆಯಿಂದ ಕೊಡುವ ಒಪ್ಪಿಗೆಯಾಗಿರುತ್ತದೆ. ಸದ್ಯದ ಅಸಮರ್ಥತೆಯ ಒತ್ತಡ ಎಷ್ಟೇ ಭಾರವಾದದ್ದಾಗಿದೆ ಎನಿಸಿದರೂ ಅದು ನಂಬಿಕೆ ಕುರಿತು ಕೇವಲ ಒಂದು ಪರೀಕ್ಷೆ ಮತ್ತು ತಾತ್ಕಾಲಿಕ ತೊಂದರೆ, ಅಶಕ್ತತೆಯ ಭಾವನೆಗೆ ಒಳಗಾಗುವುದು ಸಮಗ್ರ ಯೋಗದ ಸಾಧಕನಿಗೆ ಅರ್ಥಹೀನವಾದ್ದು. ಏಕೆಂದರೆ ಅವನ ಉದ್ದೇಶ ಸತ್ತೆಯಲ್ಲಿ ಅದಾಗಲೆ ಸುಪ್ತವಾಗಿ ಇರುವ ಪರಿಪೂರ್ಣತೆಯನ್ನು ಅಭಿವೃದ್ಧಿ ಪಡಿಸುವುದಾಗಿರುತ್ತದೆ. ಮನುಷ್ಯ ದೈವೀ ಜೀವನದ ಬೀಜವನ್ನು ತನ್ನಲ್ಲಿ, ತನ್ನ ಆತ್ಮದಲ್ಲಿ ಕೊಂಡೊಯ್ಯುತ್ತಾನೆ, ಯಶಸ್ಸಿನ ಸಾಧ್ಯತೆ ಅಂತರ್ಗತವಾಗಿರುತ್ತದೆ ಮತ್ತು ಪ್ರಯತ್ನದಲ್ಲಿ ಸೂಚಿಸುತ್ತದೆ ಮತ್ತು ಯಶಸ್ಸು ಖಂಡಿತ, ಏಕೆಂದರೆ ಹಿಂದಿನಿಂದ ಸರ್ವಸಮರ್ಥವಾದುದರ ಸಾಮರ್ಥ್ಯದ ಕರೆ ಹಾಗೂ ಮಾರ್ಗದರ್ಶನವಿರುತ್ತದೆ, ಅದೇ ಕಾಲಕ್ಕೆ ತನ್ನಲ್ಲಿರುವ ಈ ನಂಬಿಕೆಗೆ ರಾಜಸಿಕ ಅಹಂಕಾರ ಮತ್ತು ಆಧ್ಯಾತ್ಮಿಕ ಅಭಿಮಾನ ಇವುಗಳ ಸ್ಪರ್ಶವಿರದ ಹಾಗೆ ಅದನ್ನು ಪರಿಶುದ್ಧಗೊಳಿಸಬೇಕು. ತನ್ನ ಬಲ ಅಹಂಕಾರದ ಅರ್ಥದಲ್ಲಿ ತನ್ನದೇ ಅಲ್ಲ, ಆದರೆ ಅದು ದೈವೀ ವಿಶ್ವಂಭರ ಶಕ್ತಿಯದಾಗಿರುತ್ತದೆ ಮತ್ತು ಅದರ ಉಪಯೋಗದಲ್ಲಿ ಅಹಂಕಾರಯುಕ್ತವಾದದ್ದು ಸೀಮಿತತೆಗೆ ಕಾರಣವಾಗುತ್ತದೆ ಮತ್ತು ಕೊನೆಗೆ ಒಂದು ಅಡೆತಡೆಯಾಗುತ್ತದೆ ಎಂಬುದನ್ನು ಸಾಧಕ ಸಾಧ್ಯವಿದ್ದಷ್ಟರ ಮಟ್ಟಿಗೆ ತನ್ನ ಮನಸ್ಸಿನಲ್ಲಿ ಇಟ್ಟುಕೊಂಡಿರಬೇಕು. ನಮ್ಮ ಅಭೀಪ್ಸೆಯ ಹಿಂದಿರುವ ದೈವೀ ವಿಶ್ವಂಭರ ಶಕ್ತಿಯ ಸಾಮರ್ಥ್ಯ ಸೀಮಾತೀತವಾಗಿರುತ್ತದೆ ಮತ್ತು ಅದಕ್ಕೆ ಸರಿಯಾಗಿ ಕರೆಕೊಟ್ಟಾಗ ಅದು ತನ್ನನ್ನು ನಮ್ಮಲ್ಲಿ ಸುರಿಯುವುದರಲ್ಲಿ ಮತ್ತು ಈಗ ಅಥವಾ ನಂತರ ಉಂಟಾಗಬಹುದಾದ ಅಡೆತಡೆಯನ್ನು ತೆಗೆದು ಹಾಕುವುದರಲ್ಲಿ ವಿಫಲವಾಗುವುದಿಲ್ಲ. ಏಕೆಂದರೆ ನಮ್ಮ ಹೋರಾಟವಿರುವ ಕಾಲಗಳು ಹಾಗೂ ಅವಧಿಗಳು ಉಪಕರಣದ ರೂಪದ ಮೇಲೆ ಮತ್ತು ಭಾಗಶಃ ನಮ್ಮ ನಂಬಿಕೆಯ ಹಾಗೂ ಪ್ರಯತ್ನದ ಬಲದ ಮೇಲೆ ಅವಲಂಬಿಸಿದಾಗ್ಯೂ ಕೊನೆಗೆ ವಿವೇಕದಿಂದ ನಿರ್ಧರಿಸುವ ಯೋಗದ ಏಕೈಕ ಪ್ರಭು, ದಿವ್ಯಾತ್ಮ, ಈಶ್ವರನ ಕೈಗಳಲ್ಲಿರುತ್ತವೆ.

**(21/751–52)** **– ಶ್ರೀ ಅರವಿಂದರು**

*

# ಈಶ್ವರ ಮತ್ತು ದೈವೀಶಕ್ತಿ ಇವರಲ್ಲಿ ನಂಬಿಕೆ

ನಮ್ಮ ಬಲದ ಹಿಂದೆ ಯಾವಾಗಲೂ ಇರುವ ದೈವೀಶಕ್ತಿಯಲ್ಲಿ ನಂಬಿಕೆ ಇರಬೇಕು ಮತ್ತು ಅವಳು ಪ್ರಕಟವಾದಾಗ ಅದಿರಲೇಬೇಕು ಇಲ್ಲವೆ ಸಂದೇಹಕ್ಕೆ ಆಸ್ಪದ ಕೊಡದಂತೆ ಅದು ಅಭಿವೃದ್ಧಿ ಹೊಂದಬೇಕು ಮತ್ತು ಸಂಪೂರ್ಣವಾಗಬೇಕು. ಸನಾತನ ಕಾಲದಿಂದ ಎಲ್ಲವನ್ನೂ ಸೃಷ್ಟಿಸುತ್ತ ಬಂದಿರುವ, ದಿವ್ಯಾತ್ಮನ ಸರ್ವಸಾಮರ್ಥ್ಯವನ್ನು ಹೊಂದಿರುವ, ಪ್ರಜ್ಞಾಪೂರ್ಣ ದೈವೀ ಸಾಮರ್ಥ್ಯವಾಗಿರುವ ವಿಶ್ವಂಭರ ದೇವಿಯಾದ ಆ ದೈವೀಶಕ್ತಿಗೆ ಅಸಾಧ್ಯವಾದುದು ಯಾವುದೂ ಇಲ್ಲ. ಎಲ್ಲ ಜ್ಞಾನ, ಎಲ್ಲ ಬಲಗಳು, ಎಲ್ಲ ವಿಜಯೋತ್ಸಾಹ ಮತ್ತು ವಿಜಯ, ಎಲ್ಲ ಕೌಶಲ ಮತ್ತು ಕಾರ್ಯಗಳು ಅವಳ ಕೈಗಳಲ್ಲಿವೆ ಮತ್ತು ಅವು ದಿವ್ಯಾತ್ಮನ ನಿಧಿಗಳಿಂದ, ಎಲ್ಲ ಪರಿಪೂರ್ಣತೆಗಳು ಹಾಗೂ ಸಿದ್ಧಿಗಳಿಂದ ತುಂಬಿಕೊಂಡಿವೆ. ಅವಳು ಮಹೇಶ್ವರಿ, ಪರಮೋಚ್ಚ ಜ್ಞಾನದ ದೇವಿ, ಅವಳು ನಮಗೆ ಸತ್ಯದ ಎಲ್ಲ ಬಗೆಗಳು ಮತ್ತು ವಿಸ್ತಾರ, ಆಧ್ಯಾತ್ಮಿಕ ಸಂಕಲ್ಪದ ಅವಳ ದೋಷರಹಿತತೆ, ಅತಿಮಾನಸ ಭವ್ಯತೆಯ ಅವಳ ಸ್ಥಿರತೆ ಮತ್ತು ಭಾವೋನ್ಮತ್ತತೆ, ಪ್ರಕಾಶದ ಅವಳ ಪರಮಾನಂದ ಇವೆಲ್ಲವುಗಳ ದರ್ಶನವನ್ನು ತಂದುಕೊಡುತ್ತಾಳೆ. ಅವಳು ಮಹಾಕಾಳಿ, ಪರಮೋಚ್ಚ ಬಲದ ದೇವಿ, ಅವಳೊಂದಿಗೆ ಸರ್ವ ಸಾಮರ್ಥ್ಯಗಳು, ಆಧ್ಯಾತ್ಮಿಕ ಶಕ್ತಿ, ಕಠೋರತಮ ತಪಸ್ಸಿನ ಉಗ್ರತೆ, ಸಮರ ಮತ್ತು ವಿಜಯ, ನಗು ಹಾಗೂ ಸೋಲನ್ನು ಮೃತ್ಯುವನ್ನು ಅಜ್ಞಾನದ ಸಾಮರ್ಥ್ಯಗಳನ್ನು ಹಗುರಾಗಿ ಕಾಣುವಂತೆ ಮಾಡುವ ಅಟ್ಟಹಾಸ ಇವೆಲ್ಲ ಅವಳೊಂದಿಗಿವೆ. ಅವಳು ಮಹಾಲಕ್ಷ್ಮಿ, ಪರಮೋಚ್ಚ ಪ್ರೇಮ ಹಾಗೂ ದಿವ್ಯಾನಂದದ ದೇವಿ, ಅವಳ ಕಾಣಿಕೆಗಳೆಂದರೆ ಆತ್ಮದ ಅವ್ಯಾಜ ಕರುಣೆ, ಆನಂದದ ಸೊಬಗು ಮತ್ತು ಸೌಂದರ್ಯ, ರಕ್ಷಣೆ, ಮತ್ತು ಪ್ರತಿಯೊಂದು ದೈವೀ ಹಾಗೂ ಮಾನವ ಆಶೀರ್ವಾದ. ಅವಳು ಮಹಾಸರಸ್ವತಿ, ದೈವೀ ಕೌಶಲದ ಮತ್ತು ದಿವ್ಯಾತ್ಮನ ಕಾರ್ಯಗಳ ದೇವಿ, ಕಾರ್ಯಗಳಲ್ಲಿ ಕೌಶಲವಿರುವ ಯೋಗ ಅವಳದು, 'ಯೋಗಃ ಕರ್ಮಸು ಕೌಶಲಮ್', ದೈವೀ ಜ್ಞಾನದ ಉಪಯುಕ್ತತೆಗಳು, ಜೀವನ ಅದರ ಸಾಮರಸ್ಯಗಳ ಸಂತೋಷ ಇವುಗಳಿಗೆ ಆತ್ಮದ ಅನ್ವಯ ಇವೆಲ್ಲ ಅವಳವೇ ಆಗಿರುತ್ತವೆ. ಅವಳ ಎಲ್ಲ ಸಾಮರ್ಥ್ಯಗಳಲ್ಲಿ ಹಾಗೂ ರೂಪಗಳಲ್ಲಿ ಅವಳು ಸನಾತನ ಈಶ್ವರಿಯ ಪ್ರಭುತ್ವಗಳ ಪರಮೋಚ್ಚ ಅರ್ಥವನ್ನು ತನ್ನೊಡನೆ ಕೊಂಡೊಯ್ಯುತ್ತಾಳೆ. ಈ ಪ್ರಭುತ್ವಗಳೆಂದರೆ: ಎಲ್ಲ ಬಗೆಯ ಕ್ರಿಯೆಯಾಗಿ ಉಪಕರಣದಿಂದ ಬೇಡಲಾದ ತೀವ್ರಗತಿಯ ಹಾಗೂ ದೈವೀ ಕ್ಷಮತೆ,



ಏಕವಾಗಿರುವಿಕೆ, ಭಾಗವಹಿಸುವ ಅನುಕಂಪ, ಎಲ್ಲ ಸತ್ತೆಗಳಲ್ಲಿರುವ ಎಲ್ಲ ಚೈತನ್ಯಗಳೊಡನೆ ಮುಕ್ತ ತಾದಾತ್ಮ್ಯ, ಹಾಗಾಗಿ ವಿಶ್ವದಲ್ಲಿರುವ ಎಲ್ಲ ದೈವೀ ಸಂಕಲ್ಪದೊಡನೆ ಸ್ವಯಂಪ್ರೇರಿತ ಮತ್ತು ಫಲಪ್ರದ ಸಾಮರಸ್ಯ. ಅವಳ ಸಾನ್ನಿಧ್ಯದ ನಿಕಟ ಭಾವನೆ, ಮತ್ತು ನಮ್ಮ ಸತ್ತೆಯಲ್ಲಿ ಹಾಗೂ ಅದರ ಸುತ್ತ ನಡೆಯುವ ಅವಳ ಕಾರ್ಯಗತಿಗಳಿಗೆ ತೃಪ್ತಿಯಿಂದ ಕೂಡಿದ ನಮ್ಮ ಒಪ್ಪಿಗೆ ಇದೆಲ್ಲ ಆ ದೈವೀಶಕ್ತಿಯಲ್ಲಿ ನಂಬಿಕೆಯ ಪರಿಪೂರ್ಣತೆ.

ಅವಳ ಹಿಂದೆ ಈಶ್ವರನಿದ್ದಾನೆ, ಅವನಲ್ಲಿ ನಂಬಿಕೆ ಹೊಂದಿರುವುದು ಸಮಗ್ರಯೋಗದ ಶ್ರದ್ಧೆಯ ವಿಚಾರದಲ್ಲಿ ಅತ್ಯಂತ ಮಹತ್ವವಾದದ್ದು. ನಾವು ಹೊಂದಿರಲೇಬೇಕಾದ ಹಾಗೂ ಪರಿಪೂರ್ಣವಾಗುವವರೆಗೆ ಅಭಿವೃದ್ಧಿ ಪಡಿಸಬೇಕಾದ ನಂಬಿಕೆ ಇದು: ಎಲ್ಲ ವಿಷಯಗಳು ಪರಮೋಚ್ಚ ಸ್ವ–ಜ್ಞಾನದ ಹಾಗೂ ವಿವೇಕದ ವಿಶ್ವಂಭರ ಸ್ಥಿತಿಗಳಲ್ಲಿ ಕಾರ್ಯಗತಗೊಳ್ಳುವವು, ನಮ್ಮಲ್ಲಿ ಹಾಗೂ ನಮ್ಮ ಸುತ್ತ ಕೈಕೊಂಡದ್ದಾವುದೂ ವ್ಯರ್ಥವಾಗಿರುವುದಿಲ್ಲ ಇಲ್ಲವೆ ನಿರ್ಧಾರಿತ ಸ್ಥಾನ ಮತ್ತು ನ್ಯಾಯಯುತ ಪ್ರಾಮುಖ್ಯತೆ ಹೊಂದಿರದೆ ಇರುವುದಿಲ್ಲ, ಈಶ್ವರ ನಮ್ಮ ಪರಮೋಚ್ಚ ಆತ್ಮ ಮತ್ತು ದಿವ್ಯಾತ್ಮನೆಂದು ಕ್ರಿಯೆ ಕೈಗೆತ್ತಿಕೊಂಡಾಗ ಎಲ್ಲ ಕಾರ್ಯಗಳು ಸಾಧ್ಯವಾಗುವವು ಮತ್ತು ಈ ಮೊದಲು ಕೈಕೊಂಡದ್ದೆಲ್ಲ ಮತ್ತು ಇನ್ನು ಮುಂದೆ ಕೈಕೊಳ್ಳಲಾಗುವುದೆಲ್ಲ ಅವನು ಪೂರ್ವಭಾವಿಯಾಗಿ ಮಾರ್ಗದರ್ಶನ ಮಾಡಿದ್ದುದರ ವಿಫಲವಾಗದ ಭಾಗವಾಗಿರುತ್ತದೆ ಮತ್ತು ಅದರ ಉದ್ದೇಶ ನಮ್ಮ ಯೋಗವನ್ನು ಫಲಪ್ರದವಾದದ್ದನ್ನಾಗಿ ಮತ್ತು ನಮ್ಮ ಜೀವನದ ಕಾರ್ಯ ಪರಿಪೂರ್ಣವಾದದ್ದನ್ನಾಗಿ ಮಾಡುವುದಾಗಿರುತ್ತದೆ. ಉಚ್ಚತರ ಜ್ಞಾನ ತೆರೆದುಕೊಂಡಂತೆ ಈ ನಂಬಿಕೆ ಹೆಚ್ಚು ಹೆಚ್ಚಾಗಿ ಸಮರ್ಥನೀಯವಾಗುತ್ತದೆ, ನಮ್ಮ ಸೀಮಿತ ಮಾನಸಿಕತೆಗೆ ತಪ್ಪಿಸಿಕೊಂಡ ದೊಡ್ಡ ಹಾಗೂ ಚಿಕ್ಕ ಪ್ರಾಮುಖ್ಯತೆಗಳನ್ನು ನಾವು ನೋಡಲು ಪ್ರಾರಂಭಿಸುತ್ತೇವೆ. ಮತ್ತು ನಂಬಿಕೆ ಜ್ಞಾನದಲ್ಲಿ ಸಾಗಿ ಹೋಗುತ್ತದೆ. ನಂತರ ಸಂಭವಿಸುವುದೆಲ್ಲವೂ ದೈವೀ ಸಂಕಲ್ಪದ ಕಾರ್ಯಗತಿಯಿಂದ ಎಂಬುದನ್ನು ನಾವು ಸಂಶಯವಿರುವ ಸಾಧ್ಯತೆಯಾಚೆಯಿಂದ ನೋಡುತ್ತೇವೆ ಮತ್ತು ಆ ಸಂಕಲ್ಪ ವಿವೇಕಯುಕ್ತವಾಗಿರುತ್ತದೆ, ಏಕೆಂದರೆ ಅದು ಯಾವಾಗಲೂ ಜೀವನದಲ್ಲಿ ಆತ್ಮದ ಹಾಗೂ ಸ್ವಭಾವದ ನಿಜವಾದ ಕಾರ್ಯಗತಿಗಳನ್ನು ಅಭಿವೃದ್ಧಿಗೊಳಿಸುತ್ತದೆ. ನಮ್ಮ ಸತ್ತೆಯ ಶ್ರದ್ಧೆ ಎಂದರೆ ಸಮ್ಮತಿ ನೀಡುವ ಅತ್ಯುಚ್ಚ ಸ್ಥಿತಿಯು, ಈಶ್ವರನ ಸಾನಿಧ್ಯದ ಭಾವನೆ ಹೊಂದತೊಡಗಿದಾಗ ಮತ್ತು ನಮ್ಮ ಎಲ್ಲ ಅಸ್ತಿತ್ವ, ಪ್ರಜ್ಞೆ, ಯೋಚನೆ, ಸಂಕಲ್ಪ ಮತ್ತು ಕ್ರಿಯೆ ಅವನ

ಕೈಗಳಲ್ಲಿವೆ ಎಂಬ ಭಾವನೆ ಬರತೊಡಗಿದಾಗ, ಮತ್ತು ದಿವ್ಯಾತ್ಮದ ನೇರ ಹಾಗೂ ಸರ್ವಾಂತರ್ಯಾಮಿ ಮತ್ತು ವ್ಯಾಪಿಸಿಕೊಳ್ಳುವ ಸಂಕಲ್ಪಕ್ಕೆ ನಮ್ಮ ಆತ್ಮದ ಹಾಗೂ ಸ್ವಭಾವದ ಒಪ್ಪಿಗೆ ಇದ್ದಾಗ ಉಂಟಾಗುತ್ತದೆ. ಮತ್ತು ಶ್ರದ್ಧೆಯ ಅತ್ಯುಚ್ಚ ಪರಿಪೂರ್ಣತೆ ದೈವೀ ಬಲದ ಪರಿಪೂರ್ಣ ತಳಹದಿ ಮತ್ತು ಸುಯೋಗ–ವಾಗುತ್ತದೆ, ಅದು ಪರಿಪೂರ್ಣವಾದಾಗ ಪ್ರಕಾಶಮಯ ಅತಿಮಾನಸ ಶಕ್ತಿಯ ಅಭಿವೃದ್ಧಿ, ಪ್ರಕಟಣೆ ಮತ್ತು ಕಾರ್ಯಗಳಿಗಾಗಿ ಆಧಾರವಾಗುತ್ತದೆ.

**– ಶ್ರೀ ಅರವಿಂದರು**

*

ಹೃದಯದಲ್ಲಿರುವ ನಂಬಿಕೆ ಮಬ್ಬಾದ, ಬಹಳಷ್ಟು ಸಲ ಗುಪ್ತಜ್ಞಾನದ ವಿರೂಪಗೊಂಡ ಪ್ರತಿಫಲನವಾಗಿರುತ್ತದೆ. ಬಹಳಷ್ಟು ಸಲ ನಂಬಿಕೆ ಇರಿಸಿಕೊಂಡವನು ಚಿರಕಾಲ ಸಂಶಯವಾದಿಯಾಗಿರುವವನಿಗಿಂತ ಹೆಚ್ಚಿನ ರೀತಿಯಲ್ಲಿ ಸಂಶಯಪೀಡಿತನಾಗಿರುತ್ತಾನೆ. ಅವನು ಪಟ್ಟುಹಿಡಿದು ಮುಂದುವರಿಯುತ್ತಾನೆ, ಏಕೆಂದರೆ ಅವನಲ್ಲಿ ಅವಚೇತನ ರೂಪದಲ್ಲಿರುವ ಏನೋ ಒಂದಿರುತ್ತದೆ, ಅದು ತಿಳಿದುಕೊಂಡಿರುತ್ತದೆ. ಅದು ಅವನ ಕುರುಡು ಮಂದಪ್ರಕಾಶದ ಸಂಶಯವನ್ನು ಸಹಿಸಿಕೊಳ್ಳುತ್ತದೆ ಮತ್ತು ತಿಳಿದುಕೊಂಡಿರುವ ದರ್ಶನದತ್ತ ಎಳೆದೊಯ್ಯುತ್ತದೆ.

**(21/751–527,17/110)** **– ಶ್ರೀ ಅರವಿಂದರು**

*

## ಅಕಾಲಿಕ ದೃಢನಂಬಿಕೆಗಳು,
## ಮಿಥ್ಯೆಯಿಂದ ಕೂಡಿದ ಕೊನೆಯವೆನಿಸುವ ನಂಬಿಕೆಗಳು

ನಾವು ಅಪರಿಪೂರ್ಣತೆ ಮತ್ತು ಅಜ್ಞಾನಗಳಿಂದ ಪ್ರಕಾಶ ಹಾಗೂ ಪರಿಪೂರ್ಣತೆಗಳತ್ತ ಚಲಿಸುತ್ತಿದ್ದೇವೆ, ನಮ್ಮಲ್ಲಿರುವ ನಂಬಿಕೆ ನಮ್ಮ ಪ್ರಯತ್ನದ ರೂಪಗಳನ್ನು ಕುರಿತು ಆಸಕ್ತಿ ಮತ್ತು ಸಿದ್ಧಿಯ ಒಂದರ ನಂತರ ಒಂದರಂತೆ ಬರುವ ಹಂತಗಳನ್ನು ಕುರಿತು ಆಸಕ್ತಿ ಹೊಂದುವುದರಿಂದ ಮುಕ್ತರಾಗಿರಬೇಕು ಎಂಬುದನ್ನು ನಾವು ಒಂದೇ ಕಾಲಕ್ಕೆ ನೆನಪಿನಲ್ಲಿಟ್ಟುಕೊಳ್ಳಬೇಕು. ಚೆಲ್ಲಿಕೊಡಬೇಕಾದುದು, ನಿರಾಕರಿಸಬೇಕಾದುದು ನಮ್ಮಲ್ಲಿ ಬಲವತ್ತರವಾಗಿ ಮೇಲೆದ್ದು ಬರುತ್ತದೆ ಹಾಗೆಯೇ ಅಜ್ಞಾನದ ಸಾಮರ್ಥ್ಯಗಳು, ನಿಮ್ನ ಸ್ವಭಾವ ಮತ್ತು ಇವುಗಳ ಸ್ಥಾನದಲ್ಲಿ ಬರಬೇಕಾದ ಉಚ್ಚತರ ಸಾಮರ್ಥ್ಯಗಳು ಇವುಗಳ ನಡುವೆ



ಸಮರವಿರುತ್ತದೆ, ಅಲ್ಲದೆ ಸಹಾಯಕವಾದ ಅನುಭವ, ಯೋಚನೆ ಮತ್ತು ಭಾವನೆಗಳ ಸ್ಥಿತಿಗಳು ಇವುಗಳನ್ನು ಮಾರ್ಗದಲ್ಲಿ ಸ್ವೀಕರಿಸಿದಾಗ್ಯೂ, ಸದ್ಯದ ಮಟ್ಟಿಗೆ ಅವು ಆಧ್ಯಾತ್ಮಿಕ ಕೊನೆಯ ನಂಬಿಕೆಗಳೆಂದು ತೋರಿಬಂದಾಗ್ಯೂ ನಂತರ ಸಂಕ್ರಮಣ ಸ್ಥಿತಿಯಲ್ಲಿಯ ಹೆಜ್ಜೆಗಳೆಂದು ಕಂಡುಬರುವವು, ಅವುಗಳನ್ನು ಅತಿಶಯಿಸಬೇಕಾಗುವುದು, ಅವುಗಳಿಗೆ ಆಧಾರವಾಗಿದ್ದ ನಂಬಿಕೆಯನ್ನು ಇತರ ಶ್ರೇಷ್ಠ ವಿಷಯಗಳು ಇಲ್ಲವೆ ಹೆಚ್ಚು ಪೂರ್ಣವಾದ ಮತ್ತು ಎಲ್ಲವನ್ನು ಒಳಗೊಳ್ಳುವ ಸಿದ್ಧಿಗಳಿಗೆ ಅನುಕೂಲ ಕಲ್ಪಿಸುವುದಕ್ಕಾಗಿ ಹಿಂತೆಗೆದುಕೊಳ್ಳಬೇಕಾಗುವುದು. ಇವು ಕೊನೆಯ ನಂಬಿಕೆಗಳು ಎಂದುಕೊಂಡಿರುವವುಗಳ ಸ್ಥಾನದಲ್ಲಿ ಬರುತ್ತವೆ ಇಲ್ಲವೆ ಅವುಗಳನ್ನು ಸಂಪೂರ್ಣವಾಗಿ ಪರಿವರ್ತಿಸಲು ಕೈಗೆತ್ತಿಕೊಳ್ಳುತ್ತವೆ. ಸಮಗ್ರ ಯೋಗವನ್ನು ಅರಸುವವನಿಗೆ ಮಾರ್ಗದಲ್ಲಿ ವಿಶ್ರಾಂತಿ ನೀಡುವ ಸ್ಥಳಗಳಿಗೆ, ಅರ್ಧದಾರಿಯಲ್ಲಿ ದೊರಕುವ ಮನೆಗಳಿಗೆ ಅಂಟಿಕೊಳ್ಳುವುದಿರುವುದಿಲ್ಲ. ಪರಿಪೂರ್ಣತೆಯ ಎಲ್ಲ ಶ್ರೇಷ್ಠ ಹಾಗೂ ತಾಳಿಕೊಳ್ಳುವ ಆಧಾರಗಳನ್ನು ತ್ಯಜಿಸಿ ಅದರ ಭವ್ಯವಾದ ಹಾಗೂ ಮುಕ್ತವಾದ ಅನಂತಗಳಲ್ಲಿ ದಾರಿ ಮಾಡಿಕೊಂಡು ಹೋಗುವವರೆಗೆ ಅವನು ತೃಪ್ತಿಯಿಂದಿರಲಾರನು. ಅಲ್ಲಿಯೂ ಕೂಡ ಅವನು ಸತತ ಅನಂತದ ಅನುಭವಗಳಿಂದ ತನ್ನನ್ನು ತುಂಬಿಕೊಳ್ಳುತ್ತಿರಬೇಕು. ಒಂದು ಹಂತದಿಂದ ಇನ್ನೊಂದು ಹಂತಕ್ಕೆ ಆರೋಹಣ ಮಾಡುವುದರ ಮೂಲಕ ಅವನು ಪ್ರಗತಿ ಸಾಧಿಸುತ್ತಾನೆ ಮತ್ತು ಪ್ರತಿಯೊಂದು ಹೊಸ ಎತ್ತರ ಇತರ ನೀಳನೋಟಗಳನ್ನು ಮತ್ತು ಇನ್ನೂ ಹೆಚ್ಚಿನ ರೀತಿಯಲ್ಲಿ ಕೈಕೊಳ್ಳಬೇಕಾದುದರ ದರ್ಶನಗಳನ್ನು 'ಭೂರಿ ಕರ್ತವ್ಯಮ್' ತಂದುಕೊಡುತ್ತದೆ. ಹೀಗೆ ಕೈಕೊಳ್ಳಬೇಕಾದುದನ್ನು ದೈವೀಶಕ್ತಿ ಅವನ ಎಲ್ಲ ಪ್ರಯತ್ನಗಳನ್ನು ಕೊನೆಗೆ ಕೈಗೆತ್ತಿಕೊಳ್ಳುವವರೆಗೆ ಮಾಡಬೇಕಾಗುತ್ತದೆ, ಅವನು ಕೇವಲ ಅದನ್ನು ಒಪ್ಪಿಕೊಳ್ಳಬೇಕು ಮತ್ತು ಅವಳ ಪ್ರಕಾಶಮಯ ಕಾರ್ಯಗತಿಗಳಲ್ಲಿ, ಒಪ್ಪಿಕೊಳ್ಳುವ ಏಕತೆಯ ಮೂಲಕ, ಭಾಗವಹಿಸಬೇಕು. ಅವನನ್ನು ಎದೆಗುಂದಿಸಬಹುದಾದ ಹಾಗೂ ದಿಗ್ಭ್ರಮೆಗೊಳಿಸಬಹುದಾದ ಈ ಬದಲಾವಣೆಗಳು, ಹೋರಾಟಗಳು, ಪರಿವರ್ತನೆಗಳು ಇವೆಲ್ಲವುಗಳಲ್ಲಿ ಅವನಿಗೆ ಆಧಾರವಾಗಿರುವುದು ಕಾರ್ಯನಿರತವಾಗಿರುವ ದೈವೀಶಕ್ತಿಯಲ್ಲಿ ದೃಢವಾದ ನಂಬಿಕೆ ಮತ್ತು ಯೋಗದ ಪ್ರಭುವಿನ ಮಾರ್ಗದರ್ಶನವನ್ನು ನೆಚ್ಚಿಕೊಂಡಿರುವುದು – ಏಕೆಂದರೆ ಹೀಗಿಲ್ಲದೆ ಇದ್ದಾಗ ಬುದ್ಧಿಮತ್ತೆ, ಪ್ರಾಣ ಹಾಗೂ ಭಾವನೆಗಳು ವಿಷಯಗಳನ್ನು ಗಟ್ಟಿಯಾಗಿ

ಹಿಡಿದುಕೊಂಡಿರುತ್ತವೆ, ಅಕಾಲಿಕ ದೃಢ ನಂಬಿಕೆಗಳಿಗೆ ಕಟ್ಟಿಹಾಕಿಕೊಂಡಿರುತ್ತವೆ ಮತ್ತು ಅವು ಆಧಾರ ಪಡೆದುದನ್ನು ಬಿಟ್ಟುಕೊಡಬೇಕಾಗಿ ಬಂದಾಗ ಅವುಗಳಿಗೆ ದುಃಖವಾಗುತ್ತದೆ– ಯೋಗದ ಪ್ರಭುವಿನ ವಿವೇಕ ಅವಸರಪಡಿಸುವುದಿಲ್ಲ ಮತ್ತು ಮನಸ್ಸಿನ ಎಲ್ಲ ಗೊಂದಲದ ಸ್ಥಿತಿಗಳ ಮೂಲಕ ಸಾಗಿ ಹೋಗುವ ಅವನ ಹೆಜ್ಜೆಗಳು ಭರವಸೆ ನೀಡುತ್ತವೆ, ಸಮರ್ಥನೀಯವಾಗಿರುತ್ತವೆ ಮತ್ತು ದೃಢವಾಗಿರುತ್ತವೆ, ಏಕೆಂದರೆ ಅವು ನಮ್ಮ ಸ್ವಭಾವದ ಆವಶ್ಯಕತೆಗಳೊಂದಿಗೆ ಪರಿಪೂರ್ಣವಾಗಿ ಅರ್ಥಮಾಡಿಕೊಳ್ಳುವ ನಿರ್ವಹಣೆಯ ಮೇಲೆ ಸ್ಥಾಪಿತಗೊಂಡಿರುತ್ತವೆ.

*

ಮಾನವ ಬುದ್ಧಿ ಮತ್ತೆ ದೋಷವನ್ನು ಕುರಿತು ಬಹಳ ಭಯಭೀತವಾಗಿರುತ್ತದೆ, ನಿಖರವಾಗಿ ಏಕೆಂದರೆ ಅದು ದೃಢನಂಬಿಕೆಯ ಅಕಾಲಿಕ ಅರ್ಥಕ್ಕೆ ಮತ್ತು ಧನಾತ್ಮಕ ಕೊನೆಯ ನಂಬಿಕೆಯಲ್ಲಿ ಜ್ಞಾನವನ್ನು ಹಿಡಿದಿಟ್ಟುಕೊಳ್ಳಬಹುದೆಂದು ಅದಕ್ಕೆ ತೋರಿಬರುವುದರಿಂದ, ಬಹಳ ಅವಸರದ ಆತುರಕ್ಕೆ ಅತಿಯಾಗಿ ಅಂಟಿಕೊಂಡಿರುತ್ತದೆ.

**(21/747–48), (21,748)** **– ಶ್ರೀ ಅರವಿಂದರು**

*

### ಶಬ್ದಗಳ ಅರ್ಥ ವಿವರಣೆ

ಶ್ರದ್ಧೆ (Faith) :- ಕ್ರಿಯಾತ್ಮಕ ಇಡಿಯಾದ ನಂಬಿಕೆ ಹಾಗೂ ಸ್ವೀಕೃತಿ.

ನಂಬಿಕೆ (Belief) – ಕೇವಲ ಬೌದ್ಧಿಕ ಸ್ವೀಕೃತಿ.

ಮನವರಿಕೆ (Conviction) – ಒಳ್ಳೆಯ ಕಾರಣಗಳಿವೆ ಎಂದು ತೋರಿಬರುವುದರಿಂದ ಹೊಂದಿರುವ ಬೌದ್ಧಿಕ ನಂಬಿಕೆ

ನೆಚ್ಚಿಕೆ (Reliance) – ಯಾವುದೊಂದು ವಿಷಯಕ್ಕಾಗಿ ಇನ್ನೊಂದರ ಮೇಲೆ ವಿಶ್ವಾಸದ ಆಧಾರದ ಮೇಲೆ ಅವಲಂಬಿಸಿರುವುದು.

ವಿಶ್ವಾಸ (Trust) – ಇನ್ನೊಬ್ಬರ ಸಹಾಯ ದೊರಕಿಸುವುದಕ್ಕಾಗಿ ಇರುವ ನಿಶ್ಚಿತ ನಿರೀಕ್ಷೆಯ ಭಾವನೆ ಮತ್ತು ಅವರ ಮಾತು, ಚಾರಿತ್ರ್ಯ ಇತ್ಯಾದಿಗಳನ್ನು ನೆಚ್ಚಿಕೊಂಡಿರುವಿಕೆ.



ದೃಢ ನಂಬಿಕೆ (Confidence)– ವಿಶ್ವಾಸದ ಜೊತೆಗೆ ಸುರಕ್ಷಿತತೆಯ ಅರ್ಥ ಹೊಂದಿರುವುದು.

**– ಶ್ರೀ ಅರವಿಂದರು**

*

### ಸಂಶಯದ ಆವಶ್ಯಕತೆ ಹಾಗೂ ಉಪಯುಕ್ತತೆ

ಸಂಶಯ ನಂಬಿಕೆಯ ಶತ್ರು ಮತ್ತು ಆದಾಗ್ಯೂ ಅದು ಅವಶ್ಯವಾಗಿದೆ ಹಾಗೂ ಅದರ ಉಪಯುಕ್ತತೆ ಇದೆ, ಏಕೆಂದರೆ ಮನುಷ್ಯ ಅಜ್ಞಾನದಲ್ಲಿ ಶ್ರಮಪಡುತ್ತ ಪ್ರಗತಿಪರವಾಗಿ ಜ್ಞಾನದತ್ತ ಸಾಗುತ್ತಿರುವಾಗ ಅವನು ಸಂಶಯವನ್ನು ಭೇಟಿಮಾಡಬೇಕು, ಹಾಗಿಲ್ಲದಿದ್ದರೆ ಅವನು ಅಜ್ಞಾನದ ನಂಬಿಕೆಯಲ್ಲಿ ಹಾಗೂ ಸೀಮಿತ ಜ್ಞಾನದಲ್ಲಿ, ದೋಷಗಳಿಂದ ಪಾರಾಗಲಾರದೆ ಹಟಮಾರಿಯಾಗಿ ಉಳಿದುಕೊಳ್ಳುವನು. ನಾವು ಯೋಗದ ಮಾರ್ಗದಲ್ಲಿ ಪ್ರವೇಶಿಸಿದಾಗ ಸಂಶಯದ ಈ ಆವಶ್ಯಕತೆ ಮತ್ತು ಉಪಯುಕ್ತತೆ ಒಟ್ಟಿನಲ್ಲಿ ಮಾಯವಾಗುವುದಿಲ್ಲ. ಸಮಗ್ರ ಯೋಗವು ಕೇವಲ ಯಾವುದೋ ಮೂಲಭೂತ ತತ್ವವನ್ನಷ್ಟೇ ಅಲ್ಲ, ಆದರೆ ತಿಳಿದುಕೊಳ್ಳುವಿಕೆಯನ್ನು, ರಹಸ್ಯ ಆಧ್ಯಾತ್ಮಿಕ ಜ್ಞಾನವನ್ನು ಗುರಿಯಾಗಿರಿಸಿ ಕೊಂಡಿದೆ, ಅವು ಇಡೀ ಜೀವನವನ್ನು ಮತ್ತು ಜಗತ್ತಿನ ಕ್ರಿಯೆಯನ್ನು ಆವರಿಸಿಕೊಂಡಿವೆ ಹಾಗೂ ಅವುಗಳಿಗೆ ತಮ್ಮನ್ನು ಅನ್ವಯಿಸುತ್ತವೆ. ಮತ್ತು ಜ್ಞಾನದ ಈ ಅನ್ವೇಷಣೆಯಲ್ಲಿ ಪಶ್ಚಾತ್ತಾಪವಿಲ್ಲದ ಮನಸ್ಸಿನ ಚಟುವಟಿಕೆಗಳಲ್ಲಿ, ಅವು ಶ್ರೇಷ್ಠತರ ಪ್ರಕಾಶದಿಂದ ಪರಿಶುದ್ಧವಾಗುವವರೆಗೆ, ಪರಿವರ್ತನೆ ಹೊಂದುವವರೆಗೆ ನಾವು ಪ್ರವೇಶಿಸುತ್ತೇವೆ ಹಾಗೂ ಹಲವಾರು ಮೈಲುಗಳಷ್ಟು ದೂರ ಅವು ನಮ್ಮ ಜೊತೆಗಿರುತ್ತವೆ. ನಮ್ಮೊಂದಿಗೆ ಹಲವಾರು ಬೌದ್ಧಿಕ ನಂಬಿಕೆಗಳನ್ನು ವಿಚಾರಗಳನ್ನು ಕೊಂಡೊಯ್ಯುತ್ತೇವೆ, ಅವುಗಳಲ್ಲಿ, ಎಲ್ಲವೂ, ಯಾವುದೇ ರೀತಿಯಲ್ಲಿ ಸರಿಯಾಗಿರುವುದಿಲ್ಲ, ಪರಿಪೂರ್ಣವಾಗಿರುವುದಿಲ್ಲ. ನಂತರ ಹೆಚ್ಚಿನ ಸಂಖ್ಯೆಯಲ್ಲಿ ಹೊಸ ವಿಚಾರಗಳು ಹಾಗೂ ಸೂಚನೆಗಳು ನಮ್ಮನ್ನು ಭೇಟಿ ಮಾಡುತ್ತವೆ, ನಮ್ಮ ನಂಬಿಕೆಯನ್ನು ಬೇಡುತ್ತವೆ, ಅವುಗಳಲ್ಲಿರುವ ದೋಷ, ಸೀಮಿತತೆ, ಇಲ್ಲವೆ ಅಪರಿಪೂರ್ಣತೆ ಇವುಗಳನ್ನು ಪರಿಗಣಿಸದೆ, ಅವುಗಳನ್ನು ಹಿಡಿದಿಟ್ಟುಕೊಳ್ಳುವುದು ಮತ್ತು ಅವು ಕಾಣಿಸಿದ ಆಕಾರದಲ್ಲಿ ಅವುಗಳಿಗೆ ಅಂಟಿಕೊಂಡಿರುವುದು ಮಾರಕವಾಗಬಹುದು. ಯೋಗದ ಒಂದು ಹಂತದಲ್ಲಿ, ನಿಜವಾಗಿ, ಯಾವುದೇ ಬಗೆಯ ಬೌದ್ಧಿಕ ವಿಚಾರ ಇಲ್ಲವೆ ಅಭಿಪ್ರಾಯವನ್ನು ಅದರ ಯಾವುದೇ ಬೌದ್ಧಿಕ ರೂಪದಲ್ಲಿ, ನಿಶ್ಚಿತವೆಂದು ಮತ್ತು ಕೊನೆಯದೆಂದು ಒಪ್ಪಿಕೊಳ್ಳುವುದನ್ನು

ತಿರಸ್ಕರಿಸುವುದು ಮತ್ತು ಅತಿಮಾನಸ ಜ್ಞಾನದಿಂದ ಜ್ಞಾನೋದಯ ಪಡೆದ ಆಧ್ಯಾತ್ಮಿಕ ಅನುಭವದಲ್ಲಿ ಅವುಗಳಿಗೆ ಸರಿಯಾದ ಸ್ಥಾನವನ್ನು ಮತ್ತು ಸತ್ಯದ ಪ್ರಕಾಶಮಯ ಸ್ಥಾನವನ್ನು ಕೊಡಲಾಗುವವರೆಗೆ ಅವುಗಳನ್ನು ಪ್ರಶ್ನಿಸುವ, ತೇಲಾಡುವ ಸ್ಥಿತಿಯಲ್ಲಿ ಹಿಡಿದಿಟ್ಟುಕೊಳ್ಳುವುದು ಅವಶ್ಯವಾಗಿರುತ್ತದೆ. ಮಾರ್ಗದಲ್ಲಿ, ಹೃದಯದ ಶ್ರದ್ಧೆ, ಭಾವನಾತ್ಮಕ ನಂಬಿಕೆಗಳು, ಒಪ್ಪಿಗೆ ನೀಡುವಿಕೆಗಳು ಕೂಡ ಅವಶ್ಯವಾಗಿರುತ್ತವೆ. ಆದರೆ ಅವು ಯಾವಾಗಲೂ ನಿಸ್ಸಂದಿಗ್ಧ ಮಾರ್ಗದರ್ಶಕಗಳಾಗಿರುವುದಿಲ್ಲ. ಅವು ಮಾರ್ಗದರ್ಶಕವಾಗಬೇಕಾದರೆ ಅವುಗಳನ್ನು ಕೂಡ ಕೈಗೆತ್ತಿಕೊಂಡು ಪರಿಶುದ್ಧಗೊಳಿಸಬೇಕಾಗುತ್ತವೆ, ಪರಿವರ್ತನೆಗೆ ಒಳಪಡಿಸಬೇಕಾಗುತ್ತದೆ ಮತ್ತು ಕೊನೆಗೆ ದೈವೀ ಆನಂದದ ಪ್ರಕಾಶಮಯ ಒಪ್ಪಿಗೆಗಳು ಅವುಗಳ ಸ್ಥಾನದಲ್ಲಿ ಬರಬೇಕಾಗುತ್ತದೆ, ಈ ದೈವೀ ಆನಂದ, ದೈವೀ ಸಂಕಲ್ಪ ಮತ್ತು ಜ್ಞಾನಗಳೊಂದಿಗೆ ಏಕವಾಗಿರುತ್ತದೆ. ನಿಮ್ನ ಸ್ವಭಾವದಲ್ಲಿ ತರ್ಕದಿಂದ ಹಿಡಿದು ಪ್ರಾಣಿಕ ಸಂಕಲ್ಪದವರೆಗೆ ಅವುಗಳ ಯಾವುದೇ ಭಾಗದಲ್ಲಿ ಯೋಗವನ್ನು ಅರಸುವವನು ನಂಬಿಕೆಯನ್ನಿರಿಸಲಾರನು, ಆದರೆ ಕೇವಲ ಕೊನೆಗೆ ಆಧ್ಯಾತ್ಮಿಕ ಸತ್ಯ, ಸಾಮರ್ಥ್ಯ, ಆನಂದ ಇವುಗಳಲ್ಲಿ ನಂಬಿಕೆ ಇರಿಸಬಲ್ಲನು, ಅವು ಆಧ್ಯಾತ್ಮಿಕ ತರ್ಕದಲ್ಲಿ ಅವನ ಕೇವಲ ಮಾರ್ಗದರ್ಶಕರು, ಪ್ರತಿಭಾಶಾಲಿಗಳು ಹಾಗೂ ಪ್ರಭುಗಳು ಆಗುತ್ತವೆ.

ಮತ್ತು ಆದಾಗ್ಯೂ ಆದ್ಯಂತವಾಗಿ ಹಾಗೂ ಪ್ರತಿಯೊಂದು ಹಂತದಲ್ಲಿ ನಂಬಿಕೆ ಅವಶ್ಯವಾದದ್ದು, ಏಕೆಂದರೆ ಅದು ಆತ್ಮ ಅವಶ್ಯವಾಗಿ ನೀಡಬೇಕಾದ ಒಪ್ಪಿಗೆ ಮತ್ತು ಈ ಒಪ್ಪಿಗೆಯಿಲ್ಲದೆ ಯಾವ ಪ್ರಗತಿಯನ್ನೂ ಸಾಧಿಸಲಾಗುವುದಿಲ್ಲ. ನಮ್ಮ ನಂಬಿಕೆ ಮೊದಲು ಯೋಗದ ಸಾರಭೂತ ಸತ್ಯದಲ್ಲಿ ಹಾಗೂ ತತ್ವಗಳಲ್ಲಿ ನೆಲೆಸಿರಬೇಕು, ಇದು ಬುದ್ಧಿಮತ್ತೆಯಲ್ಲಿ ಮಬ್ಬಾಗಿದ್ದರೂ, ಪ್ರಾಣಿಕ ಮನಸ್ಸಿನ ಆಸೆಯಲ್ಲಿ ಸತತ ಉಂಟಾಗುವ ನಿರಾಕರಣೆಗಳಿಂದ, ವಿಫಲತೆಗಳಿಂದ ಹೃದಯದಲ್ಲಿ ನಿರಾಶೆಗೆ ಒಳಗಾಗಿದ್ದರೂ, ಕುಗ್ಗಿಕೊಂಡಿದ್ದರೂ, ದಣಿದು ಕೊಂಡಿದ್ದರೂ ಆಳಾತಿ ಆಳದ ಆತ್ಮದಲ್ಲಿ ಅದಕ್ಕೆ (ನಂಬಿಕೆಗೆ) ಅಂಟಿಕೊಳ್ಳುವ, ಅದರತ್ತ ಮರಳಿ ಹೋಗುವ ಏನೋ ಒಂದಿರಲೇಬೇಕು.

*

ನಿಮ್ನತರ ಜ್ಞಾನದಲ್ಲಿ ಸಂಶಯ ಹಾಗೂ ಸಂದೇಹವಾದ (Scepticism) ಇವುಗಳಿಗೆ ಅವುಗಳದೇ ತಾತ್ಕಾಲಿಕ ಉಪಯುಕ್ತತೆ ಇದೆ, ಉಚ್ಚತರವಾದವುಗಳಲ್ಲಿ



ಅವು ಅಡೆತಡೆಗಳಾಗಿರುತ್ತವೆ, ಏಕೆಂದರೆ ಅಲ್ಲಿ ಇಡೀ ರಹಸ್ಯ ಸತ್ಯ ಹಾಗೂ ದೋಷಗಳ ಸಮತೋಲನ ಮಾಡಿಕೊಳ್ಳುವುದಿರುವುದಿಲ್ಲ, ಆದರೆ ಸತತ ತೆರೆದು ತೋರಿಸಲಾಗುತ್ತಿರುವ ಸತ್ಯವನ್ನು ಪ್ರಗತಿಪರವಾಗಿ ಸಿದ್ಧಿಸಿಕೊಳ್ಳುವುದಿರುತ್ತದೆ. ಬೌದ್ಧಿಕ ಜ್ಞಾನದಲ್ಲಿ, ಯಾವಾಗಲೂ, ಮಿಥ್ಯೆ ಇಲ್ಲವೆ ಅಪೂರ್ಣತೆಗಳ ಮಿಶ್ರಣವಿರುತ್ತದೆ ಮತ್ತು ಸತ್ಯವನ್ನೇ ಸಂದೇಹವಾದದ ವಿಚಾರಣೆಗೆ ಒಳಪಡಿಸುವುದರ ಮೂಲಕ ಆ ಮಿಶ್ರಣವನ್ನು ತೊಡೆದು ಹಾಕಬೇಕು. ಆದರೆ ಉಚ್ಚತರ ಜ್ಞಾನದಲ್ಲಿ ಮಿಥ್ಯೆ ಪ್ರವೇಶ ಮಾಡಲಾರದು ಮತ್ತು ಬುದ್ಧಿಮತ್ತೆ ಆ ಅಥವಾ ಈ ಅಭಿಪ್ರಾಯದಲ್ಲಿ ಆಸಕ್ತಿಹೊಂದಿರುವುದರ ಮೂಲಕ ಒದಗಿಸುವುದನ್ನು ಕೇವಲ ಪ್ರಶ್ನಿಸುವುದರ ಮೂಲಕ ತೊಡೆದು ಹಾಕಲು ಸಾಧ್ಯವಿಲ್ಲ, ಆದರೆ ಅದೇ ಸ್ವತಃ ಸಿದ್ಧಿಯಲ್ಲಿ ಪಟ್ಟುಹಿಡಿದು ಉಳಿದುಕೊಳ್ಳುವುದರ ಮೂಲಕ ಕಳಚಿ ಹೋಗುತ್ತದೆ. ಸಿದ್ಧಿಸಿಕೊಂಡ ಜ್ಞಾನದಲ್ಲಿಯ ಯಾವುದೇ ಅಪೂರ್ಣತೆಯನ್ನು ಅದಾಗಲೆ ಸಿದ್ಧಿಸಿಕೊಂಡದ್ದರ ಬೇರುಗಳನ್ನು ಪ್ರಶ್ನಿಸುವುದರ ಮೂಲಕ ತೊಡೆದು ಹಾಕಲಾಗುವುದಿಲ್ಲ, ಆದರೆ ದಿವ್ಯಾತ್ಮನಲ್ಲಿ ಆಳಾತಿಆಳದ, ಉಚ್ಚತರ ಮತ್ತು ವಿಸ್ತಾರವಾದ ಜೀವನ ನಡೆಸುತ್ತ ಸಂಪೂರ್ಣ ಸಿದ್ಧಿಯತ್ತ ಮುಂದುವರಿಯುವುದರ ಮೂಲಕ ಅದನ್ನು ಕೈಕೊಳ್ಳಬಹುದು. ಮತ್ತು ಇನ್ನೂ ಸಿದ್ಧಿಸಿಕೊಳ್ಳಲಾಗದೆ ಇರುವುದಕ್ಕೆ ನಂಬಿಕೆಯ ಮೂಲಕ ತಯಾರಿ ಮಾಡಿಕೊಳ್ಳಬೇಕು, ಸಂದೇಹವಾದದ ಪ್ರಶ್ನೆಗಳ ಮೂಲಕವಲ್ಲ.

**(21/744–45) (13/195)** **– ಶ್ರೀ ಅರವಿಂದರು**

*

## ಸಂದೇಹ ಪಡುವ ಮನಸ್ಸು

ಕೇವಲ ಸಂದೇಹ ಪಡುವ ಮನಸ್ಸು ತನ್ನನ್ನು ಶೂನ್ಯದಲ್ಲಿ ಕಳೆದುಕೊಳ್ಳುತ್ತದೆ.

*

ಜೀವನದಲ್ಲಿ ಹೇಗೋ ಹಾಗೆ ಯೋಗದಲ್ಲಿಯೂ ಕೂಡ, ಎದುರಾಗುವ, ವಿರೋಧಿಸುವ, ಅಲ್ಲಗಳೆಯುವ ಘಟನೆಗಳನ್ನು ಮತ್ತು ಸಾಮರ್ಥ್ಯಗಳನ್ನು ಪ್ರತಿಯೊಂದು ಸೋಲು, ಭ್ರಮನಿರಸನಗಳ ಎದುರಿನಲ್ಲಿ ದಣಿದುಕೊಳ್ಳದೆ ಪಟ್ಟುಹಿಡಿಯುವ ಮನುಷ್ಯ ಕೊನೆಗೆ ಜಯ ಸಾಧಿಸುತ್ತಾನೆ, ತನ್ನ ನಂಬಿಕೆ ಸಮರ್ಥನೀಯವಾದದ್ದು ಎಂಬುದನ್ನು ಕಂಡುಕೊಳ್ಳುತ್ತಾನೆ, ಏಕೆಂದರೆ ಮನುಷ್ಯನಲ್ಲಿರುವ ಆತ್ಮಕ್ಕೆ ಹಾಗೂ ದೈವೀ ಶಕ್ತಿಗೆ ಅಸಾಧ್ಯವೆಂಬುದು ಯಾವುದೂ

ಇರುವುದಿಲ್ಲ. ಕುರುಡಾದ ಹಾಗೂ ಅಜ್ಞಾನದ ನಂಬಿಕೆ ಕೂಡ ಸಂದೇಹ ಪಡುವ ಸಂಶಯಕ್ಕಿಂತ ಹೆಚ್ಚು ಒಳ್ಳೆಯದಾದ ಸ್ವತ್ತು, ಆ ಸಂಶಯ ನಮ್ಮ ಆಧ್ಯಾತ್ಮಿಕ ಸಾಧ್ಯತೆಗಳತ್ತ ಬೆನ್ನು ತಿರುಗಿಸುತ್ತದೆ ಇಲ್ಲವೆ ಸಂಕುಚಿತವಾಗಿ, ಕ್ಷುದ್ರ ರೀತಿಯಲ್ಲಿ ಛಿದ್ರಾನ್ವೇಷಿ, ಸೃಷ್ಟ್ಯಾತ್ಮಕವಲ್ಲದ ಬುದ್ಧಿಮತ್ತೆ ಅಸೂಯೆಯಿಂದ ನಮ್ಮ ಪ್ರಯತ್ನವನ್ನು ಶಕ್ತಿಹೀನಗೊಳಿಸುವ ಅನಿಶ್ಚಿತತೆಯಿಂದ ಬೆಂಬತ್ತುವುದು. ಸಮಗ್ರ ಯೋಗವನ್ನು ಅರಸುವವನು ಹೇಗಾದರೂ ಮಾಡಿ ಇವೆರಡೂ ಅಪರಿಪೂರ್ಣತೆಗಳ ಮೇಲೆ ಜಯ ಸಾಧಿಸಬೇಕು.

*

ದೈವೀ ಸತ್ಯಗಳು ಹಾಗೂ ಅಸುರನ ಅಸತ್ಯಗಳು ಇವುಗಳ ನಡುವೆ ವ್ಯತ್ಯಾಸ ಕಂಡುಕೊಳ್ಳುವ ಸಾಮರ್ಥ್ಯ ಯೋಗಕ್ಕೆ ಅವಶ್ಯವಾಗಿದೆ. ಇರುವ ಪ್ರಶ್ನೆಯೆಂದರೆ ಅದನ್ನು ಅತ್ಯಂತ ಒಳ್ಳೆಯ ರೀತಿಯಲ್ಲಿ ಋಣಾತ್ಮಕ, ಹಾಳು ಮಾಡುವ ವಿಧಾನದಿಂದ ಕೈಕೊಳ್ಳಬೇಕೋ ಏಕೆಂದರೆ ಅದು ಬಹಳಷ್ಟು ಸಲ ಮಿಥ್ಯೆಯನ್ನು ನಾಶ ಮಾಡುತ್ತದೆ ಇಲ್ಲವೆ ಹೆಚ್ಚು ಧನಾತ್ಮಕ, ಸಹಾಯಕ ಮತ್ತು ಪ್ರಕಾಶವನ್ನು ಒಳಗೊಂಡಿರುವ ರೀತಿಯ ಅರಸುವುದಕ್ಕಾಗಿ ಸಾಮರ್ಥ್ಯ ಕಂಡುಕೊಳ್ಳಬೇಕೋ ಎಂಬುದಾಗಿದೆ. ಎರಡನೆಯ ವಿಧಾನ ಅದರ ಅಂತರ್ನಿಹಿತ ಅಜ್ಞಾನದಿಂದ ಸತ್ಯವನ್ನು ಮತ್ತು ಮಿಥ್ಯೆಯನ್ನು ಒಂದೇ ರೀತಿಯಲ್ಲಿ ಸಂಶಯದ ಸಣ್ಣ ಭೈರಿಗೆಯಿಂದ ಮತ್ತು ನಿರಾಕರಣೆಯ ದೊಣ್ಣೆಯಿಂದ ಭೇಟಿಮಾಡುವ ಒತ್ತಾಯಕ್ಕೊಳಗಾಗಿರುವುದಿಲ್ಲ. ಮಾನಸಿಕ ನಂಬಿಕೆಯ ವಿವೇಚನಾರಾಹಿತ್ಯ ಯೋಗದ ಆಧ್ಯಾತ್ಮಿಕತೆಯ ಬೋಧನೆಯಲ್ಲ. ಆದು ಹೇಳುವ ನಂಬಿಕೆ ಒರಟಾದ ಮಾನಸಿಕ ನಂಬಿಕೆಯಲ್ಲ, ಆದರೆ ಅದು ಅಂತರಂಗದಲ್ಲಿ ಮಾರ್ಗದರ್ಶನ ಮಾಡುವುದಕ್ಕೆ ಆತ್ಮದ ಸತ್ಯನಿಷ್ಠೆ, ಆ ಪ್ರಕಾಶ ಜ್ಞಾನದಲ್ಲಿ ಕೊಂಡೊಯ್ಯುವವರೆಗೆ ಆ ಸತ್ಯನಿಷ್ಠೆ ಉಳಿದುಕೊಳ್ಳಬೇಕು.

*

ನಂಬಿಕೆಯನ್ನು ಮತ್ತು ಉಳಿದೆಲ್ಲ ವಸ್ತು – ವಿಷಯಗಳನ್ನು ದೊರಕಿಸುವುದರ ಮೇಲೆ ಒತ್ತಾಯ ತರುವುದಾಗಿದೆ, ಅವುಗಳನ್ನು ದೊರಕಿಸುವವರೆಗೆ ಶಕ್ತಿಗುಂದುವುದನ್ನು, ನಿರಾಶರಾಗುವುದನ್ನು ಮತ್ತು ಕೈಚೆಲ್ಲಿ ಕುಳಿತುಕೊಳ್ಳುವುದನ್ನು ನಿರಾಕರಿಸುವುದಾಗಿದೆ. ಕಠಿಣವಾದ ಈ ಪೃಥ್ವಿ ತನ್ನ ಮೇಲೆ ಯೋಚಿಸುವ ಮತ್ತು ಅಭೀಪ್ಸೆ ಪಡುವ ಜೀವಿಗಳನ್ನು ಹೊಂದಲು ಪ್ರಾರಂಭಿಸಿದಂದಿನಿಂದ



ಪ್ರತಿಯೊಂದನ್ನು ದೊರಕಿಸುವ ಮಾರ್ಗ ಇದೇ ಆಗಿದೆ, ಅದು ಯಾವಾಗಲೂ ದೈವೀ ಪ್ರಕಾಶಕ್ಕೆ ತೆರೆದಿರಿಸಿಕೊಳ್ಳುವುದಾಗಿದೆ, ಅಂಧಕಾರಕ್ಕೆ ಬೆನ್ನು ತಿರುಗಿಸುವುದಾಗಿದೆ. "ನಿನಗೆ ಅಸಾಧ್ಯವಾಗಿದೆ, ನೀನು ಕೈಕೊಳ್ಳಲಾರೆ, ನೀನು ಅಸಮರ್ಥನಾಗಿರುವಿ, ಕನಸೊಂದರ ಗೊಂಬೆಯಾಗಿರುವಿ" ಎಂದು ಪಟ್ಟುಹಿಡಿದು ಹೇಳುವ ಧ್ವನಿಗಳಿಗೆ ಕಿವಿಗೊಡಬಾರದು, ಏಕೆಂದರೆ ಅವು ಶತ್ರುಗಳ ಧ್ವನಿಗಳು, ತಮ್ಮ ಕರ್ಕಶ ಗದ್ದಲದಿಂದ ನಿಮ್ಮನ್ನು ಬರುತ್ತಿದ್ದ ಪರಿಣಾಮದಿಂದ ದೂರವಿರಿಸುವವು, ಮತ್ತು ನಂತರ ವಿಜಯದ ಧ್ವನಿಯಲ್ಲಿ ತಮ್ಮ ಪ್ರತಿಪಾದನೆಗೆ ಪ್ರಮಾಣವೆಂದು ಪರಿಣಾಮದ ಬರಡುತನದತ್ತ ಬೆರಳು ಮಾಡಿ ತೋರಿಸುವವು.

*

ತರ್ಕ ಮತ್ತು ನಂಬಿಕೆ, ತರ್ಕಬದ್ಧ ಮನಸ್ಸು ಮತ್ತು ಅಂತರ್ಬೋಧೆಯುಳ್ಳ ಹೃದಯ ಇವುಗಳ ನಡುವಿನ ವಿಚ್ಛೇದನವನ್ನು ಕುರಿತು ಸಾರಿ ಹೇಳಿದ್ದು ನಮ್ಮ ಯುಗದ ವಿಶಿಷ್ಟ ಗುಣಲಕ್ಷಣವಾಗಿದೆ. ಅವುಗಳ ನಡುವಿನ ಯುದ್ಧ ಕುರಿತು ಸಾರಿ ಹೇಳಿದ್ದಕ್ಕೆ, ಮೊದಲು ವೇದನಾಪೂರ್ಣ ಹೋರಾಟಗಳು, ಕ್ಷೋಭೆಗೊಳಗಾದ ನಂಬಿಕೆ, ಇಲ್ಲವೆ ಅತೃಪ್ತಿಗೊಳಗಾದ ಸಂದೇಹವಾದ ಜೊತೆಗಿದ್ದವು. ಆದರೆ ಈಗ ಅವುಗಳ ನಡುವಿನ ವಿಚ್ಛೇದನ ಉತ್ಪ್ರೇಕ್ಷಿತ ಪ್ರವೃತ್ತಿಗಳನ್ನು ಸೃಷ್ಟಿಸಿದೆ, ಈ ಪ್ರವೃತ್ತಿಗಳು ತಮ್ಮ ಪರಸ್ಪರ ಪ್ರತ್ಯೇಕತೆಯಿಂದ ಮಾನವ ಜೀವನ ಬಡವಾಗುವಂತೆ ಮಾಡುತ್ತವೆ: ಒಂದೆಡೆ ಋಣಾತ್ಮಕವಾದ, ಹಾನಿಕಾರಕ ವಿಮರ್ಶಾತ್ಮಕ ಮನೋಭಾವವಿದ್ದರೆ, ಇನ್ನೊಂದೆಡೆಗೆ ಕಾಲ್ಪನಿಕ ಭಾವಾತಿರೇಕವಿದೆ, ಅದು ಪರಿಶುದ್ಧ ಹುಟ್ಟುಗುಣ ಮತ್ತು ಕನಸುಗಳ ಆಧಾರದ ಮೇಲೆ ಸ್ಥಾಪಿತವಾದ ನಂಬಿಕೆ ಬಂಜರು ಬುದ್ಧಿಮತ್ತೆಯ ಮತಾಂಧತೆ ಎಂದು ವಿರೋಧಿಸುತ್ತದೆ.

**(21/745, 22/172, 23/577–78, 16/399)** – ಶ್ರೀ ಅರವಿಂದರು

*

## ಗುರುನಾನಕ ಅವರ ಶಿಷ್ಯನ ಅಚಲ ನಂಬಿಕೆ

ಗುರುನಾನಕ ಅವರು ತಮ್ಮ ದೇಹತ್ಯಾಗ ಮಾಡಲಿದ್ದ ದಿನ ಸಾಯಂಕಾಲದ ಸಮಯದಲ್ಲಿ ಅವರ ಶಿಷ್ಯಂದಿರು "ನಿಮ್ಮ ನಂತರ ಗಾದಿಗೆ ಯೋಗ್ಯರಾದವರು ಯಾರು?" ಎಂಬ ಪ್ರಶ್ನೆಯನ್ನು ಅವರ ಮುಂದಿರಿಸಿದರು. ಆಗ ವಾತಾವರಣದಲ್ಲಿ ಬಿರುಗಾಳಿ ಬೀಸುತ್ತಲಿತ್ತು – ಪ್ರಕೃತಿಯ ಕ್ಷೋಭೆ ಹಾಗೂ ಆ ಶ್ರೇಷ್ಠ ಆತ್ಮ ದೇಹ

ತ್ಯಜಿಸುವ ವೇಳೆಗಳು ಏಕಕಾಲಿಕವಾಗಿದ್ದವು. ನಾನಕ ಆಗ ಗಿಡವೊಂದರ ಕೆಳಗೆ ಕುಳಿತುಕೊಂಡಿದ್ದರು, ಅವರ ಶಿಷ್ಯಂದಿರು ಅವರ ಸುತ್ತ ಕುಳಿತಿದ್ದರು. ಸಾಯಂಕಾಲದ ಆ ವೇಳೆಯಲ್ಲಿ ತಮ್ಮ ಶಿಷ್ಯರಿಗೆ ನೀರು, ಆಹಾರ ಅವಶ್ಯವಾಗಿವೆ ಎಂಬುದನ್ನು ಕಂಡುಕೊಂಡ ಆವರು ತಮ್ಮ ಮಕ್ಕಳಾದ ಶ್ರೀಚಂದ ಮತ್ತು ಲಕ್ಷ್ಮಿಚಂದ ಅವರಿಗೆ ಹೊರಗೆಲ್ಲಿಯಾದರೂ ಹೋಗಿ ಆಹಾರ ಹುಡುಕಿಕೊಂಡು ಬನ್ನಿರಿ ಎಂದು ವಿನಂತಿಸಿದರು. ಆ ಮಕ್ಕಳು ತಂದೆಯ ಯಾವ ಆಧ್ಯಾತ್ಮಿಕ ಗುಣವನ್ನೂ ಹೊಂದಿರಲಿಲ್ಲ. ತಂದೆ ಹುಚ್ಚನಾಗಿದ್ದಾನೆಂದು ಭಾವಿಸಿದ ಅವರು ತಂದೆಯ ವಿನಂತಿಯನ್ನು ಗಂಭೀರವಾಗಿ ತೆಗೆದುಕೊಳ್ಳಲಿಲ್ಲ. "ಹೊರಗೆ ಮಳೆ, ಬಿರುಗಾಳಿ ಇದ್ದುದರಿಂದ ಬಾಗಿಲಿನಿಂದ ಹೊರಗೆ ಯಾರೂ ಸುಳಿಯುವಂತಿರಲಿಲ್ಲ, ಅಂತಹ ವೇಳೆಯಲ್ಲಿ ಆಹಾರವನ್ನು ಹುಡುಕಿಕೊಂಡು ಹೋಗುವುದೆಂದರೆ ಏನು?" ಎಂಬ ಅಣಕದ ಮಾತುಗಳನ್ನಾಡಿದರು. ಆಗ ನಾನಕ ನಿಷ್ಠಾವಂತ ಶಿಷ್ಯನೊಬ್ಬನತ್ತ ಹೊರಳಿ ಆ ಮಾತುಗಳನ್ನು ಹೇಳಿದರು. ಆಗ ಅವನು ಆಹಾರ ಹುಡುಕಿಕೊಂಡು ಬರಲು ಎಲ್ಲಿಗೆ ಹೋಗಬೇಕು ಎಂದು ಕೇಳಿದಾಗ ಅವರು "ನಾವೀಗ ಈ ಗಿಡದ ಕೆಳಗೆ ಕುಳಿತಿರುವೆವಲ್ಲವೆ? ಅದನ್ನೇ ಆಹಾರ ಕೊಡು ಎಂದು ಕೇಳು ಮತ್ತು ಅದು ಅವಶ್ಯವಾದ ಆಹಾರ ಕೊಡುವುದು" ಎಂದು ಹೇಳಿದರು. ಆ ಶಿಷ್ಯ ನಾನಕ ಹೇಳಿದಂತೆ ಮಾಡಿದ ಮತ್ತು ಸಾಕಷ್ಟು ಸಿಹಿ ತಿಂಡಿಗಳನ್ನು ದೊರಕಿಸಿದ ಎಂದು ಆ ಕತೆ ಮುಂದುವರಿಯುತ್ತದೆ. ನಂತರ ನಾನಕ ತಮ್ಮ ಶಿಷ್ಯಂದಿರ ಜೊತೆಗೆ ನದಿಯ ತಟದ ಹತ್ತಿರ ಹೊರಟರು. ದಾರಿಯಲ್ಲಿ ಮೃತ ದೇಹವೊಂದು ಕಾಣಿಸಿತು. ಆ ದೇಹವನ್ನೇ ಆಹಾರವೆಂದು ಸ್ವೀಕರಿಸಲು ನಾನಕ ತಮ್ಮ ಮಕ್ಕಳಿಗೆ ಹೇಳಿದರು. ಅವರ ಆ ಆಜ್ಞೆಯನ್ನು ಕೇಳಿದ ಮಕ್ಕಳು ತಂದೆಗೆ ಹುಚ್ಚು ಹಿಡಿದಿರುವುದಕ್ಕೆ ಇದು ಪ್ರಮಾಣವಾಗಿದೆ ಎಂಬ ತೀರ್ಮಾನಕ್ಕೆ ಬಂದರು, ಆದರೆ ಆ ಶಿಷ್ಯ ಪ್ರಶ್ನಿಸದೆ ಅವರ ಆಜ್ಞೆಯನ್ನು ಪಾಲಿಸಲು ತಯಾರಾದನು. ಅದನ್ನು ಸೇವಿಸುವುದನ್ನು ಎಲ್ಲಿಂದ ಪ್ರಾರಂಭಿಸಬೇಕು, ತಲೆಯ ಭಾಗದಿಂದಲೋ, ಇಲ್ಲವೆ ಕಾಲಿನಡಿಯಿಂದಲೋ ಎಂಬ ಪ್ರಶ್ನೆಯನ್ನು ಅವನು ಕೇಳಿದ. ನಾನಕ ಆ ಶಿಷ್ಯನ ಅಚಲ ಶ್ರದ್ಧೆಯಿಂದ ತೃಪ್ತಿಗೊಂಡವರಾಗಿ ಅವನನ್ನೇ ತಮ್ಮ ಗಾದಿಗೆ ವಾರಸುದಾರ ಎಂದು ಹೆಸರಿಸಿದರು.

ಈ ಬಗೆಯ ವೀರೋಚಿತ ಆಧ್ಯಾತ್ಮಿಕ ನಂಬಿಕೆಯನ್ನು ಅಧೀನದಲ್ಲಿಟ್ಟುಕೊಳ್ಳುವುದನ್ನು ಎಲ್ಲರಿಗೂ ಕೊಡಲಾಗಿರುವುದಿಲ್ಲ, ಇಂತಹ ನಂಬಿಕೆಯ ಮೇಲೆ ಎಲ್ಲ ಧಾರ್ಮಿಕ ಬೋಧಕರು ಒತ್ತುಕೊಟ್ಟು ಹೇಳಿದ್ದಾರೆ, ಅದು ಯಾವುದೇ ಕಠಿಣ ರೀತಿಯ ಸಾಧನೆಗೆ ಮೊದಲ ಪ್ರಾಥಮಿಕ ಸಂಗತಿಯಾಗಿರುತ್ತದೆ, ಆದರೆ ಅದಕ್ಕೆ



ಆಧಾರವಾಗಿರುವ ನೀತಿ ಸೂತ್ರವನ್ನು ಎಲ್ಲ ಅನುಭವ ಸಮರ್ಥಿಸುತ್ತದೆ. ವಹಿಸಿಕೊಂಡ ಪ್ರತಿಯೊಂದು ಶ್ರೇಷ್ಠ ಕಾರ್ಯದಲ್ಲಿ ಯಶಸ್ಸಿಗಾಗಿ ನಂಬಿಕೆ ಇಟ್ಟುಕೊಂಡಿರುವುದು ಮೊದಲ ಷರತ್ತಾಗಿರುತ್ತದೆ. ನಂಬಿಕೆ ಪರ್ವತಗಳು ಚಲಿಸುವಂತೆ ಮಾಡಬಲ್ಲದು ಎಂಬ ಹೇಳಿಕೆ ಉತ್ಪ್ರೇಕ್ಷಿತವಾದದ್ದಲ್ಲ. ಸಂಕಲ್ಪವನ್ನಿಟ್ಟುಕೊಂಡ ಹಾಗೂ ಯೋಚಿಸುವ ಜನರು ತೋರಿಕೆಗೆ ಎದುರಿಸಲಾಗದಷ್ಟು ತೊಂದರೆ–ಗಳಿದ್ದಾಗ್ಯೂ ಪಟ್ಟುಹಿಡಿದು ಕಾರ್ಯ ಕೈಕೊಳ್ಳುವಂತೆ ಮಾಡುವುದು ನಂಬಿಕೆ. ವಹಿಸಿಕೊಂಡ ಉದಾರ ಕಾರ್ಯದಲ್ಲಿ ಕೊನೆಯ ವಿಜಯವನ್ನು ದೊರಕಿಸು–ವುದನ್ನು ಕುರಿತು ಅವರು ಬಲವತ್ತರವಾದ ದೃಢ ನಂಬಿಕೆಯಿಂದ ಪ್ರಾರಂಭಿಸುತ್ತಾರೆ, ಆದ್ದರಿಂದ ತೊಂದರೆಗಳು ಎಷ್ಟೇ ದಿಗಿಲು ಹುಟ್ಟಿಸುವಂತಹವಾಗಿದ್ದರೂ ಅವರು ಅವುಗಳಿಂದ ಎದೆಗುಂದುವುದಿಲ್ಲ. ಎಲ್ಲ ಶ್ರೇಷ್ಠ ಆತ್ಮಗಳಲ್ಲಿ ನಂಬಿಕೆ ಪ್ರಬಲ ಗುಣಲಕ್ಷಣವಾಗಿರುತ್ತದೆ. ನಂಬಿಕೆಯ ದರ್ಶನ ದೂರದಲ್ಲಿರುವ ಭವಿಷ್ಯತ್ತಿನಲ್ಲಿ ನುಗ್ಗುತ್ತದೆ ಮತ್ತು ಅಸಾಧ್ಯವಾದದ್ದು ಸಾಧ್ಯವಾಗುವಂತೆ ಮಾಡುತ್ತದೆ.

ಏಪ್ರಿಲ್ 25, 1907.

*

ವೇದಾಂತಿಯಾದ ಆದರ್ಶ ಪುರುಷ ಹರ್ಷವನ್ನು ಕೂಡಲೆ ಸ್ವೀಕರಿಸುವಂತೆ ನೋವನ್ನೂ ಸ್ವೀಕರಿಸುತ್ತಾನೆ, ಪ್ರೇಮ, ಮರ್ಯಾದೆ, ಕರುಣೆ ಇವುಗಳನ್ನು ಶಾಂತಿಯಿಂದ ಸ್ವೀಕರಿಸುವ ರೀತಿಯಲ್ಲಿ ದ್ವೇಷ, ಅಪಚಾರ, ಅಪಮಾನ ಮತ್ತು ಅನ್ಯಾಯ ಇವುಗಳನ್ನೂ ಸ್ವೀಕರಿಸುತ್ತಾನೆ. ಜೀವನವನ್ನು ಎದುರಿಸುವ ಧೈರ್ಯದಿಂದ ಮೃತ್ಯುವನ್ನೂ ಎದುರಿಸುತ್ತಾನೆ. ಏಕೆಂದರೆ ಎಲ್ಲ ವಸ್ತು ವಿಷಯಗಳಲ್ಲಿ ಅವನು ವಿಶ್ವವನ್ನು ಆಳುವ ಪ್ರಬಲ ದೈವೀ ಸಂಕಲ್ಪವನ್ನು ನೋಡುವನು. ಬೆದರಿಕೆ ಮತ್ತು ದುರ್ದೈವ ಇಲ್ಲವೆ ಮನುಷ್ಯ ಅಥವಾ ಪ್ರಕೃತಿ ಅವನಿಗೆ ಕೊಟ್ಟ ಹೊಡೆತಗಳು, ಇಲ್ಲವೆ ಅವನವೇ ಆದ ಪಾಪಗಳು ಮತ್ತು ವಿಫಲತೆಗಳು ಇವುಗಳಿಂದ ಅವನು ಭಯಭೀತನಾಗುವುದಿಲ್ಲ. ಆದರೆ ಪರಮೋಚ್ಚ ದೈವೀ ಸಂಕಲ್ಪ ತನಗೆ ಹೆಜ್ಜೆ ಇರಿಸಲು ಮಾರ್ಗದರ್ಶನ ಮಾಡುತ್ತದೆ ಎಂಬ ಅಂತರ್ಗತ ನಂಬಿಕೆಯಿಂದ ನೇರವಾಗಿ ಮುಂದೆ ಸಾಗುತ್ತಾನೆ. ಮತ್ತು ತನ್ನ ಎಡವುವಿಕೆಗಳು ಕೂಡ ಗುರಿಯನ್ನು ತಲುಪಲು ಅವಶ್ಯವಾಗಿರುತ್ತವೆ ಎಂದು ಅವನು ನಂಬುತ್ತಾನೆ. ಅವನ ಯೋಗವು ಪರಿಪೂರ್ಣವಾಗಿದ್ದರೆ, ಅವನ ನಂಬಿಕೆ ಹಾಗೂ ನಿವೃತ್ತಿ ಕೂಡ ಪರಿಪೂರ್ಣವಾಗಿ ಸ್ಥಿರ ಮತ್ತು ಬಲವತ್ತರವಾಗಿರುತ್ತದೆ, ಆದರೆ ಕರ್ಮಯೋಗಿಯ ನಂಬಿಕೆ ಮತ್ತು ನಿವೃತ್ತಿ ನಿಷ್ಕ್ರಿಯ ಹಾಗೂ ದುರ್ಬಲ

ಶರಣಾಗತಿಯ ರೀತಿಯವಾಗಿರುವುದಿಲ್ಲ. ತನ್ನ ವೇದನೆಗಳಲ್ಲಿ ಹಾಗೂ ಪತನದಲ್ಲಿ ಅವನು ಭಗವಂತನನ್ನು ಕಂಡುಕೊಂಡರೆ, ಅನ್ಯಾಯವನ್ನು, ದುಷ್ಟವಾದದ್ದನ್ನು ವಿರೋಧಿಸುವುದರಲ್ಲಿಯೂ ಕೂಡ ಅವನನ್ನು ಕಾಣುತ್ತಾನೆ, ಆ ವಿರೋಧ ಸ್ವಾರ್ಥ ಮತ್ತು ಭಾವೋದ್ರೇಕಗಳ ಆಜ್ಞೆಗೆ ಒಳಗಾಗಿರುವುದಿಲ್ಲ, ಆದರೆ ಅದನ್ನು ಸರಿಯಾದುದಕ್ಕಾಗಿ, ಸತ್ಯಕ್ಕಾಗಿ ಮತ್ತು ನೈತಿಕ ಕ್ರಮಬದ್ಧತೆಯನ್ನು ನಿರ್ವಹಿಸುವುದಕ್ಕಾಗಿ ಕೈಕೊಳ್ಳಲಾಗಿರುತ್ತದೆ, ಇದೆಲ್ಲದರ ಮೇಲೆ ಜನರ ಜೀವನದ ಸ್ಥಿರತೆ ಹಾಗೂ ಸಂತೋಷ ಅವಲಂಬಿಸಿರುತ್ತವೆ. ಅವನ ವಿರೋಧ, ಅವನ ಉಳಿದೆಲ್ಲ ಕ್ರಿಯೆಯ ಹಾಗೆ ನಿರ್ಭಯತೆ ಮತ್ತು ದೇವ ಸದೃಶ ಧೈರ್ಯಗಳ ಕುರುಹನ್ನು ಹೊಂದಿರುತ್ತದೆ.

**(1/289–90, 27/269–70)** **– ಶ್ರೀ ಅರವಿಂದರು**

*

## ಶ್ರೀ ಅರವಿಂದರ ಮಾಂತ್ರಿಕ ನುಡಿಗಳು

ಎಲ್ಲ ಭಯ, ವಿಪತ್ತು ಮತ್ತು ಗಂಡಾಂತರ ಇವುಗಳ ವಿರುದ್ಧ ಯುದ್ಧ ನಡೆಸುವ ರೀತಿಯಲ್ಲಿ ಸುಸಜ್ಜಿತರಾಗಿ ಜೀವನದುದ್ದಕ್ಕೂ ಹೆಜ್ಜೆ ಇರಿಸಲು, ಒಂದು ಇನ್ನೊಂದರೊಂದಿಗೆ ಕೂಡಿ ಸಾಗುವ ಎರಡು ವಿಷಯಗಳಿವೆ, ಅವೆಂದರೆ– ಶ್ರೀಮಾತೆಯ ಕೃಪೆ ಮತ್ತು ನಿಮ್ಮ ವತಿಯಿಂದ ನಂಬಿಕೆ, ನಿಷ್ಕಾಪಟ್ಯ ಮತ್ತು ಸಮರ್ಪಣ ಇರುವ ಆಂತರಿಕ ಸ್ಥಿತಿ. ನಿಮ್ಮ ನಂಬಿಕೆ ಪರಿಶುದ್ಧವಾಗಿರಲಿ, ಬಿಚ್ಚು ಮನಸ್ಸಿನದಾಗಿರಲಿ, ಪರಿಪೂರ್ಣವಾಗಿರಲಿ. ಮಾನಸಿಕ ಹಾಗೂ ಪ್ರಾಣಿಕ ಸತ್ತೆಗಳಲ್ಲಿ ಅಹಂಕಾರದಿಂದ ಕೂಡಿದ ನಂಬಿಕೆ, ಮಹತ್ವಾಕಾಂಕ್ಷೆ, ಅಭಿಮಾನ, ಜಂಬ, ಮಾನಸಿಕ ಉದ್ಧಟತನ, ಪ್ರಾಣಿಕ ಸ್ವ–ಸಂಕಲ್ಪ, ವೈಯಕ್ತಿಕ ಬೇಡಿಕೆ, ನಿಮ್ನ ಸ್ವಭಾವದ ಕ್ಷುದ್ರ ತೃಪ್ತಿಗಳಿಗಾಗಿ ಆಸೆ ಇವುಗಳಿಂದ ಕಲಂಕಿತವಾದ ಇದೆಲ್ಲ ಕೆಳಮಟ್ಟದ, ಹೊಗೆ ಕವಿದ, ಮಬ್ಬಾದ ಜ್ವಾಲೆ, ಅದು ಸ್ವರ್ಗದತ್ತ ಮೇಲ್ಗಡೆ ಮುಖಮಾಡಿ ಬೆಳಗಲಾರದು. ಕೇವಲ ದೈವೀ ಕಾರ್ಯಕ್ಕಾಗಿ ಮತ್ತು ಭಗವಂತನ ಪ್ರಕಟಣೆಗೆ ಸಹಾಯಕವಾಗಲಿ ಎಂದು ನಿಮಗೆ ಜೀವನವನ್ನು ಕೊಡಲಾಗಿದೆ. ದೈವೀ ಪ್ರಜ್ಞೆಯ ಪರಿಶುದ್ಧತೆ, ಶಕ್ತಿ, ಪ್ರಕಾಶ, ವಿವೇಕ, ಸ್ಥಿರತೆ, ಆನಂದ ಇವುಗಳಿಗಾಗಿ ಹಾಗೂ ನಿಮ್ಮನ್ನು ಪರಿವರ್ತನೆಗೆ ಒಳಪಡಿಸುವುದಕ್ಕಾಗಿ ಹಾಗೂ ನಿಮ್ಮ ಮನಸ್ಸು, ಪ್ರಾಣ ಹಾಗೂ ದೇಹಗಳನ್ನು ಪರಿಶುದ್ಧಗೊಳಿಸುವುದಕ್ಕಾಗಿ ಒತ್ತಾಯದ ಹೊರತಾಗಿ ಬೇರಾವ ಆಸೆಯೂ ಬೇಡ. ದೈವಿಕವಾದ, ಆಧ್ಯಾತ್ಮಿಕವಾದ ಮತ್ತು ಅತಿಮಾನಸದ್ದಾದ ಸತ್ಯದ ಸಿದ್ಧಿಯ



ಹೊರತಾಗಿ ಬೇರಾವುದನ್ನೂ ಬೇಡುವುದು ಬೇಡ, ಹಾಗೆಯೇ ಆ ಸತ್ಯವನ್ನು ಪೃಥ್ವಿಯ ಮೇಲೆ, ನಿಮ್ಮಲ್ಲಿ, ಕರೆಬಂದವರಲ್ಲಿ, ಆಯ್ದುಕೊಳ್ಳಲಾದವರಲ್ಲಿ ಸಿದ್ಧಿಸಿಕೊಳ್ಳುವುದರ ಹೊರತಾಗಿ ಮತ್ತು ವಿರೋಧಿ ಶಕ್ತಿಗಳ ಮೇಲೆ ಜಯ ಸಾಧಿಸುವುದಕ್ಕಾಗಿ ಅವಶ್ಯವಾದ ಸ್ಥಿತಿಗಳನ್ನು ಸೃಷ್ಟಿಸುವುದರ ಹೊರತಾಗಿ ಇನ್ನಾವುದನ್ನೂ ಬೇಡುವುದು ಬೇಡ.

ನಿಮ್ಮ ನಿಷ್ಕಾಪಟ್ಯ ಮತ್ತು ಸಮರ್ಪಣ ಕೃತಕವಲ್ಲದ್ದೂ, ಇಡಿಯಾದದ್ದೂ ಆಗಿರಲಿ. ನಿಮ್ಮನ್ನು ನೀವು ಕೊಟ್ಟುಕೊಂಡಾಗ ಯಾವ ಬೇಡಿಕೆ, ಕರಾರು, ಕಾದಿರಿಸಿಕೊಳ್ಳುವಿಕೆ ಇಲ್ಲದ ಹಾಗೆ ಸಂಪೂರ್ಣವಾಗಿ ಕೊಟ್ಟುಕೊಳ್ಳಿರಿ, ಅದರಿಂದಾಗಿ ನಿಮ್ಮಲ್ಲಿ ಇರುವುದೆಲ್ಲವೂ ಶ್ರೀಮಾತೆಯವರಿಗೆ ಸೇರಿದ್ದಾಗುವುದು ಮತ್ತು ಯಾವುದೂ ಅಹಂಕಾರಕ್ಕಾಗಲಿ ಇಲ್ಲವೆ ಇನ್ನಾವುದೋ ಸಾಮರ್ಥ್ಯಕ್ಕಾಗಲಿ ಉಳಿದುಕೊಳ್ಳದಂತಾಗುವುದು.

ನಿಮ್ಮ ನಂಬಿಕೆ, ನಿಷ್ಕಾಪಟ್ಯ ಹಾಗೂ ಸಮರ್ಪಣ ಸಂಪೂರ್ಣವಾಗುತ್ತ ಹೋಗುತ್ತಿದ್ದಂತೆ ದೈವೀಕೃಪೆ ಹಾಗೂ ರಕ್ಷಣೆಗಳೂ ಹೆಚ್ಚುತ್ತ ಹೋಗುತ್ತವೆ. ದೈವೀಕೃಪೆ ಹಾಗೂ ರಕ್ಷಣೆ ನಿಮ್ಮೊಂದಿಗಿದ್ದಾಗ ನಿಮ್ಮನ್ನು (ಯೋಗ್ಯವಲ್ಲದ) ಯಾವುದು ತಟ್ಟಬಲ್ಲದು? ಮತ್ತು ನಿಮಗೆ ಭಯವನ್ನುಂಟು ಮಾಡುವಂತಹರು ಯಾರಿರುತ್ತಾರೆ? ಅದರ ಅಲ್ಪ ಮಾತ್ರದ್ದೂ ಕೂಡ ನಿಮ್ಮನ್ನು ಎಲ್ಲ ತೊಂದರೆಗಳಿಂದ, ಅಡೆತಡೆಗಳಿಂದ ಹಾಗೂ ಅಪಾಯಗಳಿಂದ ಪಾರುಮಾಡುವುದು. ನಿಮ್ಮನ್ನು ಸುತ್ತುವರಿದ ಪೂರ್ತಿ ದೈವೀ ಸಾನ್ನಿಧ್ಯದಿಂದ ನೀವು (ಆಧ್ಯಾತ್ಮಿಕ) ಮಾರ್ಗದಲ್ಲಿ ಸುರಕ್ಷಿತವಾಗಿ ಸಾಗಿ ಹೋಗಬಹುದು, ಏಕೆಂದರೆ ಆ ದೈವೀ ಸಾನ್ನಿಧ್ಯ ಶ್ರೀಮಾತೆಯವರದು, ಎಲ್ಲ ಪೀಡೆಗಳನ್ನು ನಿರ್ಲಕ್ಷಿಸುವಂತಹದು, ವಿರೋಧ ಎಷ್ಟೇ ಸಾಮರ್ಥ್ಯಪೂರ್ಣವಾಗಿರಲಿ, ಅದು ಈ ಲೋಕದ್ದೇ ಆಗಿರಲಿ ಇಲ್ಲವೆ ಇತರ ಲೋಕಗಳಿಗೆ ಸೇರಿದ್ದೇ ಆಗಿರಲಿ, ಆ ಸಾನ್ನಿಧ್ಯದ ಮೇಲೆ ಯಾವ ಪರಿಣಾಮವನ್ನೂ ಬೀರಲಾರದು. ಅದರ ಸ್ಪರ್ಶ ತೊಂದರೆಗಳು ಸದವಕಾಶಗಳಾಗುವಂತೆ, ವಿಫಲತೆ ಯಶಸ್ಸಾಗುವಂತೆ, ದೌರ್ಬಲ್ಯ ವಿಫಲವಾಗದ ಬಲವಾಗುವಂತೆ ಮಾರ್ಪಾಡು ಮಾಡಬಲ್ಲದು, ಏಕೆಂದರೆ ಶ್ರೀಮಾತೆಯವರ ಕೃಪೆ ಪರಮೋಚ್ಚನ ಅನುಮತಿ ಇದ್ದ ಹಾಗೆ, ಇಂದಾಗಲಿ ಇಲ್ಲವೆ ನಾಳೆಯಾಗಲಿ ಅದರ ಪರಿಣಾಮ ಖಚಿತ, ಅದು ಶಾಸನ ರೀತಿಯದು ಮತ್ತು ಎದುರಿಸಲಾಗದಂತಹದು.

**– ಶ್ರೀ ಅರವಿಂದರು**

## ವಾರ್ತಾಪತ್ರ

### ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ದಿನಾಂಕ 01–01–2013 ರಂದು ಶ್ರೀ ಅರವಿಂದ ಸಂಕೀರ್ಣ ಮತ್ತು ಮೀರಾಂಬಿಕಾ ಸ್ಕೂಲ್ ಫಾರ್ ನ್ಯೂ ಏಜ್ ವತಿಯಿಂದ ಸಂಸ್ಥಾಪಕರ ದಿನ ಹಾಗೂ ನೂತನ ವರ್ಷದ ಆಚರಣೆ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಶ್ರೀ ಅರವಿಂದ ಸಂಕೀರ್ಣ, ಸಿಬ್ಬಂದಿವರ್ಗ ಮತ್ತು ಮಾತಾರವಿಂದರ ಭಕ್ತವೃಂದದವರು ಸಂಸ್ಥಾಪಕರನ್ನು ಸನ್ಮಾನಿಸಿದರು. ಸಂಸ್ಥೆಯ ಅಧ್ಯಕ್ಷರು ಮತ್ತು ಶಾಲಾ ಆಡಳಿತಾಧಿಕಾರಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಶಾಲಾ ಶಿಕ್ಷಕ ವೃಂದದವರು ಕಾರ್ಯಕ್ರಮವನ್ನು ನಿರೂಪಿಸಿದರು.



## REVISION OF THE SOCIETY'S MEMBERSHIP FEES IN INDIA

### With effect from 1st January, 2013

| Membership Options | Period | India Rs. | By Air Mail US $ |
|---|---|---|---|
| Member without Magazine | 1 Year | 30.00 | |
| Member with Magazine | 1 Year | 180.00 | 25.00 |
| " | 3 Years | 520.00 | 75.00 |
| " | 5 Years | 860.00 | 125.00 |
| * Donor Member | 10 Years | 4000.00 | 375.00 |
| * Institutional Member | 1 Year | 1500.00 | 250.00 |
| * Corporate Member | 20 Years | 25000.00 | 3000.00 |



*"I have a sweet little Mother Who lives in my heart,*
*We are so happy together, we shall never part."*

- The Mother

**RNI No. 22511/1971**
No. of Pages **48 + 4 (Cov. Page)**
KAR Reg No : CPMG/KA/BGS/368/2012-2014
Permitted to Post 10th of Every Month. Reg. Valid till : 31-12-2014
Licensed to Post at MBC, Bangalore GPO, Bangalore - 560 001

ಶ್ರೀ ಅರವಿಂದ ಸಂಕೀರ್ಣದಲ್ಲಿ ನಿರ್ಮಿಸಲಾಗಿರುವ ಅತಿಥಿ ಗೃಹವು ಈಗಾಗಲೇ ತಿಳಿಸಿರುವಂತೆ ಗುರುಬಂಧುಗಳ ಉಪಯೋಗಕ್ಕಾಗಿ ತೆರೆಯಲಾಗಿದೆ. ಈ ಅತಿಥಿ ಗೃಹದಲ್ಲಿ ತಂಗಲು ಬರುವ ಗುರು-ಬಂಧುಗಳ ಅನುಕೂಲಕ್ಕಾಗಿ ಊಟ ಮತ್ತು ವಸತಿ ವ್ಯವಸ್ಥೆಯನ್ನು ಕೂಡ ಸೂಕ್ತ ದರಗಳಲ್ಲಿ ಅನುವುಗೊಳಿಸಲಾಗಿದೆ. ಶ್ರೀ ಅರವಿಂದ ಸೊಸೈಟಿ ಸದಸ್ಯರುಗಳಿಗೆ ರಿಯಾಯಿತಿಯಲ್ಲಿ ವಸತಿ ಊಟಗಳ ವ್ಯವಸ್ಥೆ ಇದೆ. ಇದಕ್ಕಾಗಿ ಸದಸ್ಯರು ತಮ್ಮ ಚಾಲ್ತಿಯಲ್ಲಿರುವ ಸದಸ್ಯತ್ವದ ಚೀಟಿಯನ್ನು ತೋರಿಸಬೇಕಾಗುತ್ತದೆ.

**ತತ್ಸಂಬಂಧ ಸಂಪರ್ಕಿಸಬೇಕಾದ ವಿಳಾಸ :**

ಆ್ಯಡ್‌ಮಿನಿಸ್ಟ್ರೇಟಿವ್ ಮ್ಯಾನೇಜರ್
ಶ್ರೀ ಅರವಿಂದ ಸಂಕೀರ್ಣ, ಶ್ರೀ ಅರವಿಂದ ಮಾರ್ಗ
ಜೆ.ಪಿ.ನಗರ ಮೊದಲನೇ ಹಂತ, ಬೆಂಗಳೂರು - 560 078
ದೂರವಾಣಿ : 080-22449882, 22459268

Ed. : Dr. K.S. Amur, M.Sc., PhD, Pub : Ajit S. Sabnis.
Ptd. by M/s Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bangalore - 560 078. Phone : 080 - 2244 9882.